
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 08
ರೂ. 2.00

19 ಫೆಬ್ರವರಿ 1995



"ಗ್ರಾಮೀಣ ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕೃಷಿ ನೀತಿ ಅಳವಡಿಸಿ"

ಸರಕಾರಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ಮನವಿ

ಕರ್ನಾಟಕದ ಕೃಷಿ ಉತ್ಪಾದನೆ ೭೦ರ ದಶಕದಿಂದ ಸ್ಥಗಿತಗೊಂಡಿದೆ. ಇತ್ತ ಕಾಂಗ್ರೆಸ್(ಐ) ನೇತೃತ್ವದ ಭಾರತ ಸರಕಾರದ ಹೊಸ ಕೃಷಿ ನೀತಿಯೂ ಐ.ಎಂ.ಎಫ್/ ವಿಶ್ವ ಬ್ಯಾಂಕ್ ನಿರ್ದೇಶನಗಳ ಭಾಗವಾಗಿದ್ದು ದೇಶಕ್ಕೆ ಮಾರಕವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಅತ್ತ ಪಶ್ಚಿಮ ಬಂಗಾಳದಲ್ಲಿ ಕೃಷಿ ಉತ್ಪಾದನೆಯಲ್ಲಿನ ಪ್ರಗತಿ ಇಡೀ ದೇಶದ ಗಮನ ಸೆಳೆದಿದೆ. ಇಂತಹ ಸನ್ನಿವೇಶದಲ್ಲಿ ರಾಜ್ಯದ ಜನತೆ ಕಾಂಗ್ರೆಸ್ಸಿನ ಧೋರಣೆಯನ್ನು ಧಿಕ್ಕರಿಸಿ ಜನತಾದಳವನ್ನು ಬೆಂಬಲಿಸಿದ್ದಾರೆ. ಜನತಾದಳ ಸರಕಾರ ಜನಪರವಾದ, ವಿಶಿಷ್ಟವಾಗಿ ಕೃಷಿ ಹಾಗೂ ಕೃಷಿಕರ ಪರವಾದ ಧೋರಣೆಗಳನ್ನು ಜ್ಯಾರಿಗೊಳಿಸುವ ಮುಖಾಂತರ ರಾಜ್ಯದ ಕೃಷಿ ಅಭಿವೃದ್ಧಿಗೆ, ಆಹಾರ ಧಾನ್ಯದ ಹೆಚ್ಚಳಕ್ಕೆ, ಗ್ರಾಮೀಣ ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸ್ಪಷ್ಟವಾದ ಕೃಷಿ ಧೋರಣೆಯನ್ನು ಅಳವಡಿಸಬೇಕು, ಈ ಪ್ರಕ್ರಿಯೆಯಲ್ಲಿ ರೈತ ಸಂಘಟನೆಗಳನ್ನು ಒಳಗೊಳ್ಳಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಕರ್ನಾಟಕದ ಮುಖ್ಯ ಮಂತ್ರಿಗಳಿಗೆ ಮನವಿ ಮಾಡಿದೆ.

ಈ ಮನವಿ ಪತ್ರ ಭಾರತ ಸರಕಾರದ ಹೊಸ ಕೃಷಿ ನೀತಿ ಮಾರಕ ಪರಿಣಾಮಗಳನ್ನು ಸ್ಥೂಲವಾಗಿ ಉಲ್ಲೇಖಿಸುತ್ತಾ, ರಾಜ್ಯದಲ್ಲಿ ಕೃಷಿ ಹಾಗೂ ಕೃಷಿಕರ ಪರಿಸ್ಥಿತಿಯ ಒಂದು ಚಿತ್ರ ನೀಡುತ್ತಾ, ರಾಜ್ಯದಲ್ಲಿ ಹೊಸ ಆರ್ಥಿಕ ನೀತಿ ಹಾಗೂ ಹೊಸ ಕೃಷಿ ನೀತಿ ಯಾವ ರೀತಿ ರೈತ-ವಿರೋಧಿಯಾಗಿ ಜ್ಯಾರಿಗೊಳ್ಳುತ್ತಿದೆ ಎಂದು ವಿವರಿಸಿದೆ. ಯಾವ ಅವಧಿಯಲ್ಲಿ ಕರ್ನಾಟಕದಲ್ಲಿ ಕೃಷಿ ಉತ್ಪಾದನೆ ಸ್ಥಗಿತವಾಗಿ ಇಡೀ ದೇಶದ ಕೃಷಿ ಉತ್ಪಾದನೆಯ ಬೆಳವಣಿಗೆಯ ವೇಗ ಇಳಿಮುಖವಾಗಿದೆಯೋ ಅದೇ ಅವಧಿಯಲ್ಲಿ ೧೯೮೦ರ ಹಾಗೂ ೧೯೯೦ರ ದಶಕದಲ್ಲಿ ಪಶ್ಚಿಮ ಬಂಗಾಳದ ಕೃಷಿಯ ಉತ್ಪಾದನೆಯ ಬೆಳವಣಿಗೆ ಕಾಂಗ್ರೆಸ್ ಹೊಸ ಕೃಷಿ ನೀತಿಗೆ ಪರ್ಯಾಯವಾದ ಕೃಷಿ ಬೆಳವಣಿಗೆಯ ಮಾರ್ಗವನ್ನು ಹಾಕಿ ಕೊಟ್ಟಿದೆ ಎಂದು ಅಂಕೆ-ಸಂಖ್ಯೆಗಳನ್ನು ನೀಡಿರುವ ಕರ್ನಾಟಕ ಪ್ರಾಂತ ರೈತ ಸಂಘದ ಮನವಿ ಈ ಕಾರಣದಿಂದಾಗಿ ಕೃಷಿ ಧೋರಣೆಯನ್ನು ರೂಪಿಸುವಾಗ ರಾಜ್ಯದ ರೈತರ, ಕೃಷಿ ಕೂಲಿಕಾರರ ಹಿತದ ದೃಷ್ಟಿಯಿಂದ ಭಾರತ ಸರಕಾರದ ಹೊಸ ಕೃಷಿ ಧೋರಣೆಯ ಮಾರಕಾಂಶಗಳನ್ನು ಪ್ರತಿಭಟಿಸಬೇಕು, ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಯಶಸ್ವಿ ಕೃಷಿ ಸಾಧನೆಗಳನ್ನು ಅಳವಡಿಸಿಕೊಳ್ಳಬೇಕು ಎಂದು ಮನವಿ ಮಾಡಿದೆ.

ಈ ಹಿನ್ನೆಲೆಯಲ್ಲಿ ಭೂಮಿ ಪ್ರಶ್ನೆ, ನೀರಾವರಿ ಪ್ರಶ್ನೆ, ಕೃಷಿ ಆಧಾರಿತ ಉದ್ದಿಮೆ ಕ್ಷೇತ್ರ,ಕೃಷಿಗೆ ವಿದ್ಯುತ್ ಪೂರೈಕೆ, ಬಡ

ಪುಟ 3 ನೋಡಿ

ಕಾಂಗ್ರೈ ಜಾಡಿನಲ್ಲಿಯೇ?

ರಾಜ್ಯದ ಜನತಾ ದಳದ ಮುಖ್ಯಮಂತ್ರಿಗಳು, ವಿದೇಶ ಪ್ರಯಾಣದಿಂದ ಮರಳಿ ಬಂದ ಮೇಲೆ ವಿದೇಶೀ ಬಂಡವಾಳಿಗರನ್ನು, ಹಾಗೂ ಬಹುರಾಷ್ಟ್ರೀಯ ಕಂಪೆನಿಗಳನ್ನು ರಾಜ್ಯಕ್ಕೆ ಆಹ್ವಾನಿಸುವ ಉತ್ಸುಕತೆ ಹಾಗೂ ಹೂವು, ಹಣ್ಣು ತರಕಾರಿ ಬೆಳೆಯಲು ರಫ್ತು ಆಧಾರಿತ ಬೆಳೆಗೆ ಪ್ರೋತ್ಸಾಹ, ಉದ್ದಿಮೆಗಳ ಅನುಕೂಲಕ್ಕಾಗಿ ಭೂಮಿತಿ ಕಾಯ್ದೆಗೆ ತಿದ್ದುಪಡಿ ತರುವುದಾಗಿ ಹೇಳಿಕೆ ನೀಡಿರುವುದು, ಜನತಾದಳ ಸರ್ಕಾರ, ರೈತರ ಅಭಿವೃದ್ಧಿಗೆ ಈ ಮುಂಚೆ ಕೊಟ್ಟ ಆಶ್ವಾಸನೆಗಳನ್ನು ಈಡೇರಿಸುವ ಬದಲು, ಹಿಂದಿನ ಕಾಂಗ್ರೆಸ್ ಸರಕಾರ ರೂಢಿಸಿದ ಹೊಸ ಕೃಷಿ ನೀತಿಯ ಜಾಡಿನಲ್ಲಿಯೇ ಹೋಗುವ ಸಾಧ್ಯತೆಗಳು ಕಂಡು ಬರುತ್ತಿವೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಟೀಕಿಸಿದೆ.

ಮುಖ್ಯಮಂತ್ರಿಗಳು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಪ್ರತಿನಿಧಿಗಳನ್ನು ಕರೆದು ಚರ್ಚೆ ನಡೆಸಿ, ಸರಕಾರದ ಧೋರಣೆಗಳ ಬಗ್ಗೆ ಬಂದ ಅನುಮಾನ ನಿವಾರಣೆ ಮಾಡಲು ಮುಂದಾಗಬೇಕೆಂದು ಅದು ಮನವಿ ಮಾಡಿದೆ.

XV ನೇ
ಸಿಪಿಐ(ಎಂ) ಮಹಾಧಿವೇಶನ
ಚಂಡೀಗಢ, ಏಪ್ರಿಲ್ 3-8, 1995

15ನೇ ಮಹಾಧಿವೇಶನದ ಸ್ವಾಗತ ಸಮಿತಿ ರಚನೆ


ಚಂಡೀಗಢದಲ್ಲಿ ಸಿಪಿಐ(ಎಂ)ನ ೧೫ನೇ ಮಹಾಧಿವೇಶನ ನಡೆಸಲು ಸಿದ್ಧತೆ ಭರದಿಂದ ಸಾಗಿದೆ. ಇಡೀ ಪಕ್ಷದ ಸಂಘಟನೆ ಈ ಸಿದ್ಧತಾ ಕಾರ್ಯಕ್ರಮಗಳಲ್ಲಿ ಈಗ ಮಗ್ನವಾಗಿದೆ. ಇದಕ್ಕಾಗಿ ೧೩೧ ಸದಸ್ಯರಿರುವ ಒಂದು ಸ್ವಾಗತ ಸಮಿತಿ ರಚನೆಗೊಂಡಿದೆ. ಕಾಂ. ಮಂಗತ್‌ರಾಮ್ ಪಾಸ್ಲಾ ಈ ಸಮಿತಿಯ ಅಧ್ಯಕ್ಷರು. ಜನವರಿ ೩೦ ರಂದು ಸೇರಿದ್ದ ಪಕ್ಷದ ಸದಸ್ಯರ ಹಾಗೂ ಹಿತೈಷಿಗಳ ಸಭೆಯೊಂದರಲ್ಲಿ ಇದನ್ನು ರಚಿಸಲಾಯಿತು. ಒಂದು ಸಾವಿರಕ್ಕೂ ಹೆಚ್ಚು ಮಂದಿ ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್, ಮಂಗತ್‌ರಾಮ್ ಪಾಸ್ಲಾ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಬಾಬಾ ಭಗತ್ ಸಿಂಗ್ ಬಿಲ್ಗಾ ಹಾಗೂ ಹರ್ಕನ್‌ವಾಲ್ ಸಿಂಗ್ ಈ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಸಿಪಿಐ(ಎಂ) ಪಕ್ಷದ 15ನೇ ರಾಜ್ಯ ಸಮ್ಮೇಳನ

ಸಿಪಿಐ(ಎಂ) ಪಕ್ಷದ 15ನೇ ರಾಜ್ಯ ಸಮ್ಮೇಳನ 1995 ಫೆಬ್ರವರಿ 24ರಿಂದ 27 ರವರೆಗೆ ಗುಲ್ಬರ್ಗದಲ್ಲಿಯ ಶಾನಭಾಗ ಫೆಸ್ಟಿವಲ್ ಪ್ಯಾಲೇಸ್‌ನಲ್ಲಿ ಸೇರುತ್ತದೆ. ಸಮ್ಮೇಳನದ ಸ್ಥಳ ಗುಲ್ಬರ್ಗ ಬಸ್ ನಿಲ್ದಾಣದ ಹತ್ತಿರವಿದೆ. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಛೇರಿ(ಮಹಮ್ಮದ್ ಹಸನ್ ಖಾನ್ ಸ್ಮಾರಕ ಭವನ) ರೈಲ್ವೇ ಸ್ಟೇಶನಿನ ಹತ್ತಿರವಿದೆ.

ದಿನಾಂಕ 24ರಂದು ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ಇರುತ್ತದೆ. ಬೇರೆ ಜಿಲ್ಲೆಗಳಿಂದ ಬರುವ ಪ್ರತಿನಿಧಿಗಳು ತಾ. 24ರಂದು ನೇರವಾಗಿ ಪಕ್ಷದ ಜಿಲ್ಲಾ ಕಛೇರಿಗೆ ಬರಬೇಕಾಗಿ ವಿನಂತಿ.

ವಾರದ ವ್ಯಂಗ್ಯ ಚಿತ್ರ



ವರ್ತಮಾನ

ಇತಿಹಾಸ

ಶಿಕ್ಷಣ, ಆರೋಗ್ಯ ಸೇವೆಗಳ ವ್ಯಾಪಾರೀಕರಣದ ದುಷ್ಟತನಕ್ಕೊಂದು ಉದಾಹರಣೆ

ಬಡವರ ಮೂತ್ರಪಿಂಡವೂ ಸೂಪರ್ ಲಾಭದ ಸರಕು!



ಈ ಶೋಷಣಾ ವ್ಯವಸ್ಥೆಯಲ್ಲಿ ಇವರ ಶ್ರಮಶಕ್ತಿಯಂತೆ ಮೂತ್ರಪಿಂಡವೂ ಬಹಳ ಅಗ್ಗ- ಸುಲಿಗೆ ಕೋರರ ಸಂಪತ್ತಿನ ಆಧಾರ.

ಬೆಂಗಳೂರಿನಲ್ಲಿ ಇತ್ತೀಚೆಗೆ ಬಯಲಿಗೆ ಬಂದ ಮೂತ್ರಪಿಂಡ ಕಳವು ಜಾಲ ಜನಗಳನ್ನು ತಲ್ಲಣಗೊಳಿಸಿದೆ. ತಮಿಳುನಾಡಿನ ವೇಲು ತನ್ನ ಮೂತ್ರಪಿಂಡವನ್ನು ತನಗೆ ತಿಳಿಸದೆಯೇ 'ದಾನ' ಪಡೆದು ಮೋಸ ಮಾಡಲಾಗಿದೆ ಎಂದು ಪೋಲೀಸರಿಗೆ ದೂರಿತ್ತಂದಿನಿಂದ ಇದುವರೆಗೆ ಸುಮಾರು ೩೦ ಇಂತಹ ದೂರುಗಳು ಪೋಲೀಸರಿಗೆ ಬಂದಿವೆಯಂತೆ. ಆದರೆ ಕಳೆದ ಐದು ವರ್ಷಗಳಿಂದ ನಡೆಯುತ್ತಿರುವ ಈ 'ದರೋಡೆ'ಯಲ್ಲಿ ಸುಮಾರು ೧೦೦೦ ರಷ್ಟು ಮಂದಿ ತಮ್ಮ ಒಂದು ಮೂತ್ರಪಿಂಡವನ್ನು ಕಳಕೊಂಡಿರಬಹುದೆಂದು ಊಹಿಸಲಾಗಿದೆ. ಇವರಲ್ಲಿ ಕೆಲವರು ಪ್ರಾಣಕಳಕೊಂಡಿದ್ದಾರೆ ಎಂದೂ ಪೋಲೀಸರ ತನಿಖೆಯಿಂದ ತಿಳಿದು ಬಂದಿದೆ. ಹಲವು ವಿಶೇಷಜ್ಞ ಡಾಕ್ಟರುಗಳು, ಇತರ ತಜ್ಞ ವೈದ್ಯಕೀಯ ಸಿಬ್ಬಂದಿಯ ಜತೆ, ನಗರದ ಪ್ರತಿಷ್ಠಿತವೆನಿಸಿದ ಖಾಸಗೀ ಆಸ್ಪತ್ರೆಗಳು, ನರ್ಸಿಂಗ್ ಹೋಮ್ ಗಳೂ ಈ ಜಾಲದಲ್ಲಿ ಪಾಲ್ಗೊಂಡಿರುವುದು, ಇಬ್ಬರು ತಜ್ಞರು ಇನ್ನೂ ತಲೆಮರೆಸಿಕೊಳ್ಳಲು ಸಾಧ್ಯವಾಗಿರುವುದು ಜನಗಳಲ್ಲಿ ಆರೋಗ್ಯ ವ್ಯವಸ್ಥೆಯ ಬಗ್ಗೆ ಭೀತಿಯುಂಟುಮಾಡಿದೆ.

ವಾಸ್ತವವಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಬಗ್ಗೆ ಭೀತಿ ಪಡುವಂತಹ ವಾತಾವರಣ ಹೊಸದೇನಲ್ಲ. ಉದಾರೀಕರಣ, ಖಾಸಗೀಕರಣ, ಮುಕ್ತ ಮಾರುಕಟ್ಟೆ ಇತ್ಯಾದಿಗಳಿಂದ ಮಾತ್ರ ಇಂತಹ ದಕ್ಷ ಸೇವೆಗಳನ್ನು ಒದಗಿಸಲು ಸಾಧ್ಯ, ಸರಕಾರ ತನ್ನ ಪಾತ್ರವನ್ನು ಶಿಕ್ಷಣದಲ್ಲಿ, ಆರೋಗ್ಯದಲ್ಲಿ ಇತರ ಸಾಮಾಜಿಕ ವಲಯಗಳಲ್ಲಿ ಮಿತಿಗೊಳಿಸಬೇಕು ಎಂಬ ವಾತಾವರಣದಲ್ಲಿ ಬಡವಿಭಾಗಗಳಿಗೆ ಈ ಭೀತಿ ಇನ್ನಷ್ಟು ಹೆಚ್ಚುತ್ತದೆ ಎಂದು ಪ್ರಗತಿಪರರು ಎಚ್ಚರಿಕೆ ನೀಡುತ್ತಾ ಬಂದಿದ್ದಾರೆ. ಈ ಘಟನೆ ಅದಕ್ಕೊಂದು ಉದಾಹರಣೆಯಷ್ಟೆ.


ಈ 'ದರೋಡೆ' ಗೆ ಬಲಿಯಾದವರಲ್ಲಿ ಬಹಳ ಮಂದಿ ಸಮಾಜದ ಬಡವಿಭಾಗಗಳಿಗೆ ಸೇರಿದವರು, ಶಿಕ್ಷಣದಿಂದ, ಆರ್ಥಿಕ ಸಾಧನಗಳಿಂದ ವಂಚಿತರಾದವರು ಎಂಬುದು ಎಲ್ಲರ ಗಮನಕ್ಕೂ ಬರುವಷ್ಟು ಸ್ಪಷ್ಟವಾಗಿದೆ. ಇನ್ನೊಂದೆಡೆ ಆರೋಗ್ಯವನ್ನೇ ವ್ಯಾಪಾರವನ್ನಾಗಿಸಿಕೊಂಡ ಖಾಸಗೀ ನರ್ಸಿಂಗ್ ಹೋಂಗಳು, ಖಾಸಗೀ ವೈದ್ಯರುಗಳು. ಈ ಖಾಸಗೀ ವೈದ್ಯರುಗಳಿಗೆ ತಮ್ಮ ಕ್ಷೇತ್ರದಲ್ಲಿನ ವಿಶೇಷ ತರಬೇತಿಯೇ ಮೂಲ ಸಾಧನ! ಮೋಸವೆಂಬುದು ವ್ಯಾಪಾರದಲ್ಲಿ ಸೂಪರ್ ಲಾಭಗಳಿಸುವುದರ ಮೂಲ ಮಂತ್ರವಂತೆ. ಇನ್ನೇನಿದೆ? ಮಾನವನ ದೇಹದ ಅಂಗಾಂಗಗಳನ್ನು ಬಂಡವಾಳಶಾಹೀ ವ್ಯವಸ್ಥೆ ಮಾರಾಟದ ಸರಕಾಗಿಸಿದೆ. ಅದರೊಂದಿಗೇ ಎಲ್ಲ ಮಾರುಕಟ್ಟೆಗಳಲ್ಲಿದ್ದಂತೆ ಈ ಮಾರಾಟದಲ್ಲೂ ಭ್ರಷ್ಟಾಚಾರಧ ವ್ಯವಸ್ಥೆಯನ್ನು ಅದು ಅಳವಡಿಸಿದೆ. ಮೂತ್ರಪಿಂಡಗಳಿಗೆ ಅಂಗಾಂಗಗಳ ಮಾರುಕಟ್ಟೆಯುಗಿ 'ಡಿಮಾಂಡ್' ಬಹಳ. ಅದರಿಂದಾಗಿ ಬೆಲೆಯೂ ಹೆಚ್ಚು, ಆ ಬೆಲೆಯನ್ನು ತೆರಬಲ್ಲ ಖಾಸಗೀ ಆರ್ಥಿಕ ಶಕ್ತಿ ಪಡಕೊಂಡವರೂ ಇದ್ದಾರೆ, ಆದ್ದರಿಂದ ಆ 'ಡಿಮ್ಯಾಂಡ್'ನ್ನು ಕಳ್ಳತನದಿಂದ ಪೂರೈಸುವ ದಳ್ಳಾಳಿಗಳನ್ನೂ ಈ ವ್ಯವಸ್ಥೆ ತಾನೇ ಸೃಷ್ಟಿಸುತ್ತದೆ.

ಕಳೆದ ಸಂಚಿಕೆಯ 'ವಾರದ ನುಡಿ'ಯಲ್ಲಿ ಹೇಳಿರುವಂತೆ 'ಉದಾರೀಕರಣ' ನೀತಿಯ ಭಾಗವಾಗಿ, 'ಜಾಗತೀಕರಣ'ದ ಭಾಗವಾಗಿ ಬಂದಿರುವ ನೀತಿಗಳಲ್ಲಿ 'ಹಂಚಿಕೊಳ್ಳುವ ಬದಲು ಬಾಚಿಕೊಳ್ಳುವ ಪ್ರವೃತ್ತಿ'ಗೆ ಹೆಚ್ಚಿನ ಇಂಬು, ಪ್ರೋತ್ಸಾಹ ಮರ್ಯಾದೆ ದೊರೆಯುತ್ತಿರುವುದನ್ನು ನಾವು ಕಣ್ಣಾರೆ ನೋಡುತ್ತಿದ್ದೇವೆ. ನಿಜ, ಇದು ನರಸಿಂಹರಾಯರ ಹೊಸ ಆರ್ಥಿಕ ನೀತಿಗಳಿಂದಲೇ ಹುಟ್ಟಿದ್ದಲ್ಲ, ಆದರೆ ನಮ್ಮ ದೇಶದಲ್ಲಿ ನಿರ್ಮಾಣಗೊಳ್ಳುತ್ತಿದ್ದ ಬಂಡವಾಳಶಾಹಿಯಲ್ಲಿ ಬೆಳೆಯುತ್ತಿದ್ದ ಈ ಪ್ರವೃತ್ತಿಗೆ ಈಗ ಮುಕ್ತ ಪ್ರೋತ್ಸಾಹ ದೊರೆಯುತ್ತಿದೆ. ಇಲ್ಲಿ ನೈತಿಕತೆ ಇತ್ಯಾದಿ ಅಂಶಗಳೂ ಸಂಪೂರ್ಣ ಮೂಲೆಗುಂಪಾಗುತ್ತಿದೆ. ಬಾಚಿಕೊಳ್ಳುವುದೇ ಜಾಣತನದ ಲಕ್ಷಣ ಎಂದು ರಾಜರೋಷವಾಗಿ ಸಾರಲಾಗುತ್ತಿದೆ. ಇಂತಹ ವಾತಾವರಣದಲ್ಲಿ ಡಾ. ಸಿದ್ದರಾಜುಗಳು, ಡಾ. ಆದಿಲ್ ಗಳು, ಡಾ. ದಿಲೀಪ್ ಪಾಟೀಲ್ ಗಳು ಸಂಪತ್ತು ಲೂಟಿ ಮಾಡಲು ತಮ್ಮ ವಿಶೇಷ ನಿಪುಣತೆಗಳನ್ನು ಬಳಸಿಕೊಂಡಿದ್ದರೆ ಆಶ್ಚರ್ಯವೇನು?

ನಿಜವಾಗಿ ಈ ಕಳುವಿನ ಜಾಲದಿಂದ ಆತಂಕಿತರಾದವರು ನಮ್ಮ ಶಿಕ್ಷಣದ ವ್ಯಾಪಾರೀಕರಣದಿಂದಲೂ ಅಷ್ಟೇ ತಲ್ಲಣಗೊಳ್ಳಬೇಕು. ಏಕೆಂದರೆ ಶಿಕ್ಷಣದ ವ್ಯಾಪಾರೀಕರಣ- ಮುಖ್ಯವಾಗಿ ವೈದ್ಯಕೀಯ ಶಿಕ್ಷಣದ ವ್ಯಾಪಾರೀಕರಣವೇ ಈ ಸಿದ್ದರಾಜುಗಳನ್ನು, ಆದಿಲ್ ಗಳನ್ನು ದಿಲೀಪ್ ಪಾಟೀಲ್ ಗಳನ್ನು ಹಾಗೂ ನಾಯಿಕೊಡೆಗಳಂತೆ ಹರಡಿರುವ ಖಾಸಗೀ ನರ್ಸಿಂಗ್ ಹೋಂ ಗಳನ್ನು, ಕ್ಲಿನಿಕಲ್ ಲ್ಯಾಬೊರೇಟರಿಗಳನ್ನು ಸೃಷ್ಟಿಸಿರುವುದು. ಶಿಕ್ಷಣದ, ಅದರಲ್ಲೂ ವೈದ್ಯಕೀಯ ಶಿಕ್ಷಣದ ವ್ಯಾಪಾರೀಕರಣದ ತಳದಲ್ಲಿರುವ ಅನೈತಿಕತೆಯೇ, ಸುಲಿಗೆ ಕೋರತನವೇ ಈ ಮೂತ್ರಪಿಂಡ ಕಳವಿನ ಭಯಂಕರ ಜಾಲದ ಮೂಲದಲ್ಲಿರುವ ಅನೈತಿಕತೆ ಹಾಗೂ ಸುಲಿಗೆಕೋರತನ ಕೂಡಾ.

ಈ ಭಯಂಕರ ಜಾಲವೂ ಕ್ರಮೇಣ ಮುಚ್ಚಿಹಾಕಲ್ಪಡುತ್ತದೆ, ಅಪರಾಧಿಗಳು ಶಿಕ್ಷೆ ಅನುಭವಿಸುವುದಿಲ್ಲ ಎಂಬ ಭಾವನೆಯೂ ಜನಗಳಲ್ಲಿ ಹರಡಿದೆ. ಇದು ಕೂಡಾ ನಮ್ಮ ದೇಶದಲ್ಲಿ ಈಗಿರುವ ಭ್ರಷ್ಟ ವಾತಾವರಣದಲ್ಲಿ ಸಹಜ ತಾನೇ!

ಎಡ ಜಾತ್ಯಾತೀತ ಪರ್ಯಾಯ ಕಟ್ಟಲು



(ಮುಂದುವರಿದ ಭಾಗ)

ಸೋವಿಯತ್ ಒಕ್ಕೂಟದ ಛಿದ್ರತೆ ಮತ್ತು ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ನಂತರ ಜಾಗತಿಕ ಕಮ್ಯುನಿಸ್ಟ್ ಆಂದೋಲನ ಗಂಭೀರ ಹಿನ್ನಡೆಯನ್ನು ಅನುಭವಿಸಿತು. ಅನೇಕ ಕಮ್ಯುನಿಸ್ಟ್ ಪಕ್ಷಗಳು ಕುಸಿಯಲು ಆರಂಭವಾಗಿ ಸೈದ್ಧಾಂತಿಕ ಗೊಂದಲ ಉಂಟಾಯಿತು. ಅನೇಕ ಕಮ್ಯುನಿಸ್ಟ್ ಪಕ್ಷಗಳು ತಮ್ಮ ಹೆಸರನ್ನೇ ಕೈಬಿಟ್ಟು ಬೇರೆ ಹೆಸರನ್ನು ಇಟ್ಟುಕೊಂಡವು.

ಈ ಎಲ್ಲಾ ಬದಲಾವಣೆಗಳಿಂದ ಸಿಪಿಐ(ಎಂ) ಮೇಲೆ ಯಾವುದೇ ಪರಿಣಾಮ ಉಂಟಾಗಲಿಲ್ಲ ಎಂದೇನೂ ನಾವು ಹೇಳಿಕೊಳ್ಳುವುದಿಲ್ಲ, ಆದರೆ ಪರಿಣಾಮ ತುಲನಾತ್ಮಕವಾಗಿ ಕಡಿಮೆಯಾಗಿತ್ತು, ಇದಕ್ಕೆ ಕಾರಣವಿದೆ. ಭಾರತದ ಪರಿಸ್ಥಿತಿ ಮಾತ್ರವಲ್ಲದೆ ಜಾಗತಿಕ ಪರಿಸ್ಥಿತಿಗೆ ಸಂಬಂಧಿಸಿದಂತೆ ಕೂಡ ನಾವು ಮಾರ್ಕ್ಸ್‌ವಾದ-ಲೆನಿನ್ ವಾದದ ಆಧಾರದ ಮೇಲೆ ಸ್ವತಂತ್ರವಾದ ನಿಲುವನ್ನು ತಳೆಯುತ್ತಿದ್ದೆವು. ಕಾರ್ಮಿಕ ವರ್ಗ, ರೈತರು, ವಿದ್ಯಾರ್ಥಿ, ಯುವಜನರು, ಮಹಿಳೆಯರು ಮತ್ತು ಇತರ ಜನ ವಿಭಾಗಗಳ ಹೋರಾಟಗಳನ್ನು ಸತತವಾಗಿ ನಡೆಸುತ್ತಿದ್ದೆವು. ವಿಶ್ವದಲ್ಲಾದ ಬದಲಾವಣೆಯಿಂದಾದ ಒತ್ತಡವನ್ನು ತಡೆಯಲು ಹಾಗೂ ಪಕ್ಷದಲ್ಲಿ ಏಕತೆಯನ್ನು ಉಳಿಸಿಕೊಳ್ಳಲು ಇದು ನೆರವಾಯಿತು.

ಈ ಮೂರು ವರ್ಷಗಳಲ್ಲಿ ನಮ್ಮ ಸದಸ್ಯತ್ವ ಏರಿದೆ. ಕಾರ್ಲ್ ಮಾರ್ಕ್ಸ್ 175ನೇ ಜನ್ಮದಿನಾಚರಣೆ ಅಂಗವಾಗಿ 1993 ಮೇ 5 ರಿಂದ 7ರವರೆಗೆ ನಾವು ಕಲ್ಕತ್ತದಲ್ಲಿ ಅಂತರ್ರಾಷ್ಟ್ರೀಯ ವಿಚಾರಸಂಕಿರಣವೊಂದನ್ನು ನಡೆಸಿದ್ದು ಬಹುಶಃ ಆಕಸ್ಮಿಕ ವಿದ್ಯಮಾನವಲ್ಲ, ಯಾವ ಕಮ್ಯುನಿಸ್ಟ್ ಪಕ್ಷಗಳು ತಮ್ಮ ಹೆಸರನ್ನು ಬದಲಾಯಿಸಿಲ್ಲವೋ ಮತ್ತು ಸಿದ್ಧಾಂತಗಳಿಗೆ ಬದ್ಧವಾಗಿದ್ದವೋ, ಮಾರ್ಕ್ಸ್‌ವಾದಿ- ಲೆನಿನ್‌ವಾದಿ ಸಿದ್ಧಾಂತಗಳಿಗೆ ಬದ್ಧವಾಗಿದ್ದವೋ ಅಂಥ ಪಕ್ಷಗಳನ್ನು ಮಾತ್ರ ನಾವು ಸಂಕಿರಣಕ್ಕೆ ಆಹ್ವಾನಿಸಿದ್ದೆವು.

ಆಹ್ವಾನಿಸಿದ ಎಲ್ಲಾ 30 ಪಕ್ಷಗಳು ನೇರವಾಗಿ ಪಾಲ್ಗೊಂಡು ಪ್ರಬಂಧಗಳನ್ನು ಅಥವಾ ಸಂದೇಶಗಳನ್ನು ಕಳಿಸಿ ಹೀಗೆ ನಾನಾ ರೀತಿಯಲ್ಲಿ ನಮ್ಮ ಆಹ್ವಾನವನ್ನು ಮನ್ನಿಸಿದವು. ಇವೆಲ್ಲಾ ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಯ ರಕ್ಷಣೆಗೆ ನಮ್ಮ ಸತತ ಹೋರಾಟ ಹಾಗೂ ಭಾರತದ ಜನರ ಮಧ್ಯೆ ನಮ್ಮ ಬಲದ ಹೆಚ್ಚಳದ ಪರಿಣಾಮವಾಗಿದೆ.

ಎಡ-ಜಾತ್ಯಾತೀತ ಪರ್ಯಾಯ ಕಟ್ಟಲು ಪ್ರಯತ್ನ

ಭಾರತದ ಆಂತರಿಕ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿ ಹೇಳುವುದಾದರೆ ಸಿಪಿಐ(ಎಂ) ತನ್ನ 13ನೇ ಮಹಾಧಿವೇಶದ ನಂತರದ ಅವಧಿಯಲ್ಲಿ ಕಾಂಗ್ರೆಸ್(ಐ)ನ ಜನ ವಿರೋಧಿ ನೀತಿಗಳು, ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುವ ಕಾಂಗ್ರೆ ಧೋರಣೆ ಮತ್ತು ಉನ್ನತ ಮಟ್ಟಗಳಲ್ಲಿ ತಾಂಡವವಾಡುತ್ತಿರುವ ಭ್ರಷ್ಟಾಚಾರ- ಇವುಗಳನ್ನು ಬಹಿರಂಗಪಡಿಸುವ ದಿಸೆಯಲ್ಲಿ ನಿರಂತರವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು. ಬೋಫೋರ್ಸ್ ಹಗರಣಕ್ಕೆ ವಿಶೇಷ ಗಮನ ಕೊಟ್ಟಿತು.

ಎಡ-ಜಾತ್ಯಾತೀತ ಮೈತ್ರಿಕೂಟವೊಂದರ ರಚನೆಗಾಗಿ ಬಂಡವಾಳಶಾಹಿ ಪ್ರತಿಪಕ್ಷಗಳು ಅಂದರೆ ಜನತಾದಳ ಮತ್ತು ರಾಷ್ಟ್ರೀಯ ರಂಗದ ಇತರ ಸದಸ್ಯ ಪಕ್ಷಗಳೊಂದಿಗೆ ಸಿಪಿಐ(ಎಂ) ಸಮಾಲೋಚನೆಗಳನ್ನು ನಡೆಸಿತು. ಇಂಥ ಮೈತ್ರಿಕೂಟ ಬಿಜೆಪಿಯಂಥ ಕೋಮುವಾದಿ ಪಕ್ಷಗಳೊಂದಿಗೆ ಯಾವುದೇ ರೀತಿಯ ಸಂಬಂಧವನ್ನು ಹೊಂದಿರಬಾರದೆಂದು ಪಕ್ಷ ಪ್ರತಿಪಾದಿಸಿತು. ದುರದೃಷ್ಟವಶಾತ್, ಪ್ರತಿಪಕ್ಷಗಳ ಮತ ಒಡೆಯಬಾರದು ಹಾಗೂ ಕಾಂಗ್ರೆಯನ್ನು ಸೋಲಿಸಬೇಕು ಎಂಬ ಉದ್ದೇಶದಿಂದ ಬಂಡವಾಳಶಾಹಿ ಜಾತ್ಯಾತೀತ ಪ್ರತಿಪಕ್ಷಗಳು ಈ ನಿಲುವನ್ನು ಒಪ್ಪಲಿಲ್ಲ, ಹೀಗೆ ಈ ಪಕ್ಷಗಳು ಕಾಂಗ್ರೆಯನ್ನು ಸೋಲಿಸುವ ಯತ್ನದಲ್ಲಿ ಕೋಮುವಾದಿ ಬಿಜೆಪಿಯೊಂದಿಗೆ ರಾಜಿ ಮಾಡಿಕೊಂಡವು. ಇದರಿಂದ ಬಿಜೆಪಿ ಶಕ್ತಿ ಹೆಚ್ಚಿಸಿಕೊಳ್ಳಲು ನೆರವಾಯಿತು ಎಂಬುದು ಅನಂತರ ಚುನಾವಣೆ ಫಲಿತಾಂಶಗಳು ತೋರಿಸಿಕೊಟ್ಟಿತು.

1989ರ ಲೋಕಸಭೆ ಚುನಾವಣೆಗಳಲ್ಲಿ ಕಾಂಗ್ರೆಸ್(ಐ) ಸೋತಿತು. ಆದರೆ ಯಾವುದೇ ಮೈತ್ರಿಕೂಟಕ್ಕೆ ಸ್ಪಷ್ಟ ಬಹುಮತ ಸಿಗಲಿಲ್ಲ, ಸರಕಾರ ರಚಿಸಲು ನಾವು ವಿ.ಪಿ. ಸಿಂಗ್‌ಗೆ ಬೆಂಬಲವನ್ನು ಘೋಷಿಸಿದೆವು. ನಾವು ಈ ನಿಲುವನ್ನು ತೆಗೆದುಕೊಂಡಿದ್ದರಿಂದ ವಿ.ಪಿ. ಸಿಂಗ್ ಸರಕಾರಕ್ಕೆ ಬೆಂಬಲ ಕೊಡುವುದು ಬಿಜೆಪಿಗೆ ಅನಿವಾರ್ಯವಾಯಿತು. ಈ ರೀತಿಯಾಗಿ ಕಾಂಗ್ರೆಸ್ಸೇತರ ಸರಕಾರ ರಚನೆಯಾಯಿತು. ಸರಕಾರವನ್ನು ಸೇರುವ ಬಿಜೆಪಿ ಯೋಜನೆ ನಮ್ಮ ಪಕ್ಷದ ನಿಲುವಿನಿಂದಾಗಿ ವಿಫಲವಾಯಿತು.

ವಿ.ಪಿ.ಸಿಂಗ್ ಸರಕಾರ ಮತ್ತು ಅದರ ಪತನ; ಸಿಪಿಐ(ಎಂ).ಪಾತ್ರ

ರಾಷ್ಟ್ರೀಯ ರಂಗ ಸರಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುವಾಗಲೇ ಸರಕಾರದ ಕೆಲವು ಜನ ವಿರೋಧಿ ಆರ್ಥಿಕ ನೀತಿಗಳನ್ನು ಸಿಪಿಐ(ಎಂ) ಪ್ರಬಲವಾಗಿ ವಿರೋಧಿಸಿತು. ವಾಸ್ತವವಾಗಿ ಈ ನೀತಿಗಳು ಕಾಂಗ್ರೆಸ್(ಐ) ನೀತಿಗಳ ಮುಂದುವರಿಕೆಯಾಗಿದ್ದವು. ಸರಕಾರಕ್ಕೆ ಸಂಸತ್ತಿನಲ್ಲಿ ಸೋಲು ಉಂಟಾಗುವುದನ್ನು ತಡೆಯಲು ನಮ್ಮ ಪಕ್ಷ ಬದ್ಧವಾಗಿತ್ತು.

ಕೋಮು ಗಲಭೆಗಳನ್ನು ಹುಟ್ಟುಹಾಕಿದ 'ರಥಯಾತ್ರೆ' ನಡೆಸುತ್ತಿದ್ದ ತನ್ನ ನಾಯಕ ಎಲ್.ಕೆ.ಅಡ್ವಾನಿಯವರನ್ನು ಬಂಧಿಸಿದ್ದು ರಾಷ್ಟ್ರೀಯ ರಂಗ ಸರಕಾರಕ್ಕೆ ತಾನು ನೀಡಿದ್ದ ಬೆಂಬಲವನ್ನು ವಾಪಸು ಪಡೆಯಲು ಬಿಜೆಪಿಗೆ ನೆವವಾಯಿತು. 'ರಥಯಾತ್ರೆ' ವಿರುದ್ಧ ಕೈಗೊಂಡ ಕ್ರಮದ ವಿಚಾರದಲ್ಲಿ ಕಾಂಗ್ರೆಸ್(ಐ) ಸಿಂಗ್ ಸರಕಾರಕ್ಕೆ ಬೆಂಬಲ ಕೊಡುವ ಬದಲು ಸರಕಾರವನ್ನು ಉರುಳಿಸಲು ಬಿಜೆಪಿಯೊಂದಿಗೆ ಕೈ ಜೋಡಿಸಿತು. 1990 ನವೆಂಬರ್ 7 ರಂದು ಬಿಜೆಪಿ ಮಂಡಿಸಿದ್ದ ಅವಿಶ್ವಾಸ ಗೊತ್ತುವಳಿಯನ್ನು ಕಾಂಗ್ರೆ ಬೆಂಬಲಿಸಿತು. ರಾಷ್ಟ್ರೀಯರಂಗ ಸರಕಾರ ಪತನಗೊಂಡಿತು. ಪಕ್ಷಾಂತರಿಗಳ ಚಂದ್ರಶೇಖರ್ ಸರಕಾರಕ್ಕೆ ಬೆಂಬಲ ಕೊಟ್ಟ ಕಾಂಗ್ರೆ ನಾಲ್ಕೇ ತಿಂಗಳಲ್ಲಿ ಅದನ್ನೂ ಉರುಳಿಸಿತು.

ಅದರ ನಂತರ ನಡೆದ ಚುನಾವಣೆಗಳಲ್ಲಿ ಕೂಡ ಕಾಂಗ್ರೆಸ್(ಐ) ಗೆ ಬಹುಮತ ಸಿಗಲಿಲ್ಲ, ಭಾರತವನ್ನು ಅಸ್ಥಿರಗೊಳಿಸಲು ಸಾಮ್ರಾಜ್ಯಶಾಹಿ ಯತ್ನದ ಅಂಗವಾಗಿ ನಡೆದ ರಾಜೀವ್ ಗಾಂಧಿ ಹತ್ಯೆ ಚುನಾವಣೆಯ ಎರಡನೇ ಹಂತದಲ್ಲಿ ಕಾಂಗ್ರೆ ಪರ ಅನುಕಂಪದ ಅಲೆಯನ್ನು ಎಬ್ಬಿಸಿದರೂ ಅದು ಬಹುಮತ ಗಳಿಸುವಲ್ಲಿ ವಿಫಲವಾಯಿತು. 119 ಸ್ಥಾನಗಳನ್ನು ಗಳಿಸಿದ ಬಿಜೆಪಿ ಭಾರೀ ಚುನಾವಣಾ ಲಾಭ ಪಡೆಯಿತು. ಮಧ್ಯಪ್ರದೇಶ, ರಾಜಾಸ್ಥಾನ, ಹಿಮಾಚಲ ಪ್ರದೇಶಗಳಲ್ಲಿ ಅಲ್ಲದೆ ಇತ್ತರ ಪ್ರದೇಶದಲ್ಲೂ ಕೂಡ ಬಿಜೆಪಿ ಸರಕಾರವನ್ನು ರಚಿಸಿತು.

ವಿ.ಪಿ. ಸಿಂಗ್ ಸರಕಾರದ ಅವಧಿಯಲ್ಲಿ ಭಾರೀ ವಿವಾದ ಮತ್ತು ಹಿಂಸೆಗೆ ಕಾರಣವಾದ ಮೀಸಲಾತಿ ಕುರಿತ ಮಂಡಲ್ ಆಯೋಗದ ವರದಿಯ ಅನುಷ್ಠಾನದ ವಿಷಯದ ಬಗ್ಗೆ ಸಿಪಿಐ(ಎಂ) ನೀತಿಬದ್ಧ ನಿಲುವನ್ನು ತಳೆಯಿತು.

ಇತರ ಹಿಂದುಳಿದ ವರ್ಗಗಳಿಗೆ (ಓಬಿಸಿ) ಮೀಸಲಾತಿ ನೀಡಬೇಕೆಂಬ ನಿರ್ಧಾರವನ್ನು ಎತ್ತಿ ಹಿಡಿದ ಸಿಪಿಐ(ಎಂ) ರಾಷ್ಟ್ರೀಯ ಒಮ್ಮತದ ಆಧಾರದಲ್ಲಿ ಇದನ್ನು ಜಾರಿಗೊಳಿಸಬೇಕು ಎಂದು ಹೇಳಿತು. ಕರ್ಪೂರಿ ಠಾಕೂರ್ ಸೂತ್ರ ಈ ಒಮ್ಮತಕ್ಕೆ ಆಧಾರ ಒದಗಿಸುತ್ತದೆ ಎಂದು ಅಭಿಪ್ರಾಯಪಟ್ಟಿತು. ಓಬಿಸಿಗಳಲ್ಲಿನ ಅತೀ ಹಿಂದುಳಿದ ವರ್ಗಗಳಿಗಾಗಿ ಆರ್ಥಿಕ ಮಾನದಂಡವನ್ನು ಪರಿಗಣಿಸಿದ್ದ ಕರ್ಪೂರಿ ಠಾಕೂರ್ ಸೂತ್ರ ಮೇಲ್ಜಾತಿಗಳಲ್ಲಿನ ಅತೀ ಹಿಂದುಳಿದ ಜನರಿಗೆ ಮೀಸಲು ಸೌಲಭ್ಯವನ್ನು ಕಲ್ಪಿಸಿತ್ತು. ಅಂತಿಮವಾಗಿ, ನಮ್ಮ ಪಕ್ಷದ ಈ ಸಲಹೆಯೇ ಪಿ.ವಿ.ನರಸಿಂಹರಾವ್ ಸರಕಾರದ ಅವಧಿಯಲ್ಲಿ ರಾಷ್ಟ್ರೀಯ ಸಹಮತ ರೂಪಿಸಲು ಆಧಾರವಾಯಿತು. ಅನಂತರ ಕೇಂದ್ರ ಸರಕಾರ ಪ್ರಕರಣವನ್ನು ಸುಪ್ರೀಂಕೋರ್ಟಿನ ಪರಿಶೀಲನೆಗೆ ಒಪ್ಪಿಸಿತು. ಓಬಿಸಿಗಳಿಗೆ ಶೇ.27 ಮೀಸಲಾತಿ ಸೌಲಭ್ಯವನ್ನು ಅನುಷ್ಠಾನ ಗೊಳಿಸಬೇಕು, ಆದರೆ ಅದು 'ಕೆನೆಪದರ'ಕ್ಕೆ (ಅಂದರೆ ಓಬಿಸಿಗಳಲ್ಲಿನ ಆರ್ಥಿಕ ಬಲಾಢ್ಯರು) ಅನ್ವಯಿಸಬಾರದು ಎಂದು ಸರ್ವೋಚ್ಚ ನ್ಯಾಯಾಲಯ ಅಭಿಪ್ರಾಯ ಪಟ್ಟಿತು. ನಮ್ಮ ಪಕ್ಷದ ನಿಲುಮೆ ಸರಿಯೆಂಬುದು ಇದರಿಂದ ಸ್ಪಷ್ಟವಾಯಿತು.

(ಮುಂದುವರಿಯುವುದು)

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಕರ್ನಾಟಕ ಸುದ್ದಿ ಸಮಾಚಾರ

ತುಮಕೂರು

ಕುಣಿಗಲ್: ರಾಷ್ಟ್ರದ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್(ಐ) ಸೋಲಲು ಕಾಂಗ್ರೆಸ್ (ಐ) ಅನುಸರಿಸಿದ ಜನವಿರೋಧಿ ನೀತಿಗಳೇ ಕಾರಣ. ಆ ನೀತಿಗಳನ್ನು ಜನರ ಮಧ್ಯೆ ಕೊಂಡೊಯ್ದು ಅದರಲ್ಲಿರುವ ಜನ ವಿರೋಧಿ -ದೇಶವಿರೋಧಿ ಅಂಶಗಳನ್ನು ಜನತೆಗೆ ತಿಳಿಸಿ ಹೋರಾಟ ರೂಪಿಸಲು ಎಡಪಕ್ಷಗಳು ಪಟ್ಟ ಶ್ರಮವೇ ಕರ್ನಾಟಕ ಹಾಗೂ ಆಂಧ್ರಗಳಲ್ಲಿ ಬದಲಾವಣೆ ಕಾಣಲು ಸಾಧ್ಯವಾದದ್ದು ಎಂದು ಸಿಪಿಐ(ಎಂ) ರಾಜ್ಯ ಮುಖಂಡರಾದ ಕಾಂ. ಎಸ್.ಸೂರ್ಯನಾರಾಯಣರಾವ್ ನುಡಿದರು. ಅವರು ಜನವರಿ 28-29ರಂದು ನಡೆದ 9ನೇ ಸಿಪಿಐ(ಎಂ) ಜಿಲ್ಲಾ ಸಮ್ಮೇಳನದ ಅಂಗವಾಗಿ ಕುಣಿಗಲ್‌ನಲ್ಲಿ 29ರಂದು ಸಂಜೆ ಏರ್ಪಡಿಸಿದ್ದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕಾಂ.ಬಡೆಸಾಬ್ ಅಧ್ಯಕ್ಷತೆ ವಹಿಸಿದ್ದರು, ಸಿಪಿಐ(ಎಂ) ಜಿಲ್ಲಾ ಮುಖಂಡ ಕಾಂ.ಹೆಚ್.ಸಿ. ಚೆನ್ನಪ್ಪ ರಾಜ್ಯ ಮುಖಂಡ ಕಾಂ.ವಿ.ಜೆ.ಕೆ. ನಾಯರ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಜನವರಿ 28-29ರಂದು ಕುಣಿಗಲ್ ನಲ್ಲಿ ನಡೆದ 9ನೇ ಸಿಪಿಐ(ಎಂ) ಜಿಲ್ಲಾ ಸಮ್ಮೇಳನದಲ್ಲಿ 10 ಜನರ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆಮಾಡಲಾಯಿತು. ಹೊಸ ಜಿಲ್ಲಾ ಕಾರ್ಯದರ್ಶಿಯಾಗಿ ಕಾಂ. ಬಿ. ಉಮೇಶ್‌ರವರನ್ನು ಆಯ್ಕೆ ಮಾಡಲಾಯಿತು.

ಶಿವಮೊಗ್ಗ

ಭದ್ರಾವತಿ: ಫೆಬ್ರವರಿ ೫ ರಂದು ಸಿಪಿಐ(ಎಂ) ಪಕ್ಷದ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಭದ್ರಾವತಿಯ ಪುರಭವನದಲ್ಲಿ ಕಾಂ. ಜಿ.ಶಿವಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕಾಂ. ಸಿ.ನಂಜುಂಡಪ್ಪನವರು ಸಮಾಜವಾದವೇ ಇಡೀ ಮಾನವ ಜನಾಂಗವನ್ನು ಸಂರಕ್ಷಿಸಬಲ್ಲದು. ಇನ್ನಾವುದೇ ವಾದಗಳಿಂದ ಸಾಧ್ಯವಿಲ್ಲವೆಂದು ಹೇಳಿದರು. ರಾಜ್ಯ ಸಮಿತಿ ಸದಸ್ಯರಾದ ಕಾಂ.ನಿತ್ಯಾನಂದ ಸ್ವಾಮಿ ಮಾತನಾಡಿ ಜನ ವೈದ್ಯರುಗಳನ್ನು ದೇವರೆಂದು ಭಾವಿಸಿದ್ದ ಆದರೆ ಮೂತ್ರಪಿಂಡ (ಕಿಡ್ನಿ) ಅಪಹರಣ ಇವೆಲ್ಲ ನೋಡಿದಾಗ ಜನರು ರೊಚ್ಚಿಗೇಳಬೇಕಾಗಿದೆ ಎಂದರು.

ಜಿಲ್ಲಾಸಮಿತಿಗೆ ಕಾಂ.ಎಸ್.ಬಿ. ಶಿವಶಂಕರ್, ಕಾಂ.ಸುಕುಮಾರನ್ ಕಾಂ.ಕೆ.ಎಂ. ಶ್ರೀನಿವಾಸ್, ಕಾಂ.ಎಲ್ ರಂಗೇಗೌಡ, ಕಾಂ.ಜಿ.ಶಿವಣ್ಣ, ಕಾಂ.ಎಲ್. ರಾಜು, ಕಾಂ. ರಾಘವೇಂದ್ರರಾವ್ ಆಯ್ಕೆಯಾದರು. ಜಿಲ್ಲಾ ಕಾರ್ಯದರ್ಶಿಯಾಗಿ ಎಸ್.ಬಿ. ಶಿವಶಂಕರ್ ಪುನರಾಯ್ಕೆಯಾದರು.

ಸಿಪಿಐ(ಎಂ) ಶಾಖಾ ಸಮ್ಮೇಳನಗಳು

ಜಾಲಹಳ್ಳಿ

ಜನವರಿ 17 ರಂದು ಪಕ್ಷದ ವಿದ್ಯಾರ್ಥಿ ಶಾಖಾ ಸಮ್ಮೇಳನ ಜಾಲಹಳ್ಳಿ ರೈತ ಸಂಘದ ಕಾರ್ಯಾಲಯದಲ್ಲಿ ಜರುಗಿತು. ಈ ಸಮ್ಮೇಳನವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಕರಿಯಪ್ಪ ಅಚ್ಚೊಳ್ಳಿ ಉದ್ಘಾಟಿಸಿ ಮಾತನಾಡಿದರು. ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಜಿ. ನಾಯಕ್ ಸಮ್ಮೇಳನದಲ್ಲಿ ಹಾಜರಿದ್ದರು. ಶಾಖಾ ಕಾರ್ಯದರ್ಶಿ ಪಿ.ಗಿರಿಯಪ್ಪ ವರದಿ ಮಂಡಿಸಿದರು. ಈವರಿದಿಯ ಮೇಲೆ ಪತ್ರಿನಿಧಿಗಳು ಚರ್ಚಿಸಿದರು. ಕೊನೆಯಲ್ಲಿ ಪಿ.ಗಿರಿಯಪ್ಪ ಅವರು ಶಾಖಾ ಕಾರ್ಯದರ್ಶಿಯಾಗಿ ಪುನಃರಾಯ್ಕೆಗೊಂಡರು.

ಯಶವಂತಪುರ

ಯಶವಂತಪುರ ಶಾಖೆಯ ಸಮ್ಮೇಳನವು ಜನವರಿ 29 ರಂದು ನಡೆಯಿತು. ಈ ಸಮ್ಮೇಳನದಲ್ಲಿ ಸಿಐಟಿಯು ಜಿಲ್ಲಾ ಕಾರ್ಯದರ್ಶಿಯಾದ ಕಾಂ. ಕೆ.ಎಸ್. ಸುಬ್ರಮಣ್ಯ ನಿರೀಕ್ಷಕರಾಗಿ ಭಾಗವಹಿಸಿದರು. ಸಮ್ಮೇಳನವು ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣದ ಮೂಲಕ ಆರಂಭಗೊಂಡು ಧ್ವಜಾರೋಹಣವನ್ನು ಕಾಂ.ಕೆ.ಎಸ್.ಎಸ್. ರವರು ನೆರವೇರಿಸಿದರು. ಕಾಂ.ಓ.ವಿ. ಕೃಷ್ಣಮೂರ್ತಿರವರ ಅಧ್ಯಕ್ಷತೆಯಲ್ಲಿ ನೆರವೇರಿದ ಸಮ್ಮೇಳನದಲ್ಲಿ ಕಾಂ. ಎನ್. ಮೋಹನ್ ಶಾಖಾ ಕಾರ್ಯದರ್ಶಿ ಹಿಂದಿನ ಮೂರುವರ್ಷದ ಕೆಲಸದ ಆಧಾರದ ಮತ್ತು ಮುಂದಿನ ಮೂರು ವರ್ಷಗಳ ಪಾರ್ಟಿಯ ಬೆಳವಣಿಗೆಯ ಕುರಿತು ಇಟ್ಟಿದ್ದ ವರದಿಯ ಮೇಲೆ ಚರ್ಚಿಸಲಾಯಿತು.

ಒಂಬತ್ತು ಸದಸ್ಯರನ್ನೊಳಗೊಂಡ ಈ ಶಾಖೆಯನ್ನು 15 ಸದಸ್ಯರನ್ನೊಳಗೊಂಡ ಪೂರ್ಣ ಶಾಖೆಯಾಗಿ ಪರಿವರ್ತಿಸಲು ಮತ್ತು ಮುಂದಿನ 3 ವರ್ಷಗಳಲ್ಲಿ ಈ ಪ್ರದೇಶದಲ್ಲಿ ಪೂರ್ಣ ಸದಸ್ಯರನ್ನೊಳಗೊಂಡ 10 ಶಾಖೆಯನ್ನು ಕಟ್ಟಲು, 500 ಹೊಸ ಪಾರ್ಟಿ ಹಿತೈಷಿಗಳನ್ನು ಮಾಡಲು ತೀರ್ಮಾನ ತೆಗೆದು ಕೊಳ್ಳಲಾಗಿದೆ.

ಜಿಲ್ಲಾ ಸಮ್ಮೇಳನಕ್ಕೆ 3 ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಗಿದೆ. ಕಾರ್ಯದರ್ಶಿಯಾಗಿ ಕಾಂ. ಎನ್. ಮೋಹನ್‌ರವರನ್ನು ಪುನರಾಯ್ಕೆ ಮಾಡಲಾಗಿದೆ.

"ಗ್ರಾಮೀಣ ಬಡವರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವ ಕೃಷಿ ನೀತಿ ಅಳವಡಿಸಿ"

ಪುಟ 1ರಿಂದ

ಹಾಗೂ ಮಧ್ಯಮ ರೈತರಿಗೆ ಕೃಷಿ ಸಲಕರಣೆಗಳ ಪೂರೈಕೆ, ಕೃಷಿ ಕೂಲಿಕಾರರ ವಿಶಿಷ್ಟ ಸಮಸ್ಯೆಗಳು, ನಾಗರಿಕ ಸೌಲಭ್ಯಗಳು, ಉತ್ಪಾದಕತೆ, ಭ್ರಷ್ಟಾಚಾರ ಮುಂತಾದ ಒಟ್ಟು 11 ಬೇಡಿಕೆಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸರಕಾರದ ಮುಂದಿಟ್ಟಿದೆ. ಡಂಕೆಲ್ ಪ್ರಸ್ತಾವಗಳನ್ನು ಜಾರಿಗೆ ತರಕೂಡದು, ರೈತರು ತಮ್ಮ ಬೇಡಿಕೆಗಳಿಂದಾಗಿ ಹೋರಾಡುವಾಗ ಹಾಕಿರುವ ಎಲ್ಲಾ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಎಂದೂ ರೈತ ಸಂಘ ಮನವಿ ಮಾಡಿದೆ.

ಭಾರತ ಸರಕಾರದ ಹೊಸ ಕೃಷಿ ನೀತಿ ಕೃಷಿಯ ಸಮಸ್ಯೆಗಳನ್ನಾಗಲೀ, ರೈತರ ಸಮಸ್ಯೆಗಳನ್ನಾಗಲಿ ಬಗೆ ಹರಿಸುವುದಿಲ್ಲ. ಬದಲಾಗಿ ಈ ಕ್ರಮಗಳು ಬಹುತೇಕ ರೈತರನ್ನು ದಿವಾಳಿಯೆಬ್ಬಿಸುತ್ತದೆ. ಗ್ರಾಮೀಣ ನಿರುದ್ಯೋಗವನ್ನು, ಗ್ರಾಮೀಣ ಬಡತನವನ್ನು ಹೆಚ್ಚಿಸುತ್ತವೆ. ದೇಶದ ಬೆಳೆ ಪದ್ಧತಿಯನ್ನೇ ಹಾಳುಗೆಡವಿ, ನಾವು ಆಮದಾದ ಆಹಾರಧಾನ್ಯಗಳ ಮೇಲೆ ಅವಲಂಬಿಸುವಂತೆ ಮಾಡುತ್ತದೆ, ಆಹಾರ ಧಾನ್ಯಗಳ ಬೆಲೆ ಏರುವಂತೆ ಮಾಡುತ್ತದೆ, ಇಡಿಯಾಗಿ ಕೃಷಿ ಕ್ಷೇತ್ರವೇ ಬಹುರಾಷ್ಟ್ರೀಯ ಕಂಪೆನಿಗಳು ಮತ್ತು ಸಾಮ್ರಾಜ್ಯಶಾಹಿಗಳ ಅಡಿಯಾಳಾಗುವಂತೆ ಮಾಡುತ್ತದೆ ಎಂದು ಮನವಿ ಪತ್ರ ಆತಂಕ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ಹೊಸ ಆರ್ಥಿಕ ನೀತಿಯ ಒಂದು ನೇರ ಪರಿಣಾಮವಾಗಿ ಬೇರೆ ರಾಜ್ಯಗಳಿಗಿಂತ ಹೆಚ್ಚಿದ್ದ ರಂಜಕ ಹಾಗೂ ಪೊಟಾಶ್ ರಸಗೊಬ್ಬರ ಬಳಕೆ 30-35 ಶೇ. ಇಳಿಮುಖವಾಗಿದೆ. ಜತೆಗೆ ಹೊಸ ಕೃಷಿ ನೀತಿಯ ಜ್ಯಾರಿಯಿಂದಾಗಿ ಖಾಸಗಿ ಬಂಡವಾಳಿಗರು, ಕೃಷಿಯೇತರ ಬಂಡವಾಳಿಗರು ದೊಡ್ಡ ಪ್ರಮಾಣದಲ್ಲಿ ಕೃಷಿ ಕ್ಷೇತ್ರವನ್ನು ಪ್ರವೇಶಿಸಲು ಅವಕಾಶ ಮಾಡಿಕೊಡಲಾಗುತ್ತಿದೆ. ಈ ಹೊಸ ಕೃಷಿ ನೀತಿ ಪೈಸ್ಟಾರ್‌ಗಳ ಸರಮಾಲೆ, ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಹೂ-ಹಣ್ಣುಗಳ ಮಾರುಕಟ್ಟೆ, ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಯ ಬಗ್ಗೆ ಮಾತನಾಡುತ್ತದೆಯೇ ಹೊರತು ಭೂ ಸುಧಾರಣೆ ಮಾಡಿ ಕೃಷಿಕರಿಗೆ ಭೂಮಿ ಕೊಡುವ ಯಾವುದೇ ಮಾತು ಅದರಲ್ಲಿ ನಿರೂಪಿತವಾಗಿಲ್ಲ ಎಂಬುದರತ್ತ ಕರ್ನಾಟಕ ಪ್ರಾಂತ ರೈತ ಸಂಘ ಮುಖ್ಯ ಮಂತ್ರಿಗಳ ಗಮನ ಸೆಳೆದಿದೆ. ಭೂಮಿತಿ ಕಾಯ್ದೆ ತಿದ್ದುಪಡಿಯಾಗಿರದಿದ್ದರೂ ಬೆಂಗಳೂರಿನ ಸುತ್ತ ಈಗಾಗಲೇ ದೊಡ್ಡ-ದೊಡ್ಡ ಕಂಪೆನಿಗಳು ಕೋಟಿಗಟ್ಟಲೆ ಹಣ ಸುರಿಯುತ್ತಿವೆ.

1970ರ ದಶಕದಿಂದಲೇ ರಾಜ್ಯದಲ್ಲಿ ಆರಂಭವಾದ ಕೃಷಿ ಉತ್ಪಾದನೆಯ ಸ್ಥಗಿತತೆ ಇನ್ನೂ ಹೋಗಿಲ್ಲ. 1984-85 ರಲ್ಲಿ 100 ಲಕ್ಷ ಟನ್ ಆಹಾರ ಧಾನ್ಯಗಳ ಗುರಿಯಿದ್ದರೂ ಈಗ 1994ರಲ್ಲಿ ಆ ಗುರಿಯನ್ನೇ 85 ಲಕ್ಷ ಟನ್‌ಗೆ ಇಳಿಸಲಾಯಿತು. ವಾಸ್ತವದಲ್ಲಿ ಈಗಿನ ಉತ್ಪಾದನೆ 65-75 ಲಕ್ಷ ಟನ್. 2000 ಇಸವಿಯ ವೇಳೆಗೆ ರಾಜ್ಯದ ಜನತೆಯ ಅವಶ್ಯಕತೆಯನ್ನು ಪೂರೈಸಬೇಕಾದರೆ 150 ಲಕ್ಷ ಟನ್ ಆಹಾರ ಉತ್ಪಾದನೆಯಾಗಬೇಕು. ಅಂದರೆ ಈಗಿನ ಉತ್ಪಾದನೆ ದ್ವಿಗುಣ ಗೊಳ್ಳಬೇಕು.

ಆದರೆ ಹೊಸ ಕೃಷಿ ನೀತಿ ಭೂಮಿಯನ್ನು ಆಹಾರೇತರ ಬೆಳೆಗಳತ್ತ ಸೆಳೆಯುವ ನೀತಿ ಅನುಸರಿಸುತ್ತಾ ಆಹಾರ ಧಾನ್ಯಗಳ ಬೆಳವಣಿಗೆಗೆ ಯಾವುದೇ ಗಮನ ನೀಡದಂತಹ, ಯಾವುದೇ ತಂತ್ರಜ್ಞಾನವನ್ನೂ ಬಳಸುವ ಯೋಚನೆ ಇಲ್ಲದ ನೀತಿಯನ್ನು ಅನುಸರಿಸಲಾಗುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಆಪಾದಿಸಿದೆ.

ಆದ್ದರಿಂದ ರಾಜ್ಯ ಸರಕಾರದ ಮುಂದೆ ರೈತರ, ಕೃಷಿ ಕೂಲಿಕಾರರ ಪರವಾಗಿ ಈ ಬೇಡಿಕೆಗಳನ್ನು ಮುಂದಿಟ್ಟು ತೀವ್ರ ಕಾರ್ಯಾಚರಣೆಗಿಳಿಯಲು ಕರ್ನಾಟಕ ಪ್ರಾಂತ ರೈತ ಸಂಘ ನಿರ್ಧರಿಸಿದೆ.

ಬೀಡಿ ಕಾರ್ಮಿಕರ ಸಮ್ಮೇಳನ

ಶಿರಾ: ಫೆಬ್ರವರಿ 1ರಂದು ಶಿರಾ ತಾಲೂಕು ಬೀಡಿ ಕಾರ್ಮಿಕರ ಸಮ್ಮೇಳನ ಹೆಚ್.ಸಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಮಿಕ ಮುಖಂಡರಾದ ಶ್ರೀ ಎಂ.ದಸ್ತಗೀರ್ ಹುಬ್ಬಳ್ಳಿಯ ಕಾರ್ಮಿಕ ಮುಖಂಡರಾದ ಮುಲ್ಲಾ ಶಿರಾ ಟೌನ್ ಮುನ್ಸಿಪಲ್ ಪ್ರಿಸಿಡೆಂಟ್ ಹಬೀಬುಲ್ಲಾ ಇವರುಗಳು ಕಾರ್ಮಿಕರನ್ನು ಕುರಿತು ಮಾತನಾಡುತ್ತಾ ಕನಿಷ್ಟ ಕೂಲಿ ಗುರ್ತಿನ ಚೀಟಿ ಪಡೆಯಲು ಕಾರ್ಮಿಕರು ಒಟ್ಟಾಗಿ ಹೋರಾಡಬೇಕೆಂದು ಅದಕ್ಕಾಗಿ ಕಾರ್ಮಿಕ ಸಂಘಟನೆಯನ್ನು ಬಲಪಡಿಸಬೇಕೆಂದು ತಿಳಿಸಿದರು. ಈ ಸಮ್ಮೇಳನದಲ್ಲಿ ಮಹಿಳಾ ಕಾರ್ಮಿಕರು ಒಳಗೊಂಡು ನೂರಾರು ಕಾರ್ಮಿಕರು ಭಾಗವಹಿಸಿದ್ದರು. ಆಯ್ಕೆಗೊಂಡ ನೂತನ ಸಮಿತಿ ಚನ್ನಪ್ಪ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ತಿಪ್ಪೆಸ್ವಾಮಿ, ಕಾರ್ಯದರ್ಶಿಯಾಗಿ ನಿಸಾರ್ ಅಹಮದ್, ಉಪಕಾರ್ಯದರ್ಶಿಯಾಗಿ ನರಸಿಂಹಮೂರ್ತಿ, ಖಜಾಂಚಿಯಾಗಿ ಸಗೀರಾಬಿ ಚುನಾಯಿತರಾದರು. ಇವರ ಜೊತೆಗೆ ೨೧ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು. ಕೊನೆಯಲ್ಲಿ ನಿಸಾರ್ ಅಹಮದ್ ವಂದನಾರ್ಪಣೆ ಮಾಡಿದರು.

ಪ್ರೆಸ್ ವರ್ಕರ್ಸ್ ಯೂನಿಯನ್ ಮಹಾಸಭೆ

ಉಡುಪಿ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್ (ಸಿಐಟಿಯು) ನ ನಾಲ್ಕನೇ ಮಹಾಸಭೆಯು ಜನವರಿ 26ರಂದು ಉಡುಪಿ ಸತ್ಯಮೂರ್ತಿ ಸಭಾ ಭವನದಲ್ಲಿ ಕಾಂ. ಪಿ. ವಿಶ್ವನಾಥ ರೈಯವರ ಅಧ್ಯಕ್ಷತೆಯಲ್ಲಿ ಜರುಗಿತು. ಕಾರ್ಯದರ್ಶಿ ಕಾಂ. ರಮೇಶ್ ಮೆಂಡನ್ ಕಳೆದ ಒಂದು ವರ್ಷದ ಚಟುವಟಿಕೆಗಳ ವರದಿ ಮಂಡಿಸಿದರು. ಕೋಶಾಧಿಕಾರಿ ಕಾಂ. ರಾಧಾಕೃಷ್ಣ ಭಟ್ ಲೆಕ್ಕಪತ್ರ ಮಂಡಿಸಿದರು. ಈ ಮಹಾಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ದ.ಕ. ಜಿಲ್ಲಾ ಸಿಐಟಿಯು. ಅಧ್ಯಕ್ಷ ಕಾಂ.ಬಿ.ಮಾಧವರವರು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಕಾಂ. ಪಿ. ವಿಶ್ವನಾಥ ರೈಯವರು ಮಾತಾಡಿ ಮುದ್ರಣ ಕೆಲಗಾರರು ತಮ್ಮ ಸಮಸ್ಯೆಗಳ ವಿರುದ್ಧ ಹೋರಾಡುವ ಒಟ್ಟಿಗೆ ಕಾನೂನಿನ ಕನಿಷ್ಟ ಸವಲತ್ತುಗಳಿಂದ ವಂಚಿತರಾಗಿರುವ ಇತರ ಕಾರ್ಮಿಕರ ಸಮಸ್ಯೆಗಳ ಬಗ್ಗೆಯೂ ಗಮನನೀಡಿ ಅವರನ್ನು ಸಂಘಟಿಸುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಮುಂದಿನ ಎರಡು ವರ್ಷಗಳಿಗೆ ಯೂನಿಯನ್‌ನ ಅಧ್ಯಕ್ಷರಾಗಿ ಕಾಂ. ಪಿ.ವಿಶ್ವನಾಥ ರೈ, ಕಾರ್ಯದರ್ಶಿಯಾಗಿ ರಮೇಶ್ ಮೆಂಡನ್, ಸಹ ಕಾರ್ಯದರ್ಶಿಗಳಾಗಿ ಚಂದ್ರಶೇಖರ್ ಸೇರಿಗಾರ, ಕೆ.ಅಶೋಕ ಶೆಟ್ಟಿ, ಕೋಶಾಧಿಕಾರಿಯಾಗಿ ರಾದಾಕೃಷ್ಣ ಭಟ್ ಮತ್ತು 5 ಜನ ಮಹಿಳೆಯರು ಸೇರಿ ಒಟ್ಟು 27 ಜನ ಸದಸ್ಯರ ಕಾರ್ಯಕಾರಿ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಭೆಯ ಆರಂಭದಲ್ಲಿ ಕಾರ್ಯದರ್ಶಿ ರಮೇಶ್ ಮೆಂಡನ್ ಸ್ವಾಗತಿಸಿದರು. ಕೊನೆಯಲ್ಲಿ ಚಂದ್ರಶೇಖರ ಸೇರಿಗಾರ ವಂದನಾರ್ಪಣೆ ಮಾಡಿದರು.

ಡಿವೈಎಫ್‌ಐ ಘಟಕದ ಸಮಾವೇಶ

ಜನವರಿ 22ರಂದು ಪೆರ್ಮುದೆ ಘಟಕದ ೪ನೇ ಸಮ್ಮೇಳನ ಜರುಗಿತು. ಸಮ್ಮೇಳನವನ್ನು ಉದ್ಘಾಟಿಸಿ ಭಾಷಣವನ್ನು ಜಿಲ್ಲಾ ಬೀಡಿ ಯೂನಿಯನ್ ಸದಸ್ಯರಾದ ಕಾಂ. ಸುಕುಮಾರ್ ನೆರವೇರಿಸಿದರು. ಸಮ್ಮೇಳನದಲ್ಲಿ ಡಿವೈಎಫ್‌ಐ ಜಿಲ್ಲಾ ಸಮಿತಿ ಉಪಾಧ್ಯಕ್ಷರಾದ ಹಾಗೂ ಬೆಳ್ತಂಗಡಿ ತಾಲೂಕು ಕಾರ್ಯದರ್ಶಿಯಾದ ನ್ಯಾಯವಾದಿ ಕಾಂ. ಬಿ.ಎಂ. ಭಟ್ ಉಪಸ್ಥಿತರಿದ್ದು ಪ್ರಸ್ತಾವನಾ ಭಾಷಣ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಘಟಕದ ಅಧ್ಯಕ್ಷರಾದ ಲಕ್ಷ್ಮಣಗೌಡ ವಹಿಸಿದ್ದರು. ಸ್ಥಳೀಯ ಸಮಸ್ಯೆಗಳಿಗೆ ಊರಿನ ಅಭಿವೃದ್ಧಿಗೆ ಸರಕಾರಕ್ಕೆ ಒತ್ತಡ ತರಲು ಡಿವೈಎಫ್‌ಐ ಹೋರಾಡಲು ತೀರ್ಮಾನಿಸಿ ಈ ಬಗ್ಗೆ ನಿರ್ಣಯ ಮಂಡಿಸಿ ಸರಕಾರಕ್ಕೆ ಕಳುಹಿಸಿಕೊಟ್ಟಿತು.

ಈ ಸಂದರ್ಭದಲ್ಲಿ ನೂತನ ಸಮಿತಿಯೊಂದನ್ನು ರಚಿಸಲಾಯ್ತು ಅಧ್ಯಕ್ಷರಾಗಿ ಬಾಲಕೃಷ್ಣ ಗೌಡ, ಉಪಾಧ್ಯಕ್ಷರುಗಳಾಗಿ ಅಬ್ಬೊಕ್ಕರೆ ದಾಮೋದರಗೌಡ, ಕಾರ್ಯದರ್ಶಿಯಾಗಿ ಲಕ್ಷ್ಮಣಗೌಡ, ಸಹ ಕಾರ್ಯದರ್ಶಿಯಾಗಿ ರಾಮಣ್ಣಶೆಟ್ಟಿ, ಕೋಶಾಧಿಕಾರಿಯಾಗಿ ಕೃಷ್ಣಪ್ಪ ಗೌಡ, ಜೊತೆ ಕೋಶಾಧಿಕಾರಿಯಾಗಿ ಸುಂದರ ಎಂ.ಕೆ. ಹಾಗೂ 10 ಜನ ಸದಸ್ಯರು ಆಯ್ಕೆಯಾದರು.

ಬೆಂಗಳೂರು ಜಿಲ್ಲಾ ಸಮ್ಮೇಳನಕ್ಕೆ ಭರದ ಸಿದ್ಧತೆ

ಬೆಂಗಳೂರು: ಸಿಪಿಐ(ಎಂ) ಜಿಲ್ಲಾ ಸಮ್ಮೇಳನ 14,15,16ರಂದು ಶ್ರೀರಾಮಪುರದ ಸಾಯಿಬಾಬ ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು ಇದನ್ನು ಜನರ ಮಧ್ಯೆ ವಿವರಿಸಲು ನಗರದ ವಿವಿಧ ಬಡಾವಣೆಗಳಲ್ಲಿ ನಾಟಕಪ್ರದರ್ಶಿಸಲಾಗುತ್ತದೆ. ಶ್ರೀರಾಮಪುರದ ಸಮುದಾಯ ತಂಡವು ಕಾಂ. ಆರ್.ಭಾಸ್ಕರ್‌ರವರ ನೇತೃತ್ವದಲ್ಲಿ ಸ್ಥಳೀಯ ಕಲಾವಿದರ ಸಹಕಾರದೊಂದಿಗೆ ದುಡಿಯುವ ಜನರು ಎಂಬ ಅಸಂಘಟಿತ ಕಾರ್ಮಿಕರ ಬದುಕನ್ನು ವಿವರಿಸುವ ನಾಟಕವನ್ನು ಆಡುತ್ತಿದ್ದಾರೆ. ಈ ನಾಟಕ ನೋಡಲು ನೂರಾರು ಜನರು ಬಹಳ ಆಸಕ್ತಿಯಿಂದ ನೋಡುತ್ತಿದ್ದಾರೆ.

ಫೆಬ್ರವರಿ 6ರಂದು ಈ ನಾಟಕವನ್ನು ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಕಾಂ. ದೊರೆಸ್ವಾಮಿಯವರು ಉದ್ಘಾಟನೆ ಮಾಡುವುದರ ಮೂಲಕ ಪ್ರದರ್ಶನ ಪ್ರಾರಂಭವಾಯಿತು.

ಸಮ್ಮೇಳನವನ್ನು ಫೆಬ್ರವರಿ 14ರಂದು ರಾಜ್ಯ ಕಾರ್ಯದರ್ಶಿಗಳಾದ ಕಾಂ.ಪಿ. ರಾಮಚಂದ್ರರಾವ್ ಉದ್ಘಾಟಿಸುವರು. ಅದರ ಮೊದಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸುವ ಮೆರವಣಿಗೆ ನಡೆಯಲಿದೆ ಎಂದು ಸ್ವಾಗತ ಸಮಿತಿಯ ಕಾರ್ಯದರ್ಶಿ ವಿ.ಕೋದಂಡರಾಂ ತಿಳಿಸಿದ್ದಾರೆ.

ಪ.ಬಂಗಾಳದ ಪರ್ಯಾಯ ದಾರಿ

	ಕರ್ನಾಟಕ	ಪ.ಬಂಗಾಳ
ಕೃಷಿ ಬೆಳವಣಿಗೆಯ ವೇಗ	ಶೇ. 2.2	ಶೇ. 6.4
ಆಹಾರ ಧಾನ್ಯಗಳ ಉತ್ಪಾದನೆ	75 ಲಕ್ಷ ಟನ್	113.14 ಲಕ್ಷ ಟನ್
ಕೃಷಿ ಯೋಗ್ಯ ಜಮೀನು	102 ಲಕ್ಷ ಹೆಕ್ಟೇರು	52 ಲಕ್ಷ ಹೆಕ್ಟೇರು
ಹಂಚಿದ ಹೆಚ್ಚುವರಿ ಜಮೀನು	1.25 ಲಕ್ಷ ಎಕರೆ	12 ಲಕ್ಷ ಎಕರೆ
ಹಂಚಲ್ಪಟ್ಟವರು	25,000ರೈತರು	22.1 ಲಕ್ಷ ರೈತರು
ಹಕ್ಕು ನೀಡಲ್ಪಟ್ಟ ಪಾಲುದಾರರು	ಇಲ್ಲ	14.5 ಲಕ್ಷ ರೈತರು
ನೀರಾವರಿಯ ಏರಿಕೆ	ಶೇ. 18ರಿಂದ 24	ಶೇ. 20ರಿಂದ 42

ಕರ್ನಾಟಕದ ಕೇವಲ ಅರ್ಧದಷ್ಟು ಸಾಗುವಳಿ ಯೋಗ್ಯ ಜಮೀನು ಮಾತ್ರ ಪ.ಬಂಗಾಳದಲ್ಲಿದ್ದರೂ ಆ ರಾಜ್ಯ ಕರ್ನಾಟಕದ ಒಂದೂವರೆ ಪಟ್ಟು ಆಹಾರ ಧಾನ್ಯ ಉತ್ಪಾದನೆಯನ್ನು ಸಾಧಿಸಿರುವುದಕ್ಕೆ ಕಾರಣ ಬಡ ರೈತರಿಗೆ ನೀಡಿದ ಜಮೀನು ಹಾಗೂ ಪಾಲುದಾರ ರೈತರಿಗೆ ನೀಡಿದ ಹಕ್ಕುಗಳು ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಇದರಿಂದ ನೀರಾವರಿಯನ್ನು ಎರಡು ಪಟ್ಟು ಹೆಚ್ಚಿಸಲು ಗಮನ ನೀಡಿ [illegible] ಕೃಷಿ ಧಾನ್ಯ ಉತ್ಪಾದನೆಯ ಬೆಳವಣಿಗೆಯ ವೇಗದಲ್ಲಿ ಪಂಜಾಬ್, ಹರಿಯಾಣಗಳನ್ನು ಮೀರಿಸಿದೆ. [illegible] ಸ್ಥಗಿತತೆಯನ್ನು ಕೊನೆಗೊಳಿಸುವ [illegible]

([illegible] ಮುಖ್ಯಮಂತ್ರಿಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘ [illegible])

XV ನೇ
ಸಿಪಿಐ(ಎಂ) ಮಹಾಧಿವೇಶನ
ಚಂಢೀಗಢ, ಏಪ್ರಿಲ್ 3-8, 1995

ಪ್ರಸಾರ ಸಂಖ್ಯೆ 5000ಕ್ಕೆ ಹೆಚ್ಚಿಸಿದರೆ ಸಾಕೇ? ಅದಕ್ಕಿಂತ ಹೆಚ್ಚಿನ ಪ್ರಸಾರದ ಬಗ್ಗೆ ಯೋಚಿಸಿ-ದಿನಪತ್ರಿಕೆ ಮಾಡುವ ಬಗ್ಗೆ ಯೋಚಿಸಿ ೫೦೦೦ ಏನೂ ಸಾಲದು. ನಿಮ್ಮ ಆ ಅಸ್ತ್ರವನ್ನು ತೀಕ್ಷ್ಣಗೊಳಿಸಿ. ಅದು ಆರು ತಿಂಗಳೊಳಗೆ ಪ್ರಸಾರವನ್ನು 15000ಕ್ಕೆ ಏರಿಸುವ ಪ್ರತಿಜ್ಞೆ ಕೈಗೊಳ್ಳಿ -ಕಾಂ. ಬಾಲಾನಂದನ್ ಆಹ್ವಾನ ನೀಡಿದರು.

ಸಮ್ಮೇಳನದಲ್ಲಿ ಮಂಡಿಸಿದ ವರದಿಯಲ್ಲಿ ಕಳೆದ ಸಮ್ಮೇಳನದ ತೀರ್ಮಾನಗಳ ಪ್ರಕಾರ ನಡೆದ ಪ್ರಯತ್ನ ಸಾಧನೆ ಹಾಗೂ ಪ್ರಸಾರದಲ್ಲಿನ ದೌರ್ಬಲ್ಯಗಳನ್ನು ಗುರುತಿಸಲಾಗಿತ್ತು.

ಪತ್ರಿಕೆಯ ಪ್ರಸಾರವನ್ನು, ಗುಣಮಟ್ಟವನ್ನು ತಿಗಳು ತಮ್ಮ ಮಿತಿಯೊಳಗೆ ನಡೆಸಿದ ಪ್ರಯತ್ನಗಳ ಬಗ್ಗೆ ಪ್ರತಿನಿಧಿಗಳಿಗೆ ತಿಳಿಸಿದ 'ಐಕ್ಯರಂಗ' ಶಾಖೆಯ ಪ್ರತಿನಿಧಿ ಓದುಗರೊಡನೆ ಸಂಪರ್ಕ

ಸಿಪಿಐ(ಎಂ) ರಾಜ್ಯದಲ್ಲಿ 15ನೇ ರಾಜ್ಯ ಸಮ್ಮೇಳನಕ್ಕೆ ಸಿದ್ಧಗೊಳ್ಳುತ್ತಿದೆ. ಈ ಸಂದರ್ಭದಲ್ಲಿ ಕಳೆದ ಮಹಾಧಿವೇಶನದ ಪಕ್ಷದ ಮುಂದೆ ಯಾವ ಕರ್ತವ್ಯಗಳನ್ನಿಟ್ಟಿತ್ತು ಎಂಬುದರ ಬಗ್ಗೆ ಒಂದು ಇಣುಕು ನೋಟ ಕಳೆದವಾರ ಕಂಡಿದ್ದೀರಿ. ಈ ವಾರ ಪಕ್ಷದ ಪತ್ರಿಕೆ, ಸೈದ್ಧಾಂತಿಕ ಕೆಲಸಗಳ ಬಗ್ಗೆ 14ನೇ ರಾಜ್ಯ ಸಮ್ಮೇಳನ ಹಾಗೂ 14ನೇ ಮಹಾಧಿವೇಶನ ಏನು ಹೇಳಿತ್ತು ಎಂದು ಮೆಲುಕುಹಾಕೋಣ. ಇದರಲ್ಲಿ ಮೊದಲನೆಯದ್ದು ಕಳೆದ ರಾಜ್ಯ ಸಮ್ಮೇಳನದ ನಂತರ 'ಐಕ್ಯರಂಗ'ದ ಡಿಸೆಂಬರ್ 10, 1991 ಪ್ರಕಟವಾದ ವರದಿ. ಎರಡನೆಯದ್ದು ೧೪ನೇ ಮಹಾಧಿವೇಶನದ ಸಂಘಟನಾ ವರದಿಯಿಂದ ಆರಿಸಿಕೊಂಡದ್ದು

ಹದಿನಾಲ್ಕನೇ ಸಮ್ಮೇಳನ ಕಂಡಂತೆ 'ಐಕ್ಯರಂಗ'

ಸಿಪಿಐ(ಎಂ) ಹದಿನಾಲ್ಕನೇ ಸಮ್ಮೇಳನದ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೇಲೆ ತೀವ್ರ ಸೈದ್ಧಾಂತಿಕ ದಾಳಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ನಡೆಯಿತು. ಆದ್ದರಿಂದ ಪಕ್ಷದ ಸೈದ್ಧಾಂತಿಕ ಅಸ್ತ್ರವಾದ 'ಐಕ್ಯರಂಗ'ವನ್ನು ಬಲಪಡಿಸುವುದು ಅಗತ್ಯವೆಂಬ ವಿಚಾರ ಸಮ್ಮೇಳನದಲ್ಲಿ ರೂಪುಗೊಂಡಿದೆ.

ಪ್ರತಿನಿಧಿಗಳು ಚರ್ಚೆ ಆರಂಭಿಸುವ ಮೊದಲು ಮಾತನಾಡಿದ ಪೊಲಿಟ್ ಬ್ಯೂರೊ ಸದಸ್ಯರು ಹಾಗೂ ಸಿಐಟಿಯು ಅಧ್ಯಕ್ಷರೂ ಆದ ಕಾಂ. ಇ. ಬಾಲಾನಂದನ್ ಸನ್ನಿವೇಶದ ಒಂದು ಚಿತ್ರ ನೀಡುತ್ತಾ ಆಡಿದ ನುಡಿಗಳಲ್ಲಿ ಬಂದ ಈ ಕುರಿತಾದ ಪ್ರಸ್ತಾಪ ಅತ್ಯಂತ ತೀಕ್ಷ್ಣವಾಗಿತ್ತು. ಎಡಪ್ರಜಾಪ್ರಭುತ್ವ ಜಾತ್ಯಾತೀತ ಪರ್ಯಾಯ ಕಟ್ಟುವ ನಮ್ಮ ಕರ್ತವ್ಯಗಳನ್ನು ನೆರವೇರಿಸುವುದು ಹೇಗೆ? ಅದಕ್ಕೆ ಸಾಧನ ಯಾವುದು? ಪಕ್ಷವೇ ಆ ಸಾಧನ. ನಮ್ಮ ಉದ್ದೇಶ ಬರೇ ಆರ್ಥಿಕ ಬೇಡಿಕೆಗಳಷ್ಟೇ ಅಲ್ಲ, ಸೈದ್ಧಾಂತಿಕ ಪ್ರಚಾರವೂ ನಮ್ಮ ಕರ್ತವ್ಯ.

'ಐಕ್ಯರಂಗ'ದ ಪ್ರಸಾರವನ್ನು ಹೆಚ್ಚಿಸಬಾರದೆಂದು ನಿರ್ಧರಿಸಿದ್ದೀರಾ? ಹಿರಿಯ ಮುಖಂಡರಿಂದ ಹಿಡಿದು ಎಲ್ಲರೂ ಪತ್ರಿಕೆಯನ್ನು ಮಾರುವ ಪ್ರಯತ್ನಮಾಡಬಾರದೇಕೆ? ನಿಮಗೆ ಕನಸುಕಾಣುವ ಸಾಮರ್ಥ್ಯವೂ ಇಲ್ಲವಲ್ಲ, ತಿರುಕ ಕೇವಲ ಅನ್ನದ ಕನಸು ಕಾಣಬಲ್ಲನಂತೆ ಅಪಾಯಸದ ಕನಸು ಕಾಣಲಾರನಂತೆ!

ಹೆಚ್ಚಿಸುವ ಅಗತ್ಯಬಹಳ ವಿದೆಯೆಂಬುದನ್ನು ಒಪ್ಪಿಕೊಂಡ ಹಲವು ಪ್ರತಿನಿಧಿಗಳು ಈ ಬಗ್ಗೆ ಹಲವು ಸೂಚನೆಗಳನ್ನು ಇಟ್ಟರು. ಉದಾ: ಪತ್ರಿಕೆ ಶನಿವಾರದಂದೇ ನಿಯಮಿತವಾಗಿ ತಲುಪುವಂತೆ ಮಾಡುವುದು, ಭಾಷೆಯನ್ನು, ವಿಷಯ ಮಂಡನೆಯನ್ನು ಸರಳಗೊಳಿಸುವುದು, ಈಗ ಕಾಣಬರುತ್ತಿರುವ ತಪ್ಪುಗಳನ್ನು ನಿವಾರಿಸುವುದು, ಓದುಗರೊಡನೆ ಸಂಪರ್ಕವಿಟ್ಟುಕೊಳ್ಳುವುದು, ನಿರ್ವಹಣೆಯ ತಪ್ಪುಗಳನ್ನು ಸರಿಪಡಿಸುವುದು ಇತ್ಯಾದಿ.

'ಐಕ್ಯರಂಗ'ದ ಗುಣಮಟ್ಟ ಉತ್ತಮಗೊಂಡಿದೆಯೆಂದೂ ಇನ್ನು ಕೆಲವು ಪ್ರತಿನಿಧಿಗಳು ಅಭಿಪ್ರಾಯಪಟ್ಟರು. ಕಾರ್ಯಕರ್ತರಿಗೆ ಬೇಕಾಗುವ ಮಾಹಿತಿಗಳನ್ನು ಪತ್ರಿಕೆ ಒದಗಿಸುತ್ತಿದೆ ಎಂದರು. ಜೀವನವೆಚ್ಚ ಸೂಚ್ಯಂಕವನ್ನು ಪತ್ರಿಕೆಯಲ್ಲಿ ನಿಯಮಿತವಾಗಿ ಪ್ರಕಟಿಸಬೇಕೆಂದು ಒಬ್ಬ ಪ್ರತಿನಿಧಿ ಸೂಚಿಸಿದರು. ಪಕ್ಷದ ಮತ್ತು ಐಕ್ಯರಂಗದ ನಿಧಿ ಸಂಗ್ರಹಕ್ಕೆ ಕೊಟ್ಟಷ್ಟರೆ ಯಶಸ್ವಿಯಾಗಲಿಲ್ಲ ಎಂದೂ ಕೆಲವರು ಗಮನಿಸಿದರು. ಪಕ್ಷದ ಬೆಳವಣಿಗೆಯ ಸ್ಥಗಿತತೆ, ರಾಜ್ಯದ ರಾಜಕೀಯದಲ್ಲಿ ಸೂಕ್ತ ಮಧ್ಯಪ್ರವೇಶದ ಕೊರತೆ, ಈ ಸೈದ್ಧಾಂತಿಕ ಅಸ್ತ್ರದ ಬಗ್ಗೆ ಪಕ್ಷದ ಔದಾಸೀನ್ಯ, ಪತ್ರಿಕೆಯ ಪ್ರಸಾರ, ಗುಣಮಟ್ಟ ಹಾಗೂ ನಿರ್ವಹಣೆಯ ತಪ್ಪುಗಳಲ್ಲಿ ಕಾಣುತ್ತಿದೆ ಎಂದೂ ಗಮನಿಸಲಾಯಿತು. ಈ ದೌರ್ಬಲ್ಯಗಳನ್ನು ಒಪ್ಪಿಕೊಂಡು ಅವನ್ನು ನಿವಾರಿಸಿಕೊಳ್ಳಲು ಐಕ್ಯರಂಗದ ಸಂಗಾತಿಗಳು

ಬೆಳೆಸಲು ಆರಂಭಿಸಿದ ಕಾಲಂಗಳಾದ "ಪ್ರಶ್ನೋತ್ತರ" ನಾನು ಕಮ್ಯುನಿಸ್ಟನಾದ ಬಗೆ ಇತ್ಯಾದಿಗಳಿಗೆ ಸಂತೋಷಜನಕ ಸ್ಪಂದನ ದೊರೆಯಲಿಲ್ಲ ಎಂದರು. 'ಐಕ್ಯರಂಗ'ಕ್ಕೆ ಲೇಖನ, ವರದಿ ಇತ್ಯಾದಿ ನೀಡಬಲ್ಲ ಸಂಗಾತಿಗಳ, ಏಜೆಂಸಿದಾರರ ನಡುವೆ ಸಂಪರ್ಕ ಕಲ್ಪಿಸುವ ರಾಜ್ಯ ಮಟ್ಟದ ವ್ಯವಸ್ಥೆ ಅಗತ್ಯ ಎಂಬ ಅಭಿಪ್ರಾಯ ಬಂತು.

ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಕೇಂದ್ರ ಸೆಕ್ರೆಟಾರಿಯೆಟ್ ಸದಸ್ಯ ಕಾಂ.ಪಿ.ರಾಮಚಂದ್ರನ್ ಕೂಡಾ ರಾಜ್ಯದಲ್ಲಿ ಪಕ್ಷದ ನಾಲ್ಕು ತುರ್ತು ಕರ್ತವ್ಯಗಳನ್ನು ಪಟ್ಟಿ ಮಾಡುತ್ತಾ ಪಕ್ಷದ ಮೇಲೆ, ಕಮ್ಯುನಿಸ್ಟ್ ಆಂದೋಲನದ ಮೇಲಿನ ಸೈದ್ಧಾಂತಿಕ ಧಾಳಿಗಳನ್ನು ಹಿಮ್ಮೆಟ್ಟಿಸಲು 'ಐಕ್ಯರಂಗ' ವನ್ನು ಬಲಪಡಿಸಬೇಕು ಎಂದು ಪ್ರತಿನಿಧಿಗಳಿಗೆ ಕರೆಯಿತ್ತರು.

ಸಮ್ಮೇಳನದ ಈಗಿನ ಸನ್ನಿವೇಶದಲ್ಲಿ ದುಡಿಯುವ ಜನರ ಹಿತಾಸಕ್ತಿಗಳನ್ನು ಎತ್ತಿಹಿಡಿಯುವಲ್ಲಿ, ದುಡಿಯುವ ಜನರ ಶತ್ರುಗಳ ಬಯಕೆಯನ್ನು ಕತ್ತರಿಸಿ ಹಾಕುವ ಹೋರಾಟದ ಒಂದು ಸಾಧನವಾಗಿ ಓದುಗರ ,ಬರಹಗಾರರ, ವರದಿಗಾರರ, ಏಜೆಂಸಿದಾರರ ಒಂದು ಕಮ್ಯುನಿಸ್ಟ್ ಉದ್ಯಮವಾಗಿ ಪತ್ರಿಕೆಯನ್ನು ಬೆಳೆಸಲು ಒಂದು ಸಮಯಬದ್ಧ ಯೋಜನೆ ಹಾಕಿಕೊಳ್ಳುವ ನಿರ್ಣಯವನ್ನು ಅಂಗೀಕರಿಸಿತು.

(ಐಕ್ಯರಂಗ, ಡಿಸೆಂಬರ್ 10, 1991)

◆

ಪಕ್ಷದ ಪತ್ರಿ

ಮದ್ರಾಸಿನಲ್ಲಿ 14ನೇ ಅಖಿಲ ಭಾರತ ಮಹಾಧಿವೇಶನದಲ್ಲಿ ಚರ್ಚೆಗೆ ಬಂದ ಹಲವು ವಿಷಯಗಳಲ್ಲಿ ಪಕ್ಷದ ಪತ್ರಿಕೆಗಳ ಗುಣಮಟ್ಟ ಮತ್ತು ಪ್ರಸಾರ, ನಮ್ಮ ಸೈದ್ಧಾಂತಿಕ ಪ್ರಚಾರದಲ್ಲಿ ಗುಣಮಟ್ಟವೂ ಒಂದು ಮುಖ್ಯ ವಿಷಯವಾಗಿತ್ತು.

ಪಕ್ಷದ ಸಂಘಟನೆಯನ್ನು ದಕ್ಷಗೊಳಿಸುವಲ್ಲಿ ರಾಜ್ಯ ಸಮಿತಿಗಳು ಹಾಗೂ ಸಂಬಂಧಪಟ್ಟ ಕೆಳಗಿನ ಸಮಿತಿಗಳು ಆದ್ಯ ಗಮನನೀಡಲೇಬೇಕಾದ 5 ಅಂಶಗಳಲ್ಲಿ ಒಂದು -ರಾಜ್ಯಗಳಲ್ಲಿ ಪಕ್ಷದ ಪತ್ರಿಕೆಗಳ ಗುಣಮಟ್ಟವನ್ನು ಹೆಚ್ಚಿಸುವುದು ಮತ್ತು ರಾಜ್ಯ ಸಮಿತಿಗಳು ನಿಯಮಿತವಾಗಿ ಈ ಪತ್ರಿಕೆಗಳನ್ನು ಉತ್ತಮ ಗೊಳಿಸುವ ಅವಕಾಶಗಳ ಬಗ್ಗೆ ಚರ್ಚಿಸುವುದು ಹಾಗೂ ರಾಜ್ಯ ಕೇಂದ್ರಗಳಿಂದ ಪ್ರಗತಿಪರ ಪ್ರಚಾರ ಸಾಮಗ್ರಿಗಳನ್ನು ವಿಸ್ತರಿಸುವುದು [ಸಂಘಟನಾ ವರದಿಯ ಪರಿಚ್ಛೇದ 77(e)]

ಆಂದೋಲನದ ಅಗತ್ಯಗಳನ್ನು ಪೂರೈಸುತ್ತಿಲ್ಲ

ಪಕ್ಷದ ಪತ್ರಿಕೆಗಳಲ್ಲಿ ಮುಖ್ಯವಾಗಿ ಕರ್ನಾಟಕ 'ಐಕ್ಯರಂಗ'ದಂತಹ ವಾರಪತ್ರಿಕೆಗಳಲ್ಲಿ ಮಹಾಧಿವೇಶನ ಕಂಡ ಪ್ರಮುಖ ದೌರ್ಬಲ್ಯವೆಂದರೆ ಪ್ರಸಾರದಲ್ಲಿ ಹೆಚ್ಚೇನೂ ಮುನ್ನಡೆ ಸಾಧಿಸಲಾಗದ್ದು ಹಾಗೂ ಅವುಗಳಲ್ಲಿ ಲವಲವಿಕೆಯ ಬರವಣಿಗೆಗಳಿಲ್ಲದೆ ಅವು ಕೇವಲ ಪಾರ್ಟಿ ಬುಲೇಟಿನ್‌ಗಳಾಗಿಯೇ ಉಳಿದಿರುವುದು. ಆದ್ದರಿಂದ • ಕರ್ನಾಟಕ, ಅಸ್ಸಾಂಗಳಂತೆ ಕೆಲವು ತಾಂತ್ರಿಕ ಸುಧಾರಣೆಗಳನ್ನೂ ನಡೆಸಿದರೂ ಒಟ್ಟಾರೆಯಾಗಿ ಅವು ನಮ್ಮ ಆಂದೋಲನದ ಹೆಚ್ಚುತ್ತಿರುವ ಅಗತ್ಯಗಳನ್ನು ಪೂರೈಸಲು ಅಥವಾ ಪ್ರತಿಬಿಂಬಿಸಲು ಸಾಧ್ಯವಾಗಲಿಲ್ಲ ಎಂದು 14ನೇ

ಮಹಾಧಿವೇಶನ ಸಂಘಟನಾ ವರದಿ
ಚ್ಛೇದ 74(viii)ಗಮನಿಸಿತ್ತು. ಪತ್ರಿಕೆಗ
ಆಭಾವದಿಂದ ಸಂಪಾದಕೀಯ ಕಾ
ಅಭಾವದ ನಡುವೆ ಕಷ್ಟಪಡುತ್ತದೆ
ಹೇಳಿತ್ತು. 14ನೇ ಮಹಾಧಿವೇಶನದ
ಮೂರು ವರ್ಷಗಳಲ್ಲಿ ಈ ದೌಬ
ಹೋಗಲಾಡಿಸುವ ಪ್ರಯತ್ನ ನಡೆ
ಈ ಬಗ್ಗೆ ಚರ್ಚೆ ನಡೆಯಲಿದೆ.

ಮಹಾಧಿವೇಶನ ನೀಡಿದ್ದ

ಪಕ್ಷದ ಪ್ರಭಾವದ ವಿಸ್ತರಣೆಯ
ತಿಕ ಕೆಲಸದ ಬಗ್ಗೆ ವಿವರವಾಗಿ ಚರ್ಚಿ
ಮಹಾಧಿವೇಶನದ ವರದಿ ಇದರಲ್ಲಿ
ಪಾತ್ರವನ್ನು ವಿಶ್ಲೇಷಿಸಿತು. "ಸೈದ್ಧಾಂತಿ
ವನ್ನು ಹಾಗೂ ರಾಜಕೀಯ ಶಿಕ್ಷಣವ
ಸುವುದೆಂದರೆ ಕೇವಲ ಪಾರ್ಟಿ ಶಾ
ನಡೆಸುವುದಲ್ಲ ಇದು ಸೈದ್ಧಾಂತಿಕ
ಒಂದು ಆಯಾಮವಷ್ಟೆ. ಪಕ್ಷದ ಸ
ಸಜ್ಜುಗೊಳಿಸಲು ಮೇಲಿಂದ ಕೆಳಗೆ
ನಮ್ಮ ಪತ್ರಿಕೆಗಳ ಗುಣಮಟ್ಟದಲ್ಲಿ ಸ
ಹಾಗೂ ನಮ್ಮ ಪ್ರಚಾರ ಸಾಮಗ್ರಿಗಳ
ಅಗತ್ಯ"(ಸಂಘಟನಾ ಪರಿಚ್ಛೇದ 90)
ವುದಲ್ಲದೆ ಎಂದು ಹೇಳಿರುವಂತೆ ನಮ
ಲ್ಲಿ ಪತ್ರಿಕೆಗಳೆಂದರೆ ಈಗಲೂ ಫ
ಸಮ್ಮೇಳನಗಳ ಒಂದೇ ರೀತಿಯ ವ
ಮುಖಂಡರ ಭಾಷಣಗಳಿಂದ ತುಂಬಿದ
ಗಳು. ಇಂತಹ ಪ್ರಕಟಣೆಗಳು ಹೊ
ಗೆಯು ಓದುಗರಿಗೆ ನೀರಸ ಹಾಗೂ ಏಕ
ಎಂಬನಿಸುತ್ತದೆ ಎಂದೂ ಮಹಾಧಿವೇ
ರಿಸಿತ್ತು. ಕರ್ನಾಟಕದಲ್ಲಿ 'ಐಕ್ಯರಂಗ' ಈ
ಕಳೆದ ಮಹಾಧಿವೇಶನದ ನಂತರ ಏನ
ಹೆಜ್ಜೆ ಮುಂದಿಟ್ಟಿದೆಯೋ? ರಾಜ್ಯದಲ್ಲ
ಈಗ ಇದನ್ನು ವಿಶ್ಲೇಷಿಸಬೇಕಾಗಿದೆ.

ಹೊಸ ಸನ್ನಿವೇಶದಲ್ಲಿ ಸೈದ್ಧಾಂ.

ಬ್ರೌನ್ ಎಂಬ ರಣಹದ್ದಿನ ದೂತನ ಭಾರತ ಬೇಟೆ

ಅಮೆರಿಕದ ವಾಣಿಜ್ಯ ಕಾರ್ಯದರ್ಶಿ ರೊನಾಲ್ಡ್ ಬ್ರೌನ್‌ರ ನೇತೃತ್ವದಲ್ಲಿ ಅಮೆರಿಕಾದ ವಾಣಿಜ್ಯ ನಿಯೋಗವೊಂದು ಭಾರತಕ್ಕೆ ಭೇಟಿ ನೀಡಿದೆ. ಈ ನಿಯೋಗದ ಭೇಟಿ ಭಾರತದ ಆರ್ಥಿಕ ಸಾರ್ವಭೌಮತೆಗೆ ಸಾಮ್ರಾಜ್ಯಶಾಹಿಯ ದುರಹಂಕಾರದ ಹೊಡೆತದ ಸಂಕೇತವೂ ಆಗಿತ್ತು. ಅದೇ ಸಮಯದಲ್ಲಿ ನಮ್ಮ ಪ್ರಧಾನಿ ನರಸಿಂಹ ರಾಯರ ಸರ್ಕಾರದ ಗುಲಾಮ ಮನೋಭಾವದ ಪ್ರದರ್ಶನವೂ ಇದಾಗಿತ್ತು. ಅಮೆರಿಕಾದ ನಿಯೋಗ ಈ ಭೇಟಿ ಅತ್ಯದ್ಭುತ ಯಶಸ್ಸು ಪಡೆದಿದೆ ಎಂದು ಉಬ್ಬಿ ಹೇಳಿಕೊಂಡಿದೆ. ಹಲವು ಶತಕೋಟಿ ಡಾಲರುಗಳ ಬೆಲೆಯ ವ್ಯಾಪಾರ ಒಪ್ಪಂದ ಸಾಧ್ಯವಾದದ್ದು ಅದಕ್ಕೆ ವಿಜಯದ ಹುಮ್ಮಸ್ಸು ನೀಡಿತ್ತು.

ಒಪ್ಪಂದಗಳಿಗಿಂತ ಅಮೆರಿಕಾದ ವ್ಯಾಪಾರದ ನೇತಾರರ ಒತ್ತಡ, ಕೈ ತಿರುಚುವ ಕ್ರಮಗಳು ಎದ್ದು ಕಾಣುತ್ತಿದ್ದವು. ಸಾಮ್ರಾಜ್ಯಶಾಹಿಗೆ ತಕ್ಕಂತ ವರ್ತನೆಯನ್ನೇ ಈ ನಿಯೋಗ ಇಲ್ಲಿ ಭಾರತದಲ್ಲಿ ತೋರಿತು. ಉದಾರೀಕರಣದಿಂದ ನಿರುದ್ಯೋಗ ಬಡತನ ಹೆಚ್ಚುತ್ತಿರುವಾಗ ಈ ಶೋಷಣಾತ್ಮಕ ಒಪ್ಪಂದಗಳಿಂದ ಖುಷಿ ಪಡುವುದೆಂದರೆ ಈ ದೇಶದ ಬಡತನ ಮತ್ತು ನಿರುದ್ಯೋಗದಂತಹ ದೈತ್ಯಾಕಾರದ ಸಾಮಾಜಿಕ ಸಮಸ್ಯೆಗಳನ್ನು ಹೆಚ್ಚಿಸಿ ಅಟ್ಟಹಾಸದಿಂದ ಕೇಕೆ ಹಾಕಿದಂತೆ. ಈ ನಿಯೋಗ ಮಾಡಿದ್ದು ಅದನ್ನೇ. ರಾವ್ ಸರ್ಕಾರದ ಉದಾರೀಕರಣದ ಆರ್ಥಿಕ ನೀತಿಯನ್ನು ಮನಪೂರ್ವಕ ಹೊಗಳಿದ ಈ ನಿಯೋಗ ಭಾರತದ ವಿಮೆ ಮತ್ತು ಬ್ಯಾಂಕಿಂಗ್ ಕ್ಷೇತ್ರಗಳನ್ನು ಇನ್ನೂ ದೊಡ್ಡದಾಗಿ ತೆರೆಯಬೇಕೆಂಬ ಒತ್ತಡವನ್ನಿಟ್ಟು ಹೋಗಿದೆ. ನರಸಿಂಹರಾಯರ ಸರ್ಕಾರ ಈ ಚಿತಾವಣೆಗೆ ಎದುರು ನಿಂತು ದೇಶದ ಹಿತ ಕಾಯುವ ಬದಲು ಉದಾರೀಕರಣ ನಿರಂತರವಾಗಿ ಮುಂದುವರಿಯುತ್ತದೆ, ಉದಾರೀಕರಣದ ದಾರಿಯಲ್ಲಿ ವಾಪಸ್ಸು ಬರುವ ಮಾತೇ ಇಲ್ಲ ಎಂಬ ಭರವಸೆಯನ್ನು ನಿಯೋಗಕ್ಕೆ ನೀಡಿತು.

ಅಮೇರಿಕನ್ ವಾಣಿಜ್ಯ ಕಾರ್ಯದರ್ಶಿ ಬ್ರೌನ್‌ರವರ ಭೇಟಿ ಸಾಮ್ರಾಜ್ಯಶಾಹಿಗಳ ಧಿಮಾಕಿನ ವರ್ತನೆಯು, ರಾವ್ ಸರಕಾರದ ಗುಲಾಮ ವರ್ತನೆಯ ಅತ್ಯಂತ ಆತಂಕಕಾರಿ ಪ್ರದರ್ಶನವಾಗಿತ್ತು.

5 ಜನವರಿ 17ರಂದು ಬ್ರೌನ್ ಮಹಾಶಯ ಪತ್ರಿಕಾ ಗೋಷ್ಠಿಯೊಂದನ್ನು ನಡೆಸಿದರು. ಇಲ್ಲಿ ಅವರು ನರಸಿಂಹ ರಾಯರು ಸರಿಯಾದ ಪಥದಲ್ಲಿ ನಡೆಯುತ್ತಿದ್ದಾರೆ, ಅವರು ಪ್ರಾಮಾಣಿಕರು, ನಿಜವಾದ ಕಳಕಳಿ ಉಳ್ಳವರು ಎಂದೆಲ್ಲ ಸರ್ಟಿಫಿಕೇಟು ನೀಡಿದರು.

ಕರ್ನಾಟಕ ಮತ್ತು ಆಂಧ್ರಗಳೆರಡರಲ್ಲೂ ದಯನೀಯ ಸೋಲು ಅನುಭವಿಸಿದ ರಾಯರು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಗೆ ನಿರಂತರ ಮತ್ತು ಇನ್ನೂ ಹೆಚ್ಚಿನ ಉದಾರೀಕರಣದ ಭರವಸೆ ನೀಡಿದರು. ಹಣಕಾಸು ವಲಯವನ್ನು ಇನ್ನೂ ಹೆಚ್ಚು ತೆರೆವ ಬಗ್ಗೆ ರಾವ್ ಅವರ ಮೇಲೆ ಒತ್ತಡ ಹೇರುವ ಅವಶ್ಯಕತೆಯೇ ಇಲ್ಲವಂತೆ, ಯಾಕೆಂದರೆ ಅವರೇ (ರಾವ್) ಅದನ್ನು ಮಾಡುತ್ತಾರಂತೆ.

ಭಾರತದ ಬಹುತೇಕ ಜನತೆ ಉದಾರೀಕರಣದ ವಿರುದ್ಧ ತಾಳಿರುವ ನಿಲುವನ್ನು ಈ ನಿಯೋಗ ಪೂರ್ಣವಾಗಿ ನಿರ್ಲಕ್ಷಿಸಿತು. ನಮ್ಮ ಕೇಂದ್ರ ಅರ್ಥ ಮಂತ್ರಿಗಳಾದ ಡಾ. ಮನಮೋಹನ್ ಸಿಂಗ್‌ರು ಸಹ ಜನರಲ್ಲಿ ಉದಾರೀಕರಣದ ಬಗ್ಗೆ ಒಮ್ಮತ ಇದೆ ಎಂಬ ಹಸೀ ಸುಳ್ಳು ಹೇಳಿದರು.

ವಿದ್ಯುತ್ ಉತ್ಪಾದನೆ, ತೈಲ ಶೋಧ ಮತ್ತು ದೂರಸಂಪರ್ಕದಂತಹ ಮುಖ್ಯ ವಲಯಗಳಿಗೆ ಆಗಲೇ ಪ್ರವೇಶ ಪಡೆದ ಈ ಧೂರ್ತ ನಿಯೋಗ ಈ ಸಾರಿ ಹಣಕಾಸು ವಲಯದ ಮೇಲೆ ಕಣ್ಣು ಹಾಕಿತು. ನಮ್ಮ ಪ್ರಧಾನ ಮಂತ್ರಿ ಮತ್ತು ಅರ್ಥ ಮಂತ್ರಿಗಳಿಬ್ಬರೂ ಈ ದೇಶದ ಜನ ಸಂಸತ್ತು ಮತ್ತು ಮಂತ್ರಿ ಮಂಡಲ ಇವೆಲ್ಲವನೂ ನಿರ್ಲಕ್ಷಿಸಿ ವಿಮಾ ಕ್ಷೇತ್ರವನ್ನು ತೆರೆವ ಭರವಸೆ ನೀಡಿದರು.

ತಮಾಷೆಯೆಂದರೆ ಮಲ್ಹೋತ್ರ ಸಮಿತಿಯ ವರದಿಯ ಬಗೆಗೆ ಅವರಿಗಿದ್ದ ಅಸಮಾಧಾನ. ವಿಮಾ ಕ್ಷೇತ್ರದ ಉದಾರೀಕರಣದ ಬಗೆಗೆ ಈ ಸಮಿತಿ ಸಲ್ಲಿಸಿದ ವರದಿಯನ್ನು ವಿಮಾ ರಂಗದ ನೌಕರರೆಲ್ಲ ವಿರೋಧಿಸುತ್ತಿದ್ದಾರೆ. ದೇಶದ ಜನರೂ ವಿರೋಧಿಸುತ್ತಿದ್ದಾರೆ. ಆದರೆ ಈ ನಿಯೋಗಕ್ಕೆ ಈ ವರದಿಯ ಬಗ್ಗೆ ಅತೃಪ್ತಿ ಯಾಕೆ?

ವಿದೇಶಿಯರು ಬರೀ ಶೇ. 40ರಷ್ಟು ಶೇರು ಬಂಡವಾಳ ಹೊಡಬಹುದು ಎಂಬುದರ ಬಗ್ಗೆ ಈ ನಿಯೋಗದ ಬೇಡಿಕೆ ಶೇ. 75ರಷ್ಟು ಬಂಡವಾಳ ಹೂಡಲು ಬಿಡಿ ಎಂದು. ವಿಮಾ ಉದ್ಯಮಕ್ಕೆ ಬರುವವರು ಕನಿಷ್ಟ 1000 ದಶಲಕ್ಷ ರೂಪಾಯಿಗಳಷ್ಟು ಹಣ ಹೂಡಬೇಕೆಂಬ ನಿಬಂಧನೆಯ ಬಗೆಗೂ ಅವರ ಅಸಮಾಧಾನ.

ಈ ಬ್ರೌನ್ ಮಹಾಶಯನ ಭೇಟಿಯ ಹಿಂದೆ ಇನ್ನೂ ಹಲವು ವ್ಯಾಪಾರಿ ನಿಯೋಗಗಳು ಅಮೆರಿಕದಿಂದ ಭಾರತಕ್ಕೆ ಬರುತ್ತವೆ. ಅಮೆರಿಕನ್ನರ ಈ ವಾಣಿಜ್ಯ ಚಟುವಟಿಕೆಗೆ ಬ್ರೌನ್ ಮಹಾಶಯನ ನಿಯೋಗ ಭದ್ರ ಬುನಾದಿ ಹಾಕಿದೆ. ಭಾರತದ ಆರ್ಥಿಕದ ಬಹು ಮುಖ್ಯ ವಲಯಗಳಲ್ಲೆಲ್ಲ ನುಸುಳಲಿರುವ ಈ ಸಾಮ್ರಾಜ್ಯಶಾಹಿಗಳು ಆರ್ಥಿಕದ ರಕ್ತವನ್ನೇ ಹೀರಿ ಒಣಗಿಸಿಬಿಡುತ್ತಾರೆ.

ಇಂತಹ ನಿಯೋಗವನ್ನು ಪ್ರತಿರೋಧಿಸಿ ಅವರ ಸ್ಥಾನವನ್ನು ಅವರಿಗೆ ತೋರುವ ಬದಲು ಭಾರತ ಸರ್ಕಾರ ತಗ್ಗಿ ಬಗ್ಗಿ ನಡೆದು ತನ್ನ ಗುಲಾಮ ಮನೋಭಾವ ತೋರಿದೆ.

ಬ್ರೌನ್‌ರವರೇ ಹೇಳಿದಂತೆ "ಅಭಿವೃದ್ಧಿಶೀಲ ದೇಶಗಳ ಮಾರುಕಟ್ಟೆಗಳೊಂದಿಗೆ ವಾಣಿಜ್ಯ ಸಂಬಂಧಗಳನ್ನು ಬೆಳೆಸದೆ ಅಧ್ಯಕ್ಷ ಕ್ಲಿಂಟನ್ ಹೇಳುತ್ತಿರುವ ಉನ್ನತ ಮಟ್ಟದ ಉದ್ಯೋಗಗಳನ್ನು ನಾವು ಸೃಷ್ಟಿಸಲಾಗದು."

ಅಂದರೆ ಅಮೆರಿಕನ್ನರ ಜೀವನಮಟ್ಟ ಸುಧಾರಿಸಲು ಮಾತ್ರ ಭಾರತದೊಂದಿಗೆ ಈ ವಾಣಿಜ್ಯ ಒಪ್ಪಂದಗಳು ಬೇಕು.

ಹೇಗಿದೆ ಸಾಮ್ರಾಜ್ಯಶಾಹಿ (ಕು)ತರ್ಕ?

ಬ್ರೌನ

ಬಹುರಾಷ್ಟ್ರೀಯ

ಎನ್ನುತ್ತಾರೆ ಕಾಂ.ವಿ.ಎ.ಎನ್. ನಂಬೂ
ಅಖಿಲ ಭಾರತ ಟೆಲಿಕಾಂ ನೌಕರರ ಸ
ಪ್ರಧಾನ ಕಾರ್ಯದರ್ಶಿ

ತಮಿಳುನಾಡಿನಲ್ಲಿ ಕೊಯಮುತ್ತೂ
ಈರೋಡು, ಸೇಲಂ, ಧರ್ಮಪುರಿ, ಟಿ
ಜಿಲ್ಲೆಗಳನ್ನು ಅಮೇರಿಕನ್ ದೊಡ್ಡ ಕ
(ಯು.ಎಸ್.ವೆಸ್ಟ್)ಗಳಿಗೆ ಟೆಲಿಕಾ ಮ
ಸರ್ವೀಸ್ ನಡೆಸಲು ಭಾರತ ಸರ್ಕಾರ
ಕೊಡಲು ತೀರ್ಮಾನಿಸಿದೆ.

ಐದು ವರ್ಷದ ಈ ಒಪ್ಪಂದವು
ತಾಂತ್ರಿಕತೆಯನ್ನು ಅಳವಡಿಸಲು ಈ ಕಂ
ಳಿಗೆ ಅನುಮತಿ ನೀಡುತ್ತದೆ. ಈಗ ಕೊ
ವರ್ಷದ ಅವಧಿಯನ್ನು ಮುಂದುವರಿ
ಸಾಧ್ಯತೆ ಇದೆ. ಆ ಪ್ರದೇಶದ ಎಲ್ಲಾ ದೂರ
ಸೇವೆಯು ಸಂಪೂರ್ಣವಾಗಿ ಅಮೇರಿ
ಯು.ಎಸ್.ವೆಸ್ಟ್ ಕಂಪೆನಿಯ ಹಿಡಿತಕ್ಕೆ ಬ
ಸಾಧ್ಯತೆ ಇದೆ. 6 ವಾರಗಳ ನಂತರ
ಹಾಕಲ್ಪಡುವ ಈ ಒಪ್ಪಂದದಲ್ಲಿ ಏನೆಲ್ಲ
ಎಂದು ಇನ್ನೂ ವಿವರವಾಗಿ ತಿಳಿದಿಲ್ಲ.

ಅಮೇರಿಕದ ವಾಣಿಜ್ಯ ಕಾರ್ಯದರ್ಶಿ
ಬ್ರೌನ್ ಭಾರತದ ಭೇಟಿಯ ಸಮಯದಲ್ಲಿ
ತೀರ್ಮಾನವನ್ನು ತರಾತುರಿಯಲ್ಲಿ ತೆಗೆದು
ಡಿದ್ದಾರೆ. ಇದೇನು ಮೊದಲ ಹೆಜ್ಜೆಯೇನು
ಇದಕ್ಕೂ ಮೊದಲು ಪ್ರಧಾನ ಮಂತ್ರಿ ನ
ಹರಾಯರು ಅಮೇರಿಕ ಭೇಟಿಯ ಮೊ
ಮಧ್ಯರಾತ್ರಿ ಮಂತ್ರಿಮಂಡಲ ಸೇರಿ ನೂ
ಟೆಲಿಕಾಂ ಪಾಲಿಸಿಯನ್ನು ರೂಪಿಸಿದ್ದಾರೆ. ಪಾ
ಮೆಂಟಿನಲ್ಲಿ ದೂರವಾಣಿ ಸೇವೆಯನ್ನು ಖಾ
ಯವರಿಗೆ ಒಪ್ಪಿಸಲು ಮಾರ್ಗ ನಿರ್ದೇ

4ನೇ ಮಹಾಧಿವೇಶನ ಕಂಡಂತೆ

...ಳು ಮತ್ತು ಸೈದ್ಧಾಂತಿಕ ಪ್ರಚಾರ

ಪ್ರಚಾರದ ಅವಶ್ಯಕತೆ

"ನಮ್ಮ ಸೈದ್ಧಾಂತಿಕ ಕೆಲಸ ಹಾಗೂ ಸ್ವತಂತ್ರ ರಾಜಕೀಯ ಪ್ರಚಾರಕ್ಕೆ ಹೊಸ ಸನ್ನಿವೇಶದಲ್ಲಿ ಆದ್ಯತೆ ನೀಡಬೇಕು. ಸಮಾಜವಾದಿ ಜಗತ್ತು ಅನುಭವಿಸಿದ ಹಿನ್ನಡೆ ಮತ್ತು ಈ ಬೂರ್ಜ್ವಾ ವಲಯಗಳು ಮಾರ್ಕ್ಸ್‌ವಾದದ ಮೇಲೆ ಮಾಡುತ್ತಿರುವ ದಾಳಿಗಳ ಸಂದರ್ಭದಲ್ಲಿ ಹೆಚ್ಚಿನ ಸೈದ್ಧಾಂತಿಕ ಪ್ರಜ್ಞೆ, ಐಕ್ಯತೆ ಮತ್ತು ಪ್ರಚಾರ ಅಗತ್ಯವಾಗಿದೆ. ಅದೇ ವೇಳೆಗೆ ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಕೋಮುವಾದಿ ಸಿದ್ಧಾಂತ, ಜಾತಿವಾದ ಹಾಗೂ ಸಾಮ್ರಾಜ್ಯಶಾಹಿ ವಲಯಗಳು ಉಂಟುಮಾಡಿದ ಹೊಸ ಆರ್ಥಿಕ ಒತ್ತಡಗಳಿಂದ ಸಾಮ್ರಾಜ್ಯಶಾಹಿ-ವಿರೋಧಿ ಮೌಲ್ಯಗಳು ಹ್ರಾಸಗೊಳ್ಳುತ್ತಿದೆ. ನಾವು ಮಾರ್ಕ್ಸ್‌ವಾದಿ ಸಿದ್ಧಾಂತವನ್ನು ಜೋರಾಗಿ ಎತ್ತಿ ಹಿಡಿದು ಅದನ್ನು ಭಾರತದ ನಿರ್ದಿಷ್ಟ ಪರಿಸ್ಥಿತಿಗಳಿಗೆ ಅನ್ವಯಿಸದಿದ್ದರೆ ಈ ಶಕ್ತಿಗಳನ್ನು, ಸಿದ್ಧಾಂತಗಳನ್ನು ಎದುರಿಸಲು ನಮಗೆ ಸಾಧ್ಯವಾಗದು. ಕೋಮುವಾದ ಮತ್ತು ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧ ನಮ್ಮ ಹೋರಾಟದಲ್ಲಿ ಗಳಿಸಿದ ಅನುಭವವನ್ನು ನಮ್ಮ ಸೈದ್ಧಾಂತಿಕ ಹೋರಟವಾಗಿ ಪರಿವರ್ತಿಸಿ ಹೋರಾಟವನ್ನು ವಿವಿಧ ಮಟ್ಟಗಳಲ್ಲಿ ವಿವಿಧ ಸ್ವರೂಪಗಳಲ್ಲಿ ಜನಗಳ ನಡುವೆ ಒಯ್ಯಬೇಕು. ಈ ಸೈದ್ಧಾಂತಿಕ ಕೆಲಸವಲ್ಲದೆ ಇದಕ್ಕಿಂತ ಭಿನ್ನವಾದ ರಾಜಕೀಯ ಪ್ರಚಾರದ ಮೇಲೂ ಒತ್ತು ನೀಡಬೇಕಾದುದರ ಮಹತ್ವವನ್ನು ಅರಿಯಬೇಕು." (ಪರಿಚ್ಛೇದ 91) ಎಂದು ಹೊಸ ಸನ್ನಿವೇಶದಲ್ಲೂ ಪಕ್ಷದ ಸೈದ್ಧಾಂತಿಕ ಪ್ರಚಾರದ ಅವಶ್ಯಕತೆಯನ್ನು 14ನೇ ಮಹಾಧಿವೇಶನ ವಿವರಿಸಿತ್ತು.

ಈ ಪ್ರಚಾರ ಯಾವ ರೀತಿಯಿರಬೇಕು ಎಂದೂ ಅದು ವಿವರಿಸಿತ್ತು. "ಈ ಪ್ರಚಾರದಲ್ಲಿ ಎರಡು ವಿಧ ಮೊದಲನೆಯದು ಪಕ್ಷದ ಮೂಲಭೂತ ಕಾರ್ಯಕ್ರಮಾತ್ಮಕ ದೃಷ್ಟಿಕೋನವನ್ನು ಜನಜನಿತಗೊಳಿಸುವದು. ಎರಡನೆಯದ್ದು ನೀತಿಯ ಪ್ರಶ್ನೆಗಳ ದೈನಂದಿನ ಪ್ರಚಾರ ಇದರಲ್ಲಿ ನಾವು ರಾಜ್ಯ ಪಕ್ಷಗಳಿಗಿಂತ ಸ್ಪಷ್ಟವಾಗಿ ಭಿನ್ನವಾದ ಅವರ ನಿಲುವುಗಳನ್ನು ವಿಮರ್ಶಿಸುವ ನಮ್ಮ ನಿಲುವುಗಳನ್ನು ಪ್ರಚುರಪಡಿಸಬೇಕು. ಈ ಮೂರನ್ನು ಅಂದರೆ ಸೈದ್ಧಾಂತಿಕ, ನಮ್ಮ ಮೂಲಭೂತ ಕಾರ್ಯಕ್ರಮದ ಕುರಿತಾದ ಪ್ರಶ್ನೆಗಳು ಹಾಗೂ ದೈನಂದಿನ ನೀತಿ-ನಿಲುವುಗಳ ಪ್ರಶ್ನೆಗಳು ಇವುಗಳನ್ನು ನಮ್ಮ ಕೆಲಸವನ್ನು ನಡೆಸಬೇಕು. ಏಕೆಂದರೆ ಇವು ಮೂರೂ ಪರಸ್ಪರ ಸಂಬಂಧವುಳ್ಳಂತವು" ಎಂದು 14ನೇ ಮಹಾಧಿವೇಶನ ಹೇಳಿತ್ತು.

ದೈನಂದಿನ ಚಳುವಳಿಯೇ ಹೊರತು -ರಾಜಕೀಯ ಪ್ರಚಾರವಲ್ಲ

ಈಗಲೂ ಕೂಡಾ ನಮ್ಮ ದೈನಂದಿನ ಪ್ರಚಾರ-ಆಂದೋಲನ ಪ್ರಯತ್ನಗಳು ಇತರ ಪಕ್ಷಗಳಂತೆ ಜನಗಳ ಪ್ರಶ್ನೆಗಳ ಬಗ್ಗೆ ಚಳುವಳಿಯ ಮಟ್ಟದಲ್ಲೇ ಉಳಿದಿದೆ ಮೇಲೆ ಹೇಳಿರುವಂತೆ ರಾಜಕೀಯ ಪ್ರಚಾರದ ಮಟ್ಟ ತಲುಪಿಲ್ಲ ಎಂದು ಮದ್ರಾಸ್ ಮಹಾಧಿವೇಶನ ಟೀಕಿಸಿತ್ತು.

ಮುಂದುವರಿದು ಮಹಾಧಿವೇಶನ ಸಂಘಟನಾ ವರದಿ ಪಕ್ಷದ ಪ್ರಚಾರ-ಪ್ರಸಾರ ಹಾಗೂ ಸೈದ್ಧಾಂತಿಕ ಕೆಲಸಗಳಲ್ಲಿ ಹೊಸ ತಂತ್ರಜ್ಞಾನವನ್ನು ಹಾಗೂ ಸಮೂಹ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ,ಕಲ್ಪನಾಶಕ್ತಿಯಿಂದ ಬಳಸಬೇಕು ಎಂದು ನಿರ್ದೇಶಿಸಿತ್ತು. ವಿಡಿಯೋ, ಆಡಿಯೋ ಕ್ಯಾಸೆಟ್‌ಗಳು ಮೊದಲಾದ ಇಲೆಕ್ಟ್ರಾನಿಕ್ ಮಾಧ್ಯಮಗಳ ಬಳಕೆಯನ್ನು ಹಾಗೂ ನಮ್ಮ ಪತ್ರಿಕೆಗಳ ಗುಣಮಟ್ಟ ಉತ್ತಮ ಪಡಿಸಿಕೊಳ್ಳಲು ಆಧುನಿಕ ಸಂಪರ್ಕ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು ಎಂದೂ ಮಹಾಧಿವೇಶನ ಹೇಳಿತ್ತು.

ಈ ದಿಕ್ಕಿನಲ್ಲಿ ಕಳೆದ ಮೂರು ವರ್ಷಗಳಲ್ಲಿ ಪ್ರಯತ್ನ ನಡೆದಿವೆಯಾದರೂ ಇದರಿಂದ ನಮ್ಮ ಸೈದ್ಧಾಂತಿಕ ಕೆಲಸ ಸಾಕಷ್ಟು ಮುನ್ನಡೆ ಸಾಧಿಸಿದೆಯಾದರೂ ಪಕ್ಷದ ಪತ್ರಿಕೆ ದೈನಂದಿನ ಚಳುವಳಿಯನ್ನು ರಾಜಕೀಯ ಮಟ್ಟಕ್ಕೆ ಏರಿಸುವಲ್ಲಿ ತಮ್ಮ ಪಾತ್ರ ವಹಿಸಿದೆಯೊ ಎಂಬ ವಿಮರ್ಶೆ ಈಗ ನಡೆಯಬೇಕಾಗಿದೆ. ◆

ಆರ್ಥಿಕ ಸುಧಾರಣೆ ಎಂಬುದು ಬಡತನದ ಯೋಜನೆ !

'ಬಡತನದ' ಎಂದರೆ ಬಡತನ ಹೆಚ್ಚಿಸುವ ಯೋಜನೆ ಎಂದು ಆಶ್ಚರ್ಯವಾಗಬಹುದಲ್ಲವೆ? ಆದರೂ ನಿಜ. ಇದನ್ನು ಯಾರು ಹೇಳಿದರು ಎಂದು ಕೇಳಬಹುದು. ಉತ್ತರ ಇನ್ನೂ ಹೆಚ್ಚು ಆಶ್ಚರ್ಯಕರ. ಭಾರತದ ಯೋಜನಾ ಆಯೋಗವೆಂಬ ಬಹುಮುಖ್ಯ ಸರ್ಕಾರೀ ಆಯೋಗದ ಸದಸ್ಯ ಜಿ.ವಿ.ರಾಮಕೃಷ್ಣ ಈ ಮಾತನ್ನು ಹೇಳಿದ್ದಾರೆ.

ಅವರು ಹೇಳಿದ್ದು, ಹೇಳದೇ ಹೇಳಿದ್ದು ಎರಡನ್ನೂ ನೋಡೋಣ.ಅವರು ಹೇಳಿದ್ದು ಹೀಗೆ -ಅವಶ್ಯಕ ಸಾಮಗ್ರಿ ಮತ್ತು ವಿದ್ಯುತ್ತಿನ ದರಗಳು ಬರುವ ವರ್ಷಗಳಲ್ಲಿ ತೀವ್ರವಾಗಿ ಏರಲಿವೆ. ಇದು ಸದ್ಯ ನಡೆಯುತ್ತಿರುವ ಆರ್ಥಿಕ ಸುಧಾರಣೆಗಳ ಪರಿಣಾಮ. ದೆಹಲಿಯ ಇಂಡಿಯನ್ ಇನ್ಸಿಟ್ಯೂಟ್ ಅಫ್ ಮೇನೇಜ್ ಮೆಂಟ್‌ನವರು ಏರ್ಪಡಿಸಿದ್ದ ವಿಚಾರ ಸಂಕಿರಣವೊಂದರಲ್ಲಿ ಮಾತನಾಡುತ್ತಾ ಅವರು ಈ ಮೇಲಿನ ಮಾತುಗಳನ್ನು ಹೇಳಿದ್ದರು.

ಇದು ಹೇಗೆ ಸಾಧ್ಯ ಎಂದು ಕೇಳಬಹುದು ನೀವು. ಅವರ ಪ್ರಕಾರ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನಾವು ಕರೆದು ಮಣೆ ಹಾಕುತ್ತಿದ್ದೇವೆ ಉದಾಹರಣೆಗೆ ಹೇಳುವುದಾದರೆ ಕೇಂದ್ರ ಸರ್ಕಾರ ಹೊಸ ವಿದ್ಯುತ್ ನೀತಿಯನ್ನು ಜಾರಿಗೆ ತಂದಿದೆ. ಇಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಹೂಡಿದ ಬಂಡವಾಳದ ಮೇಲೆ ಶೇ. 16ರಷ್ಟು ಪ್ರತಿಫಲದ ಭರವಸೆಯನ್ನು ಸರ್ಕಾರ ನೀಡಿದೆ.

ಭರವಸೆ ನೀಡುತ್ತಿರುವುದು ಬರೀ ಶೇ 16 ರಷ್ಟು ಆಗಿದ್ದರೂ ವಾಸ್ತವದಲ್ಲಿ ಬಂಡವಾಳ ಹೂಡಿಕೆಯ ಬೆಲೆಯ ನಿರ್ಧಾರ ಮಾಡುವ ವ್ಯವಸ್ಥೆ ಇಲ್ಲದೇ ಇರುವುದು ಮತ್ತು ಇತರ ಕೆಲವು ಕಾರಣಗಳಿಂದಾಗಿ ಈ ಪ್ರತಿಫಲ ಶೇ 42 ಕ್ಕೂ ಹೆಚ್ಚಾಗುತ್ತದೆ.!!

ವಿದ್ಯುತ್ತಿನ ಅಸಮರ್ಪಕ ನಿರ್ವಹಣೆಯಿಂದಾಗಿ ಆರ್ಥಿಕದ ಎಲ್ಲ ವಲಯಗಳಿಗೂ ಈ ವಿದ್ಯುತ್ ಬೆಲೆ ಏರಿಕೆಯ ಬಿಸಿ ತಟ್ಟುತ್ತದೆ. ಪ್ರತಿ ಯೂನಿಟ್ ವಿದ್ಯುತ್ತಿಗೆ ರೂ 3.50 ರಷ್ಟು ಬೆಲೆ ಆದರೆ ಇದು ಎಲ್ಲ ಸರಕುಗಳ ಬೆಲೆಯನ್ನು ಏರಿಸುತ್ತದೆ.

ಇದು ಅವರು ಹೇಳಿದ್ದು. ಆದರೆ ಅವರು ಹೇಳದೇ ಇರುವದೂ ಇದೆ. ಅದು ದುಡಿಮೆಗೆ ಸಿಗುವ ಪ್ರತಿಫಲ ಇದೇ ಪ್ರಮಾಣದಲ್ಲಿ ಏರುವುದಿಲ್ಲ ಎನ್ನುವುದು. ಬದಲಿಗೆ ಹಲವರು ಉದ್ಯೋಗ ಕಳೆದುಕೊಳ್ಳಬಹುದು, ಸಂಬಳದಲ್ಲಿ ಕಡಿತವೂ ಉಂಟಾಗಬಹುದು

ಒಟ್ಟಾರೆಯಾಗಿ ಬಡತನವನ್ನು ತೀವ್ರವಾಗಿ ಹೆಚ್ಚಿಸುವ ಯೋಜನೆ ಇದು.

ಅರ್ಥವಾಯಿತೆ ಉದಾರೀಕರಣವೆಂಬ ಈ ಆರ್ಥಿಕಸುಧಾರಣೆ?

ನೆಸ್ಲೆ ನುಂಗಿ ನೀರು ಕುಡಿದದ್ದು

ನೆಸ್ಲೆ ಎಂಬ ಬಹುರಾಷ್ಟ್ರೀಯ ಕಂಪನಿ ಕಾಫಿ ಅವ್ಯವಹಾರದಲ್ಲಿ ದೊಡ್ಡ ಪ್ರಮಾಣದಲ್ಲಿ ನುಂಗಿದ್ದರ ಬಗ್ಗೆ ಐಕ್ಯರಂಗದಲ್ಲಿ ಓದಿದ್ದು ನಿಮಗೆ ನೆನಪಿರಬಹುದು.

ರಫ್ತಿಗಾಗಿ ಕಾಫಿ ಹರಾಜಿನಲ್ಲಿ ಕೂಗಿ ಕಾಫಿಯನ್ನು ಕಾಪಿ ಮಂಡಳಿಯಿಂದ ಪಡೆದ ಈ ಕಂಪನಿ ದೇಶದ ಕಾನೂನುಗಳ ಉಲ್ಲಂಘನೆ ಮಾಡಿ ಈ ಕಾಫಿಯನ್ನು ದೇಶದೊಳಗೇ ಮಾರಿ ಅಪಾರ ಲಾಭ ಗಳಿಸಿತ್ತು.

ಅನಂತರದಲ್ಲಿ ಈ ಅವ್ಯವಹಾರ ಬೆಳಕಿಗೆ ಬಂದು ವಿಚಾರಣೆ ನಡೆಸಲಾಯಿತು.ಈ ಕಂಪನಿ ತೆರೆಯ ಮರೆಯ ನಾಟಕಗಳನ್ನು ಆಡುತ್ತಾ ಸಂಭಾವಿತನಂತೆ ವರ್ತಿಸ ತೊಡಗಿತ್ತು. ಆದರೆ ಕಾಫಿ ಮಂಡಲಿಯಲ್ಲೇ ಈ ಅವ್ಯವಹಾರದ ಬಗ್ಗೆ ಗಲಭೆ ಉಂಟಾಗಿ ವಿಚಾರಣೆ ನಡೆಸುವ ಒತ್ತಡ ಬಂತು.

ಈಗ ಮಂಡಳಿಯ ಉಪಸಮಿತಿ ವಿಚಾರಣೆ ಮುಗಿಸುವ ಹಂತದಲ್ಲಿ ಇದೆ.ಆದರೆ ಆಗಲೇ ಅಂತಿಮ ನಿರ್ಣಯ ಆಗಿ ಹೋಗಿದೆ. ನೆಸ್ಲೆ ಎಂಬ ಈ ಕಂಪನಿ ಅಂತಹ ಅವ್ಯವಹಾರ ನಡೆಸಿದೆ ಎಂಬುದು ಸಿದ್ಧವಾಗಿಲ್ಲ ಎಂಬುದೇ ಈ ವಿಚಾರಣೆಯ ತೀರ್ಮಾನ!

1992-93 ರಲ್ಲಿ ನಡೆದ ಈ ಅವ್ಯವಹಾರದಲ್ಲಿ ತನಿಖೆ, ವಿಚಾರಣೆ ಎರಡನ್ನೂ ಇದು ಬೆಳಕಿಗೆ ಬಂದ ಕೆಲವೇ ದಿನಗಳಲ್ಲಿ ಮುಗಿಸಿರಬಹುದಾಗಿದ್ದರೂ ನೆಸ್ಲೆಗೆ ಎಲ್ಲ ತರಹದ ಆಟ ಆಡಲು ಅವಕಾಶ ನೀಡಲು ಇಷ್ಟು ದಿನಗಳವರಗೆ ವಿಚಾರಣೆಯನ್ನು ಎಳೆಯಲಾಯಿತು.

ನೆಸ್ಲೆ ಈಗ ನಿರ್ದೋಷಿ ಎಂದು ಸಿದ್ಧಮಾಡಿಕೊಂಡಿದೆ. ಬಹು ರಾಷ್ಟ್ರೀಯ ಕಂಪನಿಗಳ ಕೈಗಳು ಎಷ್ಟುದ್ದವಿರುತ್ತವೆ. ಎಂಬುದಕ್ಕೆ ಇದೊಂದು ಪುಟ್ಟ ಉದಾಹರಣೆ ಅಷ್ಟೆ.

ಕಂಪ್ಯೂಟರ್ ದೈತ್ಯರ ದಾಳಿ

ಐಬಿಎಮ್ ಎಂಬುದು ಅಮೆರಿಕಾದ ಕಂಪ್ಯೂಟರ್ ಕಂಪನಿ. ಇದು ಬಹುರಾಷ್ಟ್ರೀಯ ದೈತ್ಯ ಕಂಪನಿ. ಈ ಕಂಪನಿ ಈಗ ಭಾರತ ಸರ್ಕಾರದ ಕಂಪ್ಯೂಟರಿಕರಣದ ಕಂಟ್ರಾಕ್ಟರುಗಳನ್ನು ಪಡೆವ ಬಹು ದೊಡ್ಡ ಬೇಟೆಯಲ್ಲಿದೆಯಂತೆ. ಬಂಗಾರಪ್ಪನವರ ಕ್ಲಾಸಿಕ್ ಕಂಪ್ಯೂಟರ್ ಹಗರಣದ ಕತೆ ತಿಳಿದರಿಗೆಲ್ಲ ಈ ಕಂಪ್ಯೂಟರ್ ವ್ಯವಹಾರ ಗಳಲ್ಲಿ ಎಂತಹ ದೊಡ್ಡ ಪ್ರಮಾಣದ ಅವ್ಯವಹಾರ ನಡೆಸಬಹುದೆಂಬ ಅರಿವು ಇದ್ದೀತು.

ಈಗ ಐಬಿಎಮ್ ಭಾರತ ಸರ್ಕಾರದ ಮೇಲೆ ಇನ್ನಿಲ್ಲದ ಒತ್ತಡ ಹೇರುತ್ತಿದೆ. ಆಮದು ಸುಂಕವನ್ನು ತೀವ್ರವಾಗಿ ಕಡಿತ ಗೊಳಿಸಬೇಕು, ಹಾಗೇ ತನಗೇ ಕಂಪ್ಯೂಟರ್ ಖರೀದಿಗೆ ಆರ್ಡರ್ ಕೊಡಬೇಕೆಂಬುದು ಈ ಕಂಪನಿಯ ಒತ್ತಡ.

ಈ ಒತ್ತಡವೆಂದರೆ ಇದು ಸಾಮಾನ್ಯವಾದದ್ದೆಂದುಕೊಳ್ಳಬೇಡಿ. ಇಲ್ಲಿ ಎಲ್ಲರನ್ನೂ ಕೊಳ್ಳುವ ಆಮಿಷಗಳೂ ಇರುತ್ತದೆ. ಸರ್ಕಾರಗಳನ್ನು ತಲ್ಲಣಗೊಳಿಸಬಲ್ಲ ತಾಕತ್ತಿರುವ ಈ ಕಂಪನಿಗಳು ಅಪಾರ ಲಾಭ ಬಾಚಿಕೊಳ್ಳಲು ಇಂತಹ ವ್ಯವಹಾರಗಳಿಗೆ ಇಳಿಯುತ್ತವೆ.

ಇವಿಷ್ಟೇ ಅಲ್ಲ, ದೇಶದಲ್ಲಿನ ಕಂಪ್ಯೂಟರ್ ಉದ್ಯಮದ ಬೆಳವಣಿಗೆಗೆ ಇದು ಹೊಡೆತ ಕೊಡುತ್ತದೆ.

ನರಸಿಂಹರಾಯರ ಸರಕಾರದ 44ನೇ ತಿಂಗಳಲ್ಲಿ



-ಜಿ.ಎಸ್. ಮಣಿ

ಹಾಗೇ ಉದಾರೀಕರಣದ ಲಾಭ ವಿದೇಶೀ ಕಂಪನಿಗಳಿಗೇ ಹರಿಯುವುದು ಪ್ರಧಾನ ಮಂತ್ರಿ ನರಸಿಂಹರಾಯರು ಹೇಳುವಂತೆ ದೇಶದ ಬಡ ಜನತೆಗಲ್ಲ.

ಖಾಸಗೀಯವರಿಂದ ಅಭಿವೃದ್ಧಿ

ಖಾಸಗೀಕರಣದಿಂದ ಅಂತರ್‌ರಚನಾ ಸೌಕರ್ಯಗಳನ್ನು (ವಿದ್ಯುತ್, ಸಾಗಾಣಿಕೆ, ಸಂಪರ್ಕ ಇತ್ಯಾದಿ) ಹೆಚ್ಚಿಸಬಹುದು. ಈ ಕ್ಷೇತ್ರಗಳಲ್ಲಿ ಸ್ಪರ್ಧಾತ್ಮಕತೆ ಇರುವುದರಿದ ಉತ್ತಮ ಗುಣಮಟ್ಟದ ಬರುತ್ತದೆ. ಎಂಬುದು ಉದಾರೀಕರಣವಾದಿಗಳ ವಾದ. ಇಂತಹ ವಾದಗಳನ್ನು ಅವರು ಹೂಡುತ್ತಲೇ ಬಂದಿದ್ದಾರೆ.

ಆದರೆ ವಾಸ್ತವ? ಖಾಸಗಿಯವರಿಗೆ ಇಂತಹ ಸೌಕರ್ಯರಚನೆಗಳಲ್ಲಿ ಹಣ ಹೂಡಲು ಒಲವಿಲ್ಲ. ಯಾಕೆ?

ಈ ವಲಯದಿಂದ ಪ್ರತಿಫಲ ಬರಲು ಬಹಳ ವಿಳಂಬವಾಗುತ್ತದೆ. ಅವಧಿಗೆ ಮೊದಲೇ ಬೇರೆಯವರಿಗೆ ಮಾರುದು ಸುಲಭವಲ್ಲ ಇತ್ಯಾದಿ. ಒಂದೇ ಮಾತಿನಲ್ಲಿ ಹೇಳುವುದಾದರೆ ಖಾಸಗಿಯವರ ಲಾಭ ಪಿಪಾಸೆ ಇದರಿಂದ ತಣಿಯುವುದಿಲ್ಲ.

ಇದನ್ನು ದೇಶದ ಅರ್ಥಶಾಸ್ತ್ರಜ್ಞರೇ ಕಂಡುಕೊಂಡು ಹೇಳುತ್ತಿದ್ದಾರೆ ಅವರು ನಡೆಸಿದ ಅಧ್ಯಯನವೊಂದರಿಂದ ಇದು ತಿಳಿದು ಬಂದಿದೆ.

ಮುಂದೆ ದಾರಿ ಯಾವುದೋ ಅಭಿವೃದ್ಧಿಗೆ? ಆಮದು ಸುಂಕ ಶೂನ್ಯ?

ದೊಡ್ಡ ಯೋಜನೆಗಳಿಗೆ ಶೂನ್ಯ ಆಮದು ಸುಂಕ ವಿಧಿಸುವ ಅಂದರೆ ಆಮದು ಸುಂಕವೇ ಇಲ್ಲದಿರುವ ಸ್ಥಿತಿಯನ್ನು ಕೇಂದ್ರ ಸರ್ಕಾರ ತರಲಿದೆ. ದೇಶದ ದೊಡ್ಡ ಬಂಡವಾಳಿಗರ ಸಾಮ್ರಾಜ್ಯಶಾಹಿಗಳ ಅನುಕೂಲಕ್ಕಾಗಿ-ಲಾಭಕ್ಕಾಗಿ ಬರಲಿರುವ ಈ ನೀತಿ ದೇಶದ ಖಜಾನೆಗೆ ಅಪಾರ ನಷ್ಟ ತಂದೊಡ್ಡಿದೆ. ಅಲ್ಲದೆ ದೇಶದ ವಿದೇಶೀ ವ್ಯಾಪಾರ ಬಾಕಿಯನ್ನೂ ಇದು ಏರಿಸುತ್ತದೆ. ಅನಂತರದಲ್ಲಿ ಬರುವ ಬಿಕ್ಕಟ್ಟುಗಳ ಸರಣಿಯೇ ಇರುತ್ತದೆ. **ದೇಶದ ಹಿತವಂತೂ ಸರ್ಕಾರದ ಉದ್ದೇಶವಲ್ಲ ಅಲ್ಲವೆ?**

...ಾಹೇಬರ ಸಮಕ್ಷಮ ನಡೆದ ಒಂದು ಒಪ್ಪಂದ

...ಪೆನಿ ದೂರವಾಣಿ ಇಲಾಖೆಯನ್ನು ಮಾರಾಟಮಾಡುತ್ತಿದೆ

ರೇಖೆಯನ್ನು, ಸಂಪರ್ಕ ಮಂತ್ರಿ ಸುಖರಾಂ ಅವರ ಜಪಾನ್ ಭೇಟಿಯ ಸಂದರ್ಭದಲ್ಲಿ ಮಂಡಿಸಿರುತ್ತಾರೆ. ಇದರಿಂದ ವ್ಯಕ್ತವಾಗುವುದೇನೆಂದರೆ, ಭಾರತ ಸರ್ಕಾರದ ಅತ್ಯಂತ ಲಾಭ ಗಳಿಸುವ ಈ ಇಲಾಖೆಯನ್ನು ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಒಪ್ಪಿಸುವ ಒಂದು ತಂತ್ರವಾಗಿದೆ.

1994 ಮೇ 13ರಂದು ಪಾರ್ಲಿಮೆಂಟಿನಲ್ಲಿ ಮಂಡಿಸಿದ ಹೊಸ ದೂರವಾಣಿ ನೀತಿ (ನ್ಯೂ ಟೆಲಿಕಾಂ ಪಾಲಿಸಿ)ಯ ಉದ್ದೇಶ-

1. ಬೇಕಾದವರಿಗೆ ಕೂಡಲೇ ದೂರವಾಣಿ ಸೌಲಭ್ಯವನ್ನು ಒದಗಿಸುವುದು.
2. ಕಡಿಮೆ ದರದಲ್ಲಿ ಎಲ್ಲರಿಗೂ ದೂರವಾಣಿ ಸೇವೆ
3. ವಿವಿಧ ತರಹದ ಆಧುನಿಕ ದೂರವಾಣಿ ಸೇವೆಯನ್ನು ಎಲ್ಲರಿಗೂ ಒದಗಿಸುವುದು.

ಎಂಟನೇ ಪಂಚವಾರ್ಷಿಕ ಯೋಜನೆಯಲ್ಲಿ 100 ಲಕ್ಷ ದೂರವಾಣಿಯ ಬೇಡಿಕೆಯನ್ನು ಒದಗಿಸಬೇಕಾಗಿದೆ. ಇದಕ್ಕೆ ಬೇಕಾದ ಹಣ ಸರ್ಕಾರದ ಬಳಿಯಲ್ಲಿಲ್ಲ, ಆದ್ದರಿಂದ ನಾವು ಖಾಸಗಿ ಕಂಪೆನಿಯವರಿಗೆ ಅನುಮತಿ ನೀಡಿ ಬಹಳಷ್ಟು ಸಂಪತ್ತುಗಳಿಸಲು ಸಾಧ್ಯವಾಗಬಹುದೆಂದು ಸರ್ಕಾರದ ನಿರೀಕ್ಷೆ.

100 ಲಕ್ಷ ದೂರವಾಣಿಗಳಿಗೆ ಬೇಡಿಕೆ ಇದೆ ಎನ್ನುವುದು ನಿಜವಲ್ಲವೆಂದು ಬಹಳಷ್ಟು ಸ್ಪಷ್ಟವಾಗಿದೆ. ಹಿಂದಿನ ಲೆಕ್ಕಾಚಾರದ ಪ್ರಕಾರ ೭೫ ಲಕ್ಷ ದೂರವಾಣಿ ಲೈನುಗಳನ್ನು ಕೊಡಲು ನಮ್ಮ ದೂರವಾಣಿ ಇಲಾಖೆಯ ಸಂಪನ್ಮೂಲಗಳಿಂದ ಸಾಧ್ಯವಾಗುತ್ತದೆ. ಆದ್ದರಿಂದ ಇಲ್ಲಿ ಬೇಡಿಕೆಯನ್ನು ಹೆಚ್ಚು ತೋರಿಸಿ ಖಾಸಗೀಕರಣ ಮಾಡಲು ಪ್ರಬಲವಾದ ಒಂದು ನೆಪವನ್ನು ತೋರಿಸುತ್ತಿದ್ದಾರಷ್ಟೆ. ಏಕೆಂದರೆ ಹೊಸ ಆರ್ಥಿಕ ನೀತಿಯ ಮೂಲಭೂತ ಉದ್ದೇಶವೇ ವಿದೇಶೀ ಬಂಡವಾಳವನ್ನು ಆಕರ್ಷಿಸುವುದು.

ಟೆಲಿಕಾಂ ಸರ್ಕಲ್‌ಗಳಲ್ಲಿ ಸೇವೆ ನಡೆಸಲಿಕ್ಕೆ ಭಾರತದಲ್ಲಿ ರಿಜಿಸ್ಟರ್ ಮಾಡಿದ ಕಂಪೆನಿಯವರಿಗೆ ಕೊಡುತ್ತೇನೆಂದು ಮೊದಲು ಹೇಳಿದರು. ಹೊಸ ಆಜ್ಞೆ ಏನೆಂದರೆ 5 ಲಕ್ಷ ಟೆಲಿಫೋನ್ ಲೈನ್ ಕೆಲಸ ಮಾಡಿಸಿ ಅಭ್ಯಾಸವಿರುವ ಕಂಪೆನಿಯವರಿಗೆ ಮಾತ್ರ ಪರವಾನಿಗೆ ಕೊಡುತ್ತೇವೆನ್ನುವುದು ಸ್ಪಷ್ಟ. ನಮ್ಮ ದೇಶದಲ್ಲಿ

ಪುಟ 6 ನೋಡಿ

ಇದು ನಿಮಗೆ ಗೊತ್ತೇ?

ನರಸಿಂಹರಾವ್ ಸರಕಾರ ಬಾಯ್ತೆರೆದರೆ 'ಜಾಗತೀಕರಣ'ದ ಮಾತಾಡುತ್ತದೆ. ಆದರೆ ಜಗತ್ತಿನಲ್ಲಿ ಮೂಲಭೂತ ದೂರಸಂಪರ್ಕ ಸೇವೆಗಳನ್ನು ಖಾಸಗೀಕರಿಸಿರುವ ದೇಶಗಳು ಕೈ ಬೆರಳೆಣಿಕೆಯಷ್ಟು, ಖಾಸಗೀವಾಲಾಗಳ ಸ್ವರ್ಗವೆನಿಸುವ ಅಮೇರಿಕಾದಲ್ಲೂ ವಿದೇಶೀ ಕಂಪೆನಿಗಳು ಶೇ. 20ಕ್ಕಿಂತ ಹೆಚ್ಚು ಹತೋಟಿ ಹೊಂದಿರಬಾರದು ಎಂಬ ನಿಯಮವಿದೆ. ಯುರೋಪಿನ ಬಂಡವಾಳಶಾಹಿ ದೇಶಗಳು ಯಾವತ್ತೂ ವಿದೇಶೀಯರಿಗೆ ಈ ವಲಯದಲ್ಲಿ ಕಾಲಿಡಲೂ ಬಿಡುತ್ತಿಲ್ಲ, ಇದಕ್ಕೆ ಕಾರಣ ದೂರಸಂಪರ್ಕದ ಖಾಸಗೀಕರಣ ಯಾವುದೇ ದೇಶದ ಭದ್ರತೆಗೆ ಅಪಾಯಕಾರಿ. ಆದರೆ ದೇಶ ಮಾರಹೊರಟಿರುವ ರಾವ್ ಸರಕಾರಕ್ಕೆ ಈ ಅಪಾಯದ ಪರಿವೆಯೆಲ್ಲಿ?

'ಲೈಸೆನ್ಸ್ ರಾಜ್ಯ' ಹೋಯ್ತು 'ಟೆಂಡರ್ 'ರಾಜ್ಯ' ಬಂತು

'ಉದಾರೀಕರಣ' ದಿಂದ 'ಲೈಸೆನ್ಸ್-ಪರ್ಮಿಟ್' ಎಂಬ ಭ್ರಷ್ಟ ವ್ಯವಸ್ಥೆ ನಿರ್ನಾಮವಾಗುತ್ತಿದೆ ಎಂದು ಹೇಳಲಾಗುತ್ತಿದೆ. ಆದರೆ ಅದರ ಸ್ಥಾನದಲ್ಲಿ ಅದಕ್ಕಿಂತಲೂ ಭ್ರಷ್ಟಗೊಂಡಿರುವ 'ಟೆಂಡರ್ ರಾಜ್ಯ' ಬಂದಿದೆ ಎನ್ನತ್ತಾರೆ ಸಿಪಿಐ(ಎಂ) ಸಂಸತ್ ಸದಸ್ಯ ಕಾಂ. ನೀಲೋತ್ಪಲ್ ಬಸು.

ದೂರಸಂಪರ್ಕ ವಲಯದಲ್ಲಿ ಸರಕಾರದ ವ್ಯವಹಾರಗಳನ್ನು ನೋಡಿದರೆ ಇನ್ನೊಂದು ಹಗರಣ ಮೂಡಿಬರುತ್ತಿರುವಂತಿದೆ ಎಂದು ಕಾಂ. ಬಸು ಹೇಳಿದ್ದಾರೆ. ಈಗಿನ ದೂರಸಂಪರ್ಕ ಮಂತ್ರಿ ಸುಖ್ ರಾಂ ಗ್ಯೂ ಹಗರಣಕ್ಕೂ ಹತ್ತಿರದ ನಂಟು, 1989ರಲ್ಲಿ ಸಕ್ಕರೆ ಹಗರಣದಲ್ಲಿ ಸಿಲುಕಿಕೊಂಡಾತ ಈತನ ನೇತೃತ್ವದಲ್ಲಿ ದೂರಸಂಪರ್ಕ ಇಲಾಖೆಯ ಖಾಸಗೀಕರಣ ಒಂದು ಅತ್ಯಂತ ಭ್ರಷ್ಟ ಆಚರಣೆಯಾಗಿ ಅವನತಿ ಹೊಂದುತ್ತಿದೆ ಎಂದು ಇತ್ತೀಚೆಗೆ ಅಮೇರಿಕನ್ ವಾಣಿಜ್ಯ ಕಾರ್ಯದರ್ಶಿ ಬ್ರೌನ್ ಭೇಟಿ ಕಾಲದಲ್ಲಿ ಸ್ಪಷ್ಟವಾಗಿದೆ.

ಬ್ರೌನ್ ಸಾಹೇಬರು ಬೇಕೆನ್ನುತ್ತಾರೆಯೇ?
ಹಾಗಾದರೆ 'ರಾಷ್ಟ್ರೀಯ' ನೀತಿಯನ್ನು ಬದಲಿಸಿ!

ಈ 'ಟೆಂಡರ್ ರಾಜ್ಯ'ದಲ್ಲಿ ಟೆಂಡರ್‌ಗಳನ್ನು, ಸರ್ಕಾರದ 'ರಾಷ್ಟ್ರೀಯ' ನೀತಿಗಳನ್ನೂ ಬಹುರಾಷ್ಟ್ರೀಯ ಕಂಪೆನಿಗಳ ಪರವಾಗಿ ಸರಕಾರವೇ 'ರಿಗ್' ಮಾಡುತ್ತಿದೆ, ಅಂದರೆ ಮೋಸದಲ್ಲಿ ಟೆಂಡರುಗಳು ಬಹುರಾಷ್ಟ್ರೀಯ ಕಂಪೆನಿಗಳ ಪರವಾಗುವಂತೆ ಮಾಡುತ್ತಿದೆ ಎಂದು ಈ ವಲಯದ ಅಧ್ಯಯನ ಮಾಡಿರುವ ಡಾ. ಪಿ. ಪುರಕಾಯಸ್ಥರವರೂ ಹೇಳಿದ್ದಾರೆ.

ಖಾಸಗೀಕರಣದ ಪರವಾಗಿರುವ "ರಾಷ್ಟ್ರೀಯ ದೂರಸಂಪರ್ಕ ನೀತಿ"ಯನ್ನು ಸಂಸತ್ತಿನಲ್ಲಿ ಪಾಸು ಮಾಡಿಕೊಂಡಿರುವ ಸರಕಾರವೇ ಈ 'ರಾಷ್ಟ್ರೀಯ' ಎಂದು ತಾನೇ ಹೆಸರಿಟ್ಟ ನೀತಿಯಲ್ಲೂ ಎರಡು ಪ್ರಮುಖ ಬದಲಾವಣೆ ಮಾಡಿದೆ - ಸಂಸತ್ತಿಗೆ ತಿಳಿಸದೇನೇ ಇವುಗಳಲ್ಲಿ ಒಂದೊಂದು ಟೆಂಡರ್ ಕೂಡಾ ಇಲ್ಲದೆಯೇ ತಮಿಳುನಾಡು-ಕರ್ನಾಟಕಗಳಲ್ಲಿ ಟೆಲಿಕಾಂ ಸೇವೆ ಒದಗಿಸಲು ಅಮೇರಿಕಾದ ಯು.ಎಸ್. ವೆಸ್ಟ್ ಕಂಪೆನಿಗೆ ಅವಕಾಶ. ಈ ಉಲ್ಲಂಘನೆಯಲ್ಲಿ ಬ್ರೌನ್ ಸಾಹೇಬರ ನೇತೃತ್ವದ ಅಮೇರಿಕನ್ ಉದ್ಯಮಿಗಳ ನಿಯೋಗದ ಕೈವಾಡವಿದೆಯೆಂಬುದು ಈಗ ಸ್ವಯಂ ವೇದ್ಯ ಎನ್ನುತ್ತಾರೆ ಡಾ. ಪುರಕಾಯಸ್ಥ.

ದೇಶದೊಳಗೆ



-ವಿಶ್ವ

ಕಾರ್ಮಿಕರ ಹಿತ ರಕ್ಷಣೆನಿಟ್ಟಿನಲ್ಲಿ ಸುಪ್ರೀಂ ಕೋರ್ಟಿನ ಈ ಆದೇಶ ಅತ್ಯಂತ ಮಹತ್ವಪೂರ್ಣ ಗಿದೆ. ಇಂಥ ಎಷ್ಟೋ ಕಾನೂನುಗಳು ತೀರ್ಪು ಗಳು ಇವೆ ಅವುಗಳ ಅನುಷ್ಠಾನ ಮುಖ್ಯ ಅಲ್ಲವೆ? ಅದಕ್ಕಾಗಿ ನ್ಯಾಯಾಂಗದ ಇಂಥ ತೀರ್ಪಿನ ನೈತಿಕ ಬೆಂಬಲದೊಂದಿಗೆ ಹೋರಾ ಟಗಳನ್ನು ತೀಕ್ಷ್ಣಗೊಳಿಸುವುದು ಅವಶ್ಯ.

ಭೂಪಾಲ್ ದುರಂತ: ಸಂತ್ರಸ್ತರ ಮುಗಿಯದ ಗೋಳು

ಜಗತ್ತಿನ ಅತ್ಯಂತ ಭೀಕರ ಕೈಗಾರಿಕಾ ದುರಂತವೆಂದು ಇತಿಹಾಸದಲ್ಲಿ ದಾಖಲಾಗಿದೆ

ವಿಜಯನಗರದ 1432 ಕುಟುಂಬಗಳ ಪೈಕಿ 1144 ಕುಟುಂಬಗಳ ಕತೆಯೂ ಇದೇ ಆಗಿದೆ. ಜವಳಿ ಕಾರ್ಮಿಕರೇ ಹೆಚ್ಚಾಗಿ ವಾಸಿಸುತ್ತಿರುವ ಚಾಂದ್‌ಬಾಡ್‌ನಲ್ಲಿ ಕೂಡ ಪರಿಸ್ಥಿತಿ ಇದಕ್ಕಿಂತ ಬೇರೆಯಾಗಿಲ್ಲ.

ಅನಿಲಸೋರಿಕೆಯಿಂದ ಪರಿಣಾಮಕ್ಕೊಳ ಗಾದ ಪ್ರದೇಶಗಳ ಜನರು ಈಗಲೂ ರಕ್ತಹೀ ನ್ನತೆ, ಕ್ಷಯ(ಟಿಬಿ), ಅಸ್ತಮಾ, ಮಾನಸಿಕ ಅಸ್ವಸ್ಥತೆ, ಮಹಿಳೆಯರದೇ ಆದ ವಿಶೇಷ ಕಾಯಿಲೆಗಳು, ರಕ್ತ ಕಾರುವಿಕೆ, ಗಂಟಲುತು ರಿಕೆ, ಎದೆ, ಕೈಕಾಲು ನೋವು, ಜ್ವರ ತಲೆಸು ತ್ತುವಿಕೆ, ಮೊದಲಾದವುಗಳಿಂದ ನರಳುತ್ತಿ

(ಐ) ನಾಯಕ ಎನ್.ಡಿ.ತಿವಾರಿ ಅವರನ್ನು 'ದೇಶದ್ರೋಹಿ' ಎಂದು ಟೀಕಿಸಿದ್ದಕ್ಕಾಗಿ ಉತ್ತರ ಪ್ರದೇಶ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರಿಗೆ ರಾಜ್ಯ ವಿಧಾನ ಪರಿಷತ್ತಿನ ಸಭಾಪತಿ ಫೆಬ್ರವರಿ 6ರಂದು ಸದನದಲ್ಲಿ ಛೀಮಾರಿ ಹಾಕಿದರು. ಇದೊಂದು ಅಭೂತ ಪೂರ್ವ ಕ್ರಮವಾಗಿದೆ.

ಆಕ್ಷೇಪಾರ್ಹ ಟೀಕೆಗೆ ಸಂಬಂಧಿಸಿ ಕ್ಷಮೆ ಕೋರಬೇಕೆಂದು ವಿಧಾನ ಸಭೆಯಲ್ಲಿ ಪ್ರತಿಪ ಕ್ಷಗಳು ಹಿಡಿದ ಪಟ್ಟಿಗೆ ಮುಲಾಯಂ ಜಗ್ಗಲಿಲ್ಲ.

ಈ ನಡುವೆ, ಮುಖ್ಯಮಂತ್ರಿಗೆ ವಾಗ್ದಂ ಡನೆ ವಿಧಿಸಿದ ಹಂಗಾಮಿ ಸಭಾಪತಿ ನಿತ್ಯಾನಂ ದಸ್ವಾಮಿ ವಿರುದ್ಧ ಆಳುವ ಎಸ್.ಪಿ.-ಬಿ.ಎಸ್.ಪಿ ಮೈತ್ರಿಕೂಟ ಅವಿಶ್ವಾಸ ಗೊತ್ತುವಳಿಯೊಂ ದನ್ನು ಮಂಡಿಸಿದೆ.

ಆಂಧ್ರ: ಸ್ಥಳೀಯ ಸಂಸ್ಥೆ ಚುನಾವಣೆ

ಆಂಧ್ರ ಪ್ರದೇಶದ ಮಂಡಲ ಮತ್ತು ಜಿಲ್ಲಾ ಪರಿಷತ್ ಕ್ಷೇತ್ರಗಳಿಗೆ ಮಾರ್ಚ್ 6 ಮತ್ತು 10ರಂದು ಚುನಾವಣೆಗಳು ನಡೆಯು ತ್ತಿವೆ. ನಗರಸಭೆಗಳು ಹಾಗೂ ಐದು ಮಹಾ ನಗರ ಪಾಲಿಕೆಗಳ ಆಯ್ಕೆಗೆ ಮಾರ್ಚ್ 19ರಂದು ಮತದಾನ ನಡೆಯುತ್ತದೆ. ಗ್ರಾಮ ಪಂಚಾಯ ತಿಗಳಿಗೆ ಇದೇ ಅವಧಿಯಲ್ಲಿ ನಡೆಯಬೇಕಿದ್ದ ಚುನಾವಣೆಗಳನ್ನು ಏಪ್ರಿಲ್‌ಗೆ ಮುಂದೂಡಲಾ ಗಿದೆ.

ಕಾಂಗ್ರೆಸ್(ಐ)ನಿಂದ ಅರ್ಜುನ್ ಸಿಂಗ್ ವಜಾ

ಕಾಂಗ್ರೆಸ್(ಐ)ನ ಹಿರಿಯ ನಾಯಕ ಹಾಗೂ ಮಾಜಿ ಕೇಂದ್ರ ಸಚಿವ ಅರ್ಜುನ್ ಸಿಂಗ್ ಅವರನ್ನು ಪಕ್ಷದಿಂದ ಆರುವರ್ಷಗಳ ಕಾಲ ವಜಾಮಾಡಲಾಗಿದೆ. ಪಕ್ಷದ ಶಿಸ್ತು ಸಮಿತಿ ಫೆ. 7ರಂದು ಈ ನಿರ್ಧಾರ ಕೈಗೊಂಡಿತು.

ಇದಕ್ಕೆ ಮುಂಚೆ ಅರ್ಜುನ್‌ರನ್ನು ವಜಾ ಮಾಡಿ ಷೋಕಾಸ್ ನೋಟೀಸ್ ನೀಡಲಾಗಿತ್ತು.

ಆರ್ಥಿಕ ಸುಧಾರಣೆ, ಬಾಬರಿ ಮಸೀದಿ ವಿವಾದ ಮೊದಲಾದವು ಪ್ರಮುಖ ವಿಷಯ ಗಳಿಗೆ ಸಂಬಂಧಿಸಿ ಭಿನ್ನಮತ ವ್ಯಕ್ತಪಡಿಸಿದ ಅರ್ಜುನ್ ಸಿಂಗ್ ಪಕ್ಷದ ನಾಯಕತ್ವದ ವಿರುದ್ಧ ಬಂಡೆದಿದ್ದರು.

XV ನೇ ಸಿಪಿಐ(ಎಂ) ಮಹಾಧಿವೇಶನ

ಚಂಡೀಗಢ, ಏಪ್ರಿಲ್ 3-8, 1995

ಉದ್ಯೋಗಿಗಳ ಆರೋಗ್ಯ ರಕ್ಷಣೆ; ಮಹತ್ವದ ತೀರ್ಪು

ಕಲ್ನಾರು ಮತ್ತು ಗಣಿಗಳಂಥ ಅಪಾಯ ಕಾರಿ ಉದ್ಯಮಗಳಲ್ಲಿನ ಉದ್ಯೋಗಿಗಳ ಆರೋಗ್ಯ ರಕ್ಷಣೆಗೆ ಸಂಬಂಧಿಸಿ ಸುಪ್ರೀಂಕೋರ್ಟು ಜನ ವರಿ 31ರಂದು ಒಂದು ಮಹತ್ವದ ತೀರ್ಪು ನೀಡಿದೆ.

ಕೆಲಸಕ್ಕೆ ಸೇರಿದಂದಿನಿಂದ ಪ್ರತಿಯೊಬ್ಬ ಉದ್ಯೋಗಿಗೆ ಕನಿಷ್ಠ 40 ವರ್ಷ ಆಗುವ ತನಕ ಅವನ -ಅವಳ ಆರೋಗ್ಯ ಸ್ಥಿತಿಯ ದಾಖಲೆ ಯನ್ನು ಉದ್ಯಮಿಗಳು ಇಟ್ಟುಕೊಳ್ಳಬೇಕು. ಈ ದಾಖಲೆಯನ್ನು ನೌಕರರು ನಿವೃತ್ತಿಹೊಂದಿದ ಅಥವಾ ಕೆಲಸವನ್ನು ಬಿಟ್ಟು 15 ವರ್ಷಗಳವ ರೆಗೂ ಕಾಪಾಡಿಕೊಂಡು ಬರಬೇಕು ಇದು ತೀರ್ಪಿನ ಸಾರಾಂಶವಾಗಿದೆ. ಈ ತೀರ್ಪು ಕೊಟ್ಟ ನ್ಯಾಯಪೀಠದಲ್ಲಿ ಮುಖ್ಯನ್ಯಾಯಮೂರ್ತಿ ಎ.ಎಂ. ಅಹಮದಿ ಅವರೂ ಇದ್ದರು.

ಕಲ್ನಾರು, ಗಣಿಯಂಥ ಅಪಾಯಕಾರಿ ಕೈಗಾರಿಕೆಗಳಲ್ಲಿನ 'ಸುಪ್ತಕೊಲೆಗಡುಕನ' ಹತೋ ಟಿಗೆ ಕ್ರಮ ಮತ್ತು ಅಲ್ಲಿನ ವಾತಾವರಣದಿಂದ ಉಂಟಾಗುವ ರೋಗದ ಪತ್ತೆಗೆ ಸರಿಯಾದ ತಪಾಸಣೆ ವ್ಯವಸ್ಥೆಯನ್ನು ರೂಪಿಸುವಂತೆ ಉದ್ಯ ಮಿಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯೊಂದನ್ನು ಸಲ್ಲಿಸಲಾಗಿತ್ತು. ರಾಜಸ್ಥಾನದ ಗ್ರಾಹಕ ಶಿಕ್ಷಣ ಹಾಗೂ ಸಂಶೋಧನೆ ಕೇಂದ್ರ ದೇಶದ ಉಚ್ಚ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿತ್ತು.

ಭೂಪಾಲ್ ಅನಿಲ ದುರಂತ. ಇದು ಸಂಭ ವಿಸಿ ಒಂದು ದಶಕವೇ ಕಳೆದು ಹೋಗಿದೆ. ಹತ್ತು ವರ್ಷಗಳೇ ಉರುಳಿದರೂ ದುರಂತದ ಸಂತ್ರಸ್ತರಿಗೆ ಮಾತ್ರ ಇನ್ನೂ ಸರಿಯಾದ ಪರಿಹಾರ ದೊರಕಿಲ್ಲ.

ಅವರಿಗೆ ದೊರಕಿರುವುದು ಕೇವಲ ಆಶ್ವಾ ಸನೆಗಳು. ಸಂತ್ರಸ್ತರ ವಿಚಾರಗಳನ್ನು ಪರಿಶೀಲಿ ಸಲು ನೇಮಿಸಲಾಗಿರುವ ಸರಕಾರಿ ಯಂತ್ರ ಗಳು ಭ್ರಷ್ಟಾಚಾರ ನಡೆಸುತ್ತಿರುವುದು ದುರಂ ತದ ದುರಂತವಾಗಿದೆ. ಕಲ್ಯಾಣ ಕಮಿಷನರ್ ಮತ್ತು ಕ್ಲೇಮ್ಸ್ ಕೋರ್ಟ್‌ಗಳು ಭ್ರಷ್ಟಾಚಾರದ ತಾಣವಾಗಿ ಪರಿಣಮಿಸಿದ್ದು ಸಂತ್ರಸ್ತರ ಜೀವ ಹಿಂಡುತ್ತಿವೆ.

ಜಹರೀಲಿ ಗ್ಯಾಸ್ ಕಾಂಡ್ ಸಂಘರ್ಷ ಮೋರ್ಚಾ, ಪೀಡಿತ್ ಮಹಿಳಾ ಕರ್ಮಚಾರಿ ವಿಕಾಸ ಯೂನಿಯನ್ ಮತ್ತು ಜನವಾದಿ ಮಹಿಳಾ ಸಂಘಟನೆಗಳು ಇತ್ತೀಚೆಗೆ ನಡೆಸಿದ ಒಂದು ಸಮೀಕ್ಷೆ ಅನೇಕ ಆಘಾತಕಾರಿ ಅಂಶ ಗಳನ್ನು ಬಯಲಿಗೆಳೆದಿದೆ.

ದುರಂತಕ್ಕೆ ಕಾರಣವಾದ ಬಹುರಾಷ್ಟ್ರೀಯ ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ಹತ್ತಿರವೇ ಇರುವ ಜೆಪಿನಗರ ಮತ್ತು ಛೋಳಾ ಪ್ರದೇಶಗಳಲ್ಲಿ ವಾಸಿಸುತ್ತಿರುವ 600 ಕುಟುಂಬ ಗಳ ಪೈಕಿ 515 ಕುಟುಂಬಗಳಿಗೆ ಇದುವರೆಗೆ ಒಂದೇ ಒಂದು ಪೈಸೆಯೂ ಪರಿಹಾರ ಸಿಕ್ಕಿಲ್ಲ.

ದ್ದಾರೆ.

ಪರಿಹಾರಕ್ಕಾಗಿ ಕಾಯುತ್ತಿರುವ ಜನರು ಸಾಯುತ್ತಿರುವ ಪ್ರಮಾಣ ಹೆಚ್ಚುತ್ತಿದೆ. ಹುಸಿ ಆಶ್ವಾಸನೆಗಳಿಂದ ಸಂತ್ರಸ್ತ ಜನರು ಬೇಸತ್ತಿ ದ್ದಾರೆ. ಅವರು ಈಗ ಹೊಸ ಹೊಸ ಹೋರಾಟಗಳಿಗೆ ಅಣಿಯಾಗುತ್ತಿದ್ದಾರೆ. ಸಾಮ್ರಾ ಜ್ಯಶಾಹಿಯ ಲಾಭ ಬಡುಕ ಪ್ರವೃತ್ತಿಯ ವಿರುದ್ಧ ಒಂದು ಅರ್ಥಪೂರ್ಣವಾದ ಚಳುವ ಳಿಯನ್ನು ರೂಪಿಸುವ ಆಶ್ವಾಸನೆ ಇದರಿಂದ ಮೊಳೆತಿದೆ.

ಸಂಪೂರ್ಣ ಸಾಕ್ಷರತೆ ತ್ರಿಪುರಾ ಗುರಿ

1996ರೊಳಗೆ ರಾಜ್ಯದಲ್ಲಿ ಸಂಪೂರ್ಣ ಸಾಕ್ಷರತೆ ಯನ್ನು ಸಾಧಿಸುವ ಕಾರ್ಯಕ್ರಮ ವನ್ನು ತ್ರಿಪುರಾದ ಎಡರಂಗ ಸರಕಾರ ಹಮ್ಮಿ ಕೊಂಡಿದೆ.

ಇದಕ್ಕಾಗಿ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ ಸಾವಿರಾರು ಶಾಲೆಗಳನ್ನು ತೆರೆಯಲಾಗಿದೆ. ನಿಗದಿತ ಸಮಯದೊಳಗೆ ಗುರಿ ಸಾಧಿಸುವ ಪಣದೊಂದಿಗೆ ನೂರಾರು ಕಾರ್ಯಕರ್ತರು ಸಾಕ್ಷರತೆ ಆಂದೋಲನಕ್ಕೆ ಧುಮುಕಿದ್ದಾರೆ.

ಮುಲಾಯಂಸಿಂಗ್‌ಗೆ ಛೀಮಾರಿ

ಮಾಜಿ ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್

ಸಿಪಿಐ(ಎಂ) ಹರ್ಯಾಣ ರಾಜ್ಯ ಸಮ್ಮೇಳನ

ಸಿಪಿಐ(ಎಂ) ಹರ್ಯಾಣ ರಾಜ್ಯ ಆನೇ ಸಮ್ಮೇಳನ ಜನವರಿ 2? ಮತ್ತು 29ರಂದು ಕರ್ನಾಲ್‌ನಲ್ಲಿ ನಡೆಯಿತು. ಮೊದಲ ದಿನ ಹಳೆ ಸಬ್ಜಿ ಮಂಡಿಯಲ್ಲಿ ಏರ್ಪಡಿಸಲಾಗಿದ್ದ ರ್‍ಯಾಲಿಯಲ್ಲಿ ಸಾವಿರಾರು ಜನರು ಭಾಗವಹಿ ಸಿದ್ದರು. ಪಕ್ಷದ ಪ್ರಧಾನ ಕಾರ್ಯದರ್ಶಿ ಹರಿಕಿಷನ್‌ಸಿಂಗ್ ಸುರ್ಜಿತ್ ಮತ್ತು ಅನೇಕ ಸ್ವಾತಂತ್ರ್ಯ ಹೋರಾಟಗಾರರು ರ್‍ಯಾಲಿಯನ್ನು ದ್ದೇಶಿಸಿ ಭಾಷಣ ಮಾಡಿದರು.

ಶತಾಯುಷಿ ಸ್ವಾತಂತ್ರ್ಯ ಸೇನಾನಿ ಬಾಬಾ ಬಾಗ್ ಸಿಂಗ್(113 ವರ್ಷ) ಧ್ವಜಾರೋ ಹಣ ಮಾಡುವ ಮೂಲಕ ಉದ್ಘಾಟನಾ ಅಧಿವೇಶನ ಆರಂಭವಾಯಿತು. ಪಾಲಿಟ್ ಬ್ಯೂರೋ ಸದಸ್ಯ ಸೀತಾರಾಂ ಯೆಚೂರಿ ಸಮ್ಮೇಳನವನ್ನು ಉದ್ಘಾಟಿಸಿದರು.

ರಾಜ್ಯ ಸಮಿತಿ ಕಾರ್ಯದರ್ಶಿ ಇಂದ್ರ ಜಿತ್ ಸಿಂಗ್ ವರದಿಯನ್ನು ಮಂಡಿಸಿದರು. 38 ವೀಕ್ಷಕರ ಸಹಿತ 151 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ವಿಮಾ ನೌಕರರ ಸಂಘದ ಸಮಾವೇಶ

ಸಿಂಧನೂರು: ಜನವರಿ 10ರಂದು ಸಿಂಧ ನೂರು ಘಟಕದ ವಿಮಾ ನೌಕರರ ಸಂಘದ 7ನೇ ವಾರ್ಷಿಕ ಸಮಾವೇಶವನ್ನು ನಡೆಸಲಾ ಗಿತ್ತು. ಮುಖ್ಯ ಅತಿಥಿಗಳಾಗಿ ರಾಯಚೂರು ವಿಭಾಗದ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ.ಜಿ.ಸುರೇಶ್ ಸಹ ಕಾರ್ಯ ದರ್ಶಿ ಕಾಂ.ಬಿ.ಬಸವರಾಜು ಭಾಗವಹಿಸಿ ಮಾರ್ಗದರ್ಶನ ನೀಡಿದರು. ಕಾಂ.ಜಿ.ಎಸ್. ಬದಾಮಿ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶ ದಲ್ಲಿ ಕಾಂ. ಜೆ.ಎಂ.ಚನ್ನಬಸಯ್ಯ ಕಾರ್ಯ ದರ್ಶಿ ವರದಿ ಮಂಡಿಸಿದರು. ವಿಮಾ ರಂಗ ಖಾಸಗೀಕರಣ ಮಾಡಲು ಮಲ್ಹೋತ್ರ ಸಮಿತಿ ವರದಿ ಶಿಫಾರಸ್ಸುಗಳ ವಿರುದ್ಧ ಹೋರಾಡಲು ವಿಶಾಲವಾದ ಹೋರಾಟ ಎಡ- ಪ್ರಜಾಪ್ರಭು ತ್ವವಾದಿ ಸಂಘಟನೆಗಳೊಂದಿಗೆ ನಡೆಸಲು ಮುಖ್ಯ ಅತಿಥಿಗಳು ಕರೆ ನೀಡಿದರು. 1995ನೇ ಸಾಲಿನ ಹೊಸ ಪದಾಧಿಕಾರಿಗಳು.

ಅಧ್ಯಕ್ಷರಾಗಿ ಕಾಂ. ಜಿ.ಎಸ್. ಬದಾಮಿ, ಕಾರ್ಯದರ್ಶಿಯಾಗಿ ಪಾರ್ಥಸಾರಥಿ, ಖಜಾಂ ಚಿಯಾಗಿ ಕಾಂ. ಡಿ.ಆರ್ ಜಗದೀಶ್. ಕಾರ್ಯ ಕಾರಿ ಸಮಿತಿ ಸದಸ್ಯರುಗಳಾಗಿ ಜೆ.ಎಂ. ಚನ್ನಬ ಸಯ್ಯ, ಎನ್. ಗಂಗ, ಜೋಷಿ, ಕೆ.ಟಿ.ಪ್ರಕಾಶ್ ಆಯ್ಕೆಯಾದರು.

ವಾರ್ಷಿಕೋತ್ಸವ

ಶಿವಮೊಗ್ಗ: ಜನವರಿ 29ರ ಭಾನುವಾರ ಜನವಾದಿ ಮಹಿಳಾ ಸಂಘಟನೆಯ ಪ್ರಥಮ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸಭೆ ಯಲ್ಲಿ ಸರ್.ಎಂ. ವಿಶ್ವೇಶ್ವರಯ್ಯ ಕಾಲೇಜಿನ ಉಪನ್ಯಾಸಕರಾದ ಶ್ರೀಮತಿ ಸರಿತಾ ಮಾತನಾಡಿ ಮಹಿಳಾ ಶೋಷಣೆಯ ಹಲವು ಮುಖಗಳನ್ನು ವಿವರಿಸುತ್ತಾ, ಮಹಿಳೆಯರು ಸಂಘಟಿತರಾಗಿ ವೈಜ್ಞಾನಿಕ ಚಿಂತನೆಗೆ ಒಳಗಾಗಿ ಹೋರಾಡಿ ದಾಗ ಮಾತ್ರ ಮಹಿಳೆಯರ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವೆಂದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ಪ್ರಮುಖರಾದ ಶ್ರೀಮತಿ

ಸೌಭಾಗ್ಯ ಮಾತನಾಡಿದರು. ಅಕ್ಷರ ಕಲಿಯು ವಿಕೆ, ವಿಜ್ಞಾನ ಮತ್ತು ಕೋಮು ಸೌಹಾರ್ದತೆ ಬಗ್ಗೆ ಗಮನಹರಿಸಬೇಕೆಂದು ಹಾಗೂ ಹಾಡು ಗಳನ್ನು ಹಾಡಿ ಹಾಡಿಸಿ ರಂಜಿಸಿದರು. ಜಿಲ್ಲಾ ಸಂಚಾಲಕರಾದ ಶ್ರೀಮತಿ ಟಿ.ಆರ್.ರೇಣುಕ ಇವರು ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಜನವಾದಿ ಮಹಿಳಾ ಸಂಘಟನೆಗೆ ಸಮ್ಮರಾಗಲು ವಿನಂತಿಸಿದರು ಮತ್ತು ನೂರಾರು ಮಹಿಳೆಯರು, ಮಕ್ಕಳು, ಪಾಲ್ಗೊಂಡು ಯಶಸ್ವಿ ಕಾರ್ಯಕ್ರಮ ನಡೆಯಿತು. ಅಧ್ಯಕ್ಷರಾದ ಶ್ರೀಮತಿ ಶಾರದಮ್ಮ ರಂಗೋಲಿ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ ಮಾಡಿದರು.

DYFI ನೂತನ ಘಟಕ

ಲಕ್ಷ್ಮಣನಗರ: ಫೆಬ್ರವರಿ 6ರಂದು ಸುಂಕ ದಕಟ್ಟೆ ಲಕ್ಷ್ಮಣ ನಗರ ಪ್ರದೇಶದಲ್ಲಿ ಡಿವೈಎ ಫ್ಐನ ಹೊಸ ಘಟಕವನ್ನು ರಚಿಸಲಾಯಿತು. ಈ ಘಟಕದ ಉದ್ಘಾಟನೆಯನ್ನು ಜಿಲ್ಲಾ ಸಮಿತಿ ಸದಸ್ಯ ಕಾಂ. ರಾಮಕೃಷ್ಣರವರು ಮಾಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಸಿಂಗರಾಮುರವರು ವಹಿಸಿದ್ದರು. ಕೊನೆಯಲ್ಲಿ ನೂತನ ಸಮಿತಿಯನ್ನು ರಚಿಸಲಾ ಯಿತು. ಈ ಘಟಕದ ಅಧ್ಯಕ್ಷರಾಗಿ ಕಿಂಪೇಗೌ ಡರವರು, ಉಪಾಧ್ಯಕ್ಷರಾಗಿ ಎಂ.ಎಸ್.ನಾರಾ ಯಣ್, ಕಾರ್ಯದರ್ಶಿಯಾಗಿ ಕೆ.ಜಿ. ನಾರಾ ಯಣ, ಜಂಟಿ ಕಾರ್ಯದರ್ಶಿಯಾಗಿ ಬಿ.ಆರ್. ಆನಂದ್, ಖಜಾಂಚಿಯಾಗಿ ಕುಮಾರ್, ಸಹ ಕಾರ್ಯದರ್ಶಿಯಾಗಿ ಕೆ.ಟಿ. ಪಾಪಣ್ಣ ಮತ್ತು ಹತ್ತು ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು. ಈ ಸಭೆಯಲ್ಲಿ ಸುಮಾರು 30 ಜನರು ಭಾಗವಹಿಸಿದ್ದರು.

ಎಸ್‌ಎಫ್‌ಐ ಆಗ್ರಹ

ಹೊನ್ನಾವರ: ಹೊನ್ನಾವರದಲ್ಲಿರುವ ಸರ ಕಾರಿ ತಾಂತ್ರಿಕ ಕೈಗಾರಿಕಾ ತರಬೇತಿ ಸಂಸ್ಥೆ(ಐಟಿಐ) ಯು ಅವ್ಯವಸ್ಥೆಯ ಆಗರವಾಗಿದ್ದು ಇದರಿಂದ ವಿದ್ಯಾರ್ಥಿಗಳು ಕಷ್ಟ ಹೇಳತೀರದು. ಪ್ರತಿದಿನ ವಿದ್ಯಾರ್ಥಿಗಳು ಉಪನ್ಯಾಸಕರಿಲ್ಲದೇ ಕಾಲೇಜ್

ಹೊರಗಡೆಯೇ ಅಲೆದಾಡಿ ದಿನಗಳನ್ನು ಕಳೆ ಯುವ ಪರಿಸ್ಥಿತಿ ಬಂದೊದಗಿದೆ. ಈ ಸಮಸ್ಯೆ ಬಗೆಹರಿಸಲು ಅನೇಕ ರಾಜ ಕಾರಣಿಗಳು ಆಶ್ವಾಸನೆ ಕೊಟ್ಟು ವಿದ್ಯಾರ್ಥಿಗಳಿಗೆ ದಿನಗಳೆ ಣಿಸುವಂತೆ ಮಾಡಿದ್ದಾರೆ. ಆದರೆ ಇತ್ತೀಚೆಗೆ ಕಾಲೇಜಿನ ವಿದ್ಯಾರ್ಥಿಗಳ ಜೊತೆಗೆ ಚರ್ಚಿಸಿದ ಎಸ್ ಎಫ್ ಐ ಉ.ಕ. ಜಿಲ್ಲಾ ಅಧ್ಯಕ್ಷರಾದ ಜೋಸ್ ಕೆ.ಥಾಮಸ್ ಹಾಗೂ ಕಾರ್ಯದರ್ಶಿ ಯುವರಾಜ ಪಿ.ಕಲಬಾಳಿಮಠ ಅವರು ವಿದ್ಯಾರ್ಥಿ ಗಳ ಈ ಸಮಸ್ಯೆಗಳತ್ತ ಗಮನಹರಿಸಿ ವಿದ್ಯಾರ್ಥಿ ಗಳ ಈ ಸಮಸ್ಯೆಗಳನ್ನು ತ್ವರಿತವೇ ಬಗೆಹರಿ ಸಲು ಹೊಸ ಸರ್ಕಾರವನ್ನು ಆಗ್ರಹಿಸಿದ್ದಾರೆ.

ವಿಚಾರ ಸಂಕಿರಣ

ಹೊನ್ನಾವರ: 30 ಹೊನ್ನಾವರ ಎಸ್.ಡಿ.ಎ ಮ್. ಕಾಲೇಜಿನಲ್ಲಿ ಎಸ್.ಎಫ್.ಐ ತಾಲೂಕು ಸಮಿತಿಯು ಗ್ಯಾಟ್ ಡಂಕೆಲ್‌ನ ಸಾಧಕ ಬಾಧ ಕಗಳ ಬಗ್ಗೆ ವಿಚಾರ ಸಂಕಿರಣ ವನ್ನು ಏರ್ಪಡಿ ಸಿತ್ತು. ವಿಚಾರ ಸಂಕಿರಣದಲ್ಲಿ ಮುಖ್ಯ ಭಾಷ ಣಕಾರರಾಗಿ ಆಗಮಿಸಿದ್ದ ಸಿಐಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಾತನಾಡುತ್ತಾ ಗ್ಯಾಟ್ ಮತ್ತು ಡಂಕೆಲ್ ಒಪ್ಪಂದದಿಂದ ನಮ್ಮ ದೇಶದ ಕೃಷಿ ಹಾಗೂ ಕೈಗಾರಿಕೆಗಳ ಮೇಲೆ ಯಾವ ದುಷ್ಪರಿಣಾಮ ಬೀರುತ್ತದೆ ಎಂದು ವಿವರಿಸಿದರು. ಈ ಸಂದರ್ಭದಲ್ಲಿ ಎಸ್‌ಎಫ್‌ಐ ರಾಜ್ಯ ಅಧ್ಯಕ್ಷ ರಾದ ಶಾಂತರಾಮ ನಾಯಕ್ ಅವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಅಧ್ಯ ಕ್ಷತೆಯನ್ನು ಎಸ್ ಡಿಎಮ್ ಕಾಲೇಜಿನ ಕನ್ನಡ ಉಪನ್ಯಾಸಕರಾದ ವೀಣಾಕರ್ ಅವರು ವಹಿ ಸಿದ್ದರು. ವೇದಿಕೆಯಲ್ಲಿ ಎಸ್‌ಎಫ್‌ಐನ ಉ.ಕ. ಜಿಲ್ಲಾ ಅಧ್ಯಕ್ಷ ಜೋಸ್ ಕೆ. ಥಾಮಸ್ ಉಪಸ್ಥಿತರಿದ್ದರು. ಮೊದಲಿಗೆ ಎಸ್.ಡಿ. ಹೆಗಡೆ ಉಪನ್ಯಾಸಕರು ಸ್ವಾಗತ ಮಾಡಿದರು. ಎಸ್‌ಎ ಫ್‌ಐ ಹೊನ್ನಾವರ ಕಾರ್ಯದರ್ಶಿ ಬಿ.ಟಿ. ನಾಯ್ಕ ಮಾಲಾರ್ಪಣೆ ಮಾಡಿದರು. ಎಸ್‌ಎ ಫ್‌ಐ ಹೊನ್ನಾವರ ಅಧ್ಯಕ್ಷ ಜಿ.ಎನ್. ಗೌಡ ಕಾರ್ಯಕ್ರಮ ನಿರ್ವಹಣೆ ಮಾಡಿ ಕೊನೆಗೆ ವಂದನಾರ್ಪಣೆ ಮಾಡಿದರು.

ಬಹುರಾಷ್ಟ್ರೀಯ ಕಂಪನಿಗಳಿಗೆ ಮಾರಾಟವಾಗುತ್ತಿದೆ ದೂರವಾಣಿ ಇಲಾಖೆ

ಪುಟ 5ರಿಂದ

5 ಲಕ್ಷ ಟೆಲಿಫೋನ್ ಲೈನು ಕೆಲಸ ಮಾಡಿದ ಒಂದೇ ಒಂದು ಕಂಪನಿ ಇಲ್ಲ. ಈ ಹೆಜ್ಜೆಯಿಂದ ದೇಶದ ರಕ್ಷಣೆಗೆ ಬಹಳ ಗಂಡಾಂತರ ಬರಲಿಕ್ಕಿದೆ.

ಇಂಡಿಯನ್ ಟೆಲಿಕಾಂನ್ನು ಹೆಚ್ಚು ಲಾಭ ಗಳಿಸುವ ವ್ಯಾಪಾರವಾಗಿ ಬಹುರಾಷ್ಟ್ರ ಕಂಪನಿಗಳು ಕಾಣುತ್ತಾ ಇವೆ. ಟೆಲಿಕಾಂ ಉಪಕರಣವನ್ನು ತಯಾರಿಸುವ ಸರಕಾರದ ಫ್ಯಾಕ್ಟರಿಗಳನ್ನು ಕಡೆಗಣಿಸಿ, ಪಿಜೆಟ್ಸ್, ಅಲ್ಕ ಟಾಲ್, ಎರಿಕೆಸನ್, ಇಂತಹ 6 ಬಹುರಾ ಷ್ಟ್ರೀಯ ಸಂಸ್ಥೆಗಳಿಗೆ ಬೇಕಾದ ಎಲ್ಲಾ ಸೌಕರ್ಯ ಒದಗಿಸುತ್ತದೆ ಮತ್ತು ಅವರು ತಯಾರು ಮಾಡುವಂತಹ ಉಪಕರಣಗಳನ್ನು ಸರಕಾರ ಖರೀದಿಸುತ್ತದೆ. ಸೆಲ್ಯೂಲರ್ ಫೋನ್, ರೇಡಿಯೋ ಪೇಜಿಂಗ್, ಇಂತಹ ಸೇವೆ ಯನ್ನು ಖಾಸಗಿಯವರಿಗೆ ಇದಾಗಲೇ ಒದ ಗಿಸಿಕೊಟ್ಟಿದೆ. ಲೋಕಲ್ ಟೆಲಿಕಾಂ ಸರ್ವಿಸ್ ನಡೆಸಲಿಕ್ಕೆ ಈಗಲೇ ಟೆಂಡರ್ ಕರೆದಿದ್ದಾರೆ. ಕೊಯಮುತ್ತೂರು, ಈರೋಡ್, ಸೇಲಂ, ಧರ್ಮಪುರಿ ಯುಎಸ್‌ಎ ವೆಸ್ಟ್‌ಗೆ ದಾನ ಮಾಡಿದೆ.

ಈ ಮೊದಲು ಟೆಲಿಕಾಂ ಸರ್ವಿಸ್ ದರಗಳನ್ನು ಸರ್ಕಾರವೇ ತೀರ್ಮಾನಿಸು ತ್ತಿತ್ತು. ಆದರೆ ಮುಂದೆ, ಬೇಕಾದಾಗ ಖಾಸಗಿ ಕಂಪೆನಿಯವರಿಗೆ ಮನಸ್ಸು ಬಂದಾಗ ದರ ವನ್ನು ಏರಿಸುವಂತಹ ಅಧಿಕಾರವನ್ನು ಸಹ ಕೊಟ್ಟಿದೆ ಎಂದು ಈಗಿರುವ ಸುದ್ದಿ. ಈಗ ಒಂದು ಟೆಲಿಫೋನ್ ಕನೆಕ್ಷನಿಗೆ ರೂ.

3,000 ಡಿಪಾಜಿಟ್ (ಜನರಲ್ ಕ್ಯಾಟಗರಿ). ಒಪ್ಪೆಗೆ ಈಗ ರೂ. 10,000. ಈಗ ಇರುವ ಒಪ್ಪೆಗೆ 10,000ಕ್ಕೆ ನಂತರ ರೂ 30,000 ಕೂಡಾ ಆಗಬಹುದು. (ಸರಕಾರಕ್ಕೆ ಒಂದು ಟೆಲಿಫೋನ್ ಕನೆಕ್ಷನ್ ಕೊಡಲಿಕ್ಕೆ ರೂ. 47,000 ಖರ್ಚು ಆಗುತ್ತದೆ ಎಂದು ನ್ಯೂ ಟೆಲಿಕಾಂ ಪಾಲಿಸಿಯಲ್ಲಿ ಸ್ಪಷ್ಟಪಡಿಸಿ ದ್ದಾರೆ) ಲೋಕಲ್ ಕಾಲ್ ಚಾರ್ಜ್ ಈಗಿರು ವುದಕ್ಕಿಂತ 4 ಪಟ್ಟು ಅಥವಾ 5 ಪಟ್ಟು ಹೆಚ್ಚಾಗಬಹುದು. ಟೆಲಿಫೋನ್ ಸಾಮಾನ್ಯ ಜನರಿಗೆ ಇಟ್ಟುಕೊಳ್ಳಲು ಸಾಧ್ಯವಾಗುವು ದಿಲ್ಲ. ಟೆಲಿಫೋನ್ ದೊಡ್ಡ ಶ್ರೀಮಂತ ಸಾಧನವಾಗುವ ಸಾಧ್ಯತೆ ಇದೆ. ಖಾಸಗೀಕ ರಣದ ನಂತರ ಅಮೇರಿಕ, ಬ್ರಿಟನ್, ಜಪಾನ್ ಈ ಎಲ್ಲಾ ದೇಶಗಳಲ್ಲಿ ಸಾವಿರಗ ಟ್ಟಲೆ ಜನರು ಕೆಲಸವನ್ನು ಕಳಕೊಂಡಿದ್ದಾರೆ. ಹೊಸ ತಾಂತ್ರಿಕತೆಯಲ್ಲಿ ಎಷ್ಟು ಜನ ಕೆಲಸಕ್ಕೆ ಬೇಕು ಎಂಬುದು ಒಂದು ಪ್ರಶ್ನಾರ್ಥಕವಾಗಿ ಉಳಿದಿದೆ.

ಹೊಸ ಆರ್ಥಿಕ ನೀತಿ ಮತ್ತು ಹೊಸ ಟೆಲಿಕಾಂ ನೀತಿಯ ಪರಿಣಾಮವೆಂದರೆ ಲಾಭ ಗಳಿಸುವ ದೂರವಾಣಿ ಇಲಾಖೆಯನ್ನು ಸರ ಕಾರ ಬಹುರಾಷ್ಟ್ರೀಯ ಕಂಪೆನಿಯವರಿಗೆ ದಾನ ವಾಗಿ ಕೊಡುತ್ತಾ ಇದೆ. ಇದರ ವಿರುದ್ಧ ದೂರಸಂಪರ್ಕ ಇಲಾಖೆಯಲ್ಲಿ ಇರುವ 4.75 ಲಕ್ಷ ನೌಕರರು 3 ಫೆಡರೇಷನ್ ಒಟ್ಟಾಗಿ ಜನವರಿ 23,1995ರಂದು ರಾಷ್ಟ್ರವ್ಯಾಪಿ ಮುಷ್ಕರ ನಡೆಸಿವೆ. ಟೆಲಿಕಾಂ ರಕ್ಷಣೆಗೋಸ್ಕರ ಹೋರಾಟ ಮುಂದುವರಿಯುತ್ತದೆ.

ಚೀನಾದ ರಫ್ತಿನ ಮೇಲೆ ಅಮೆರಿಕದ ಸುಂಕ ಏರಿಕೆ-ಚೀನಾದ ಪ್ರತಿಕ್ರಮ

ಲೋಕಸಂಚಾರ

-ಶರತ್‌ಚಂದ್ರ

ಅಮೆರಿಕ 35 ಚೀನಿ ರಫ್ತು ಸರಕುಗಳ ಮೇಲೆ ಶೇಕಡಾ 100ರಷ್ಟು ಸುಂಕ ಏರಿಸುವ ಮೂಲಕ ಚೀಣಾದ ವಿರುದ್ಧ ವಾಣಿಜ್ಯ ಸಮರ ಸಾರಿದೆ. ಇದರ ಒಂದು ಗಂಟೆಯೊಳಗೆ ಚೀನಾ ಅಮೇರಿಕನ್ ಸರಕುಗಳ ಮೇಲೆ ಸುಂಕ ಹೇರುವ ಪ್ರತಿಕ್ರಮ ಕೈಗೊಂಡಿದೆ. ಹಲವು ದಿನಗಳಿಂದ ಅಮೆರಿಕಾದ ಪೇಟೆಂಟ್, ಟ್ರೇಡ್ ಮಾರ್ಕ್‌ಗಳ ಉಲ್ಲಂಘನೆ ಬಗ್ಗೆ ಚೀನಾ-ಅಮೆರಿಕಾ ಮಾತುಕತೆಗಳು ನಡೆಯುತ್ತಿದ್ದವು. ಈ ಮಾತುಕತೆಗಳಲ್ಲಿ ತೃಪ್ತಿಕರ ಒಪ್ಪಂದವಾಗದಿದ್ದರೆ, ಚೀನಾದ ರಫ್ತು ಮೇಲೆ ಸರಕುಗಳ ಭಾರಿ ಸುಂಕ ಹೇರುವುದಾಗಿ ಅಮೆರಿಕ ಬೆದರಿಸುತ್ತಿದ್ದು ಚೀನಾ ಅದಕ್ಕೆ ಪ್ರತಿಬೆದರಿಕೆ ಹಾಕುತ್ತಿತ್ತು. ಫೆಬ್ರವರಿ 4ರವರೆಗೆ ಅಮೆರಿಕಾ ಅವಧಿ ಕೊಟ್ಟಿದ್ದು, ಆದಿನದೊಳಗೆ ಒಪ್ಪಂದವಾಗದ್ದರಿಂದ ಅದು ಸುಂಕ ಹೇರಿಕೆ ಘೋಷಿಸಿತು. ಇದರಿಂದ ಚೀನಾದ ಸುಮಾರು 108 ಕೋಟಿ ಡಾಲರುಗಳ ಚೀನಿ ರಫ್ತಿನ ಬೆಲೆ ಎರಡರಷ್ಟು ಹೆಚ್ಚುತ್ತದೆ. ಮೀನುಗಾಳಗಳಿಂದ ಹಿಡಿದು, ಸೆಲ್ಯುಲಾರ್ ಫೋನ್ ಗಳವರೆಗೆ 35 ರೀತಿಯ ಸರಕುಗಳ ಮೇಲೆ ಈ ಸುಂಕ ಹೇರಿಕೆ ಮಾಡಲಾಗಿದೆ. ಚೀನಾ ಅಮೆರಿಕಾದ ವಿಡಿಯೋ, ಆಡಿಯೋಕ್ಯಾಸೆಟ್ ಸಾಫ್ಟ್ ವೇರ್‌ಗಳ ಕಾಪಿ ಮಾಡದಂತೆ ಸಾಕಷ್ಟು ರಕ್ಷಣೆ ಒದಗಿಸಿಲ್ಲ ಎಂದು ಅಮೆರಿಕದ ಆಪಾದನೆ.

ಪೆರು-ಇಕ್ವಾಡೊರ್ ವಿರಸ

ದಕ್ಷಿಣ ಅಮೇರಿಕದ ಪೆರು ಹಾಗೂ -ಇಕ್ವಾಡೊರ್‌ಗಳ ನಡುವೆ ಕೆಲವು ಗಡಿ ಪ್ರದೇಶಗಳ ಬಗ್ಗೆ ಹಲವು ಶತಮಾನಗಳಿಂದ ಇರುವ ವಿವಾದ ಕಳೆದವಾರ ಮಿಲಿಟರಿ ಘರ್ಷಣೆಗೆ ಎಡೆಕೊಟ್ಟಿತ್ತು. ಘರ್ಷಣೆ ತೀವ್ರ ಸ್ವರೂಪದ್ದಲ್ಲದಿದ್ದರೂ ಈಗ ವರ್ಷಕ್ಕೆ ಒಮ್ಮೆಯಾದರೂ ಈ ರೀತಿಯ ಘರ್ಷಣೆ ಸಾಮಾನ್ಯವಾಗಿದೆ ಇಂತಹ ಘರ್ಷಣೆ ಪೆರು-ಇಕ್ವೊಡೊರ್ ನಡುವೆ ಗಡಿ ಒಪ್ಪಂದವಾದ ರಿಯೋ-ಒಪ್ಪಂದದ ವಾರ್ಷಿಕದಂದು ಈಗ ಸರ್ವೆಸಾಮಾನ್ಯವಾಗಿದೆ. ಈ ವಿವಾದಾಸ್ಪದ ಗಡಿ ಪ್ರದೇಶದಲ್ಲಿ ಚಿನ್ನ, ಯುರೇನಿಯಂ ಮುಂತಾದ ಬೆಲೆ ಬಾಳುವ ಗಣಿಗಳು ಇವೆ ಎಂಬ ಕಾರಣಕ್ಕಾಗಿ ಇತ್ತೀಚೆಗೆ ಈ ವಿವಾದ ತೀವ್ರ ಸ್ವರೂಪ ಪಡೆದಿದೆ.

1942ರಲ್ಲಿ ಪೆರು-ಇಖ್ವಡೊರ್‌ಗಳ ನಡುವೆ ಆದ ಗಡಿ ಒಪ್ಪಂದವನ್ನು 1960ರ ನಂತರ ಇಕ್ವಾಡೋರ್ ಪ್ರಶ್ನಿಸುತ್ತಾ ಬಂದಿದೆ. ಇದು ತೀರಾ ಏಕ ಪಕ್ಷೀಯವಾದದ್ದು, ಅದನ್ನು ಪುನಃ ಪರಿಶೀಲಿಸಬೇಕು ಎಂದು ಈ ಒಪ್ಪಂದದ ಪ್ರಕಾರ ಈಗಿನ ಇಕ್ವಾಡೋರ್‌ನಷ್ಟೇ ಪ್ರದೇಶ ಪೆರುಗೆ ಹೋಗಿತ್ತು. ಈ ಒಪ್ಪಂದಕ್ಕೆ ಅಮೆರಿಕ, ಬ್ರೆಜಿಲ್, ಚಿಲಿ, ಅರ್ಜೆಂಟಿನಾ ಗ್ಯಾರಂಟಿ ನೀಡಿದ್ದರೂ ವಿರಸ ಮುಂದುವರೆದಿದೆ.

ಈ ಎರಡು ದೇಶಗಳ ಗಡಿ ಪ್ರದೇಶಗಳಲ್ಲಿ ವಾಣಿಜ್ಯ ಸಂಬಂಧ ಘನವಾಗಿದ್ದು ವಿರಸ ಜನಗಳ ಜೀವನವನ್ನು ಕದಡಿದೆ ಇದಕ್ಕೆ ಸರಿಯಾದ ಶಾಂತಿಯುತ ಪರಿಹಾರ ಕಂಡುಕೊಳ್ಳದಿದ್ದರೆ ಅನಗತ್ಯ ರಕ್ತಪಾತ ಆಗಾಗ ಆಗುವುದು ಖಂಡಿತ.

ಐರ್ಲೆಂಡ್ ಶಾಂತಿ ಒಪ್ಪಂದದತ್ತ ಪ್ರಯತ್ನ

ಐರ್ಲೆಂಡ್ ಶಾಂತಿ ಒಪ್ಪಂದದತ್ತ ಪ್ರಯತ್ನಗಳಿಗೆ ಕುಮ್ಮಕ್ಕು ಕೊಡುವ ಉದ್ದೇಶದಿಂದ ಐರಿಶ್ ಸರ್ಕಾರ ಐರಿಶ್ ರಿಪಬ್ಲಿಕನ್ ಆರ್ಮಿಯ (IRA) ಐದು ಕೈದಿಗಳನ್ನು ತಾತ್ಕಾಲಿಕವಾಗಿ ಬಿಡುಗಡೆ ಮಾಡಿದ್ದಾರೆ. ಒಬ್ಬ ಮಹಿಳೆ ಸೇರಿದಂತೆ ಈ ಐವರು ಹಲವಾರು ಭಯೋತ್ಪಾದಕ ಕಾರ್ಯಗಳಿಗೆ ಶಿಕ್ಷಿಸಲ್ಪಟ್ಟವರು . ಕಳೆದ ಐದು ತಿಂಗಳಿಂದ ಏಕಪಕ್ಷೀಯವಾಗಿ IRA ಘೋಷಿಸಿ ಪಾಲಿಸಿಕೊಂಡು ಬಂದಿರುವ ಕದನ-ವಿರಾಮಕ್ಕೆ ಪ್ರೋತ್ಸಾಹ ನೀಡಲು ಐರಿಶ್ ಸರ್ಕಾರ ಈ ಕ್ರಮ ಕೈಗೊಂಡಿದೆ ಎನ್ನಲಾಗಿದೆ. ಬ್ರಿಟನ್ ಸರ್ಕಾರ ಇಂತಹುದೇ ಕ್ರಮ ಕೈಗೊಳ್ಳಲಿ ಎಂಬುದು ಈ ಕ್ರಮದ ಉದ್ದೇಶವಾಗಿರಬಹುದು.

ಈ ನಡುವೆ ಲಂಡನ್ ಟೈಮ್ಸ್ ಐರ್ಲೆಂಡ್ ಸಮಸ್ಯೆಯ ಬಗ್ಗೆ ಮಾತುಕತೆಗಳಿಗಾಗಿ ತಯಾರಿಸುವ ಚೌಕಟ್ಟು ಕರಡಿನ ಅಂಶಗಳನ್ನು ಪ್ರಕಟಿಸಿ ಭಾರೀ ವಿವಾದಕ್ಕೆ ಕಾರಣವಾಗಿತ್ತು. ಈ ಅಂಶಗಳಲ್ಲಿ ಕೆಲವನ್ನು ಬ್ರಿಟಿಷ್-ಪರ ಉತ್ತರ ಐರ್ಲೆಂಡ್ ಪ್ರಾಟೆಸ್ಟಂಟ್ ನಾಯಕರು ತೀವ್ರವಾಗಿ ವಿರೋಧಿಸಿದರು. ಇಂತಹ ಅಂಶಗಳಲ್ಲಿ ಉತ್ತರ ಐರ್ಲೆಂಡ್ ಆಳಲು ಪ್ರತ್ಯೇಕ ಪ್ರಾಧಿಕಾರದ ರಚನೆ (ಯುರೋಪಿಯನ್ ಪಾರ್ಲಿಮೆಂಟ್ ಜತೆ ನೇರ ಸಂಬಂಧ ಹೊಂದಿರುವ) ಬಗೆಗಿನ ಅಂಶವನ್ನು ಅವರು ವಿರೋಧಿಸುತ್ತಿದ್ದರು. ಈ ಬಗ್ಗೆ ಸಮಜಾಯಿಸಿ ಕೊಟ್ಟು ಈಗಾಗಲೇ ನಡೆಯುತ್ತಿರುವ ಶಾಂತಿ ಒಪ್ಪಂದದ ಮಾತುಕತೆಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಲು ಬ್ರಿಟಿಷ್ ಪ್ರಧಾನಿ ಟೆಲಿವಿಷನ್ ಭಾಷಣ ಮಾಡಬೇಕಾಯಿತು.

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ

ರಶ್ಯನ್ ಫೆಡರೇಷನ್‌ನ ಕಮ್ಯುನಿಸ್ಟ್ ಪಕ್ಷದ ಮೂರನೇ ಮಹಾಧಿವೇಶನ, ಮೊದಲ ಬಾರಿಗೆ ಮಾಸ್ಕೋದ ಕೇಂದ್ರ ಪ್ರದೇಶದಲ್ಲಿ ನಡೆಯಿತು. ಕ್ರೆಮ್ಲಿನ್ ಹಾಗೂ ಕೆಂಪು ಚೌಕದ ಬಳಿ ಇರುವ ಮಾಸ್ಕೋದ ಪ್ರಮುಖ ಕಟ್ಟಡದಲ್ಲಿ ಕಂಬಗಳ ಸಭಾಂಗಣ ಎಂದು ಕರೆಯಲಾಗುವ ಈ ಕಟ್ಟಡದಲ್ಲಿ ಲೆನಿನ್‌ರ ದೇಹವನ್ನು ಅವರ ಮರಣದ ನಂತರ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು. ಲೆನಿನ್‌ರ ಮಹಾನ್ ಪರಂಪರೆಯನ್ನು ಎತ್ತಿ ಹಿಡಿದು ಮುಂದಕ್ಕೆ ಒಯ್ಯುವ ಪ್ರತಿಜ್ಞೆಯೊಂದಿಗೆ ಮಹಾಧಿವೇಶನ ಆರಂಭವಾಯಿತು. ಮಹಾಧಿವೇಶನದಲ್ಲಿ ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪಾಲಿಟ್ ಬ್ಯೂರೋ ಸದಸ್ಯ ಸಿತಾರಾಂ ಯೆಚೂರಿ ಸೌಹಾರ್ದ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

ರಶ್ಯನ್ ಕಮ್ಯುನಿಸ್ಟ್ ಪಕ್ಷದ ಮೊದಲ ಮಹಾಧಿವೇಶನ ಭೂಗತವಾಗಿ ನಡೆದಿತ್ತು. ಎರಡನೇಯದು ಮಾಸ್ಕೋದ ಹೊರವಲಯದಲ್ಲಿ ನಡೆದಿತ್ತು. ರಶ್ಯದ ಅಲುಗಾಡುತ್ತಿರುವ ಯೆಲ್ಸಿನ್ ಸರಕಾರ, ಪ್ರಗತಿಪರ ಶಕ್ತಿಗಳ ಬೆಳೆಯುತ್ತಿರುವ ಬಲ, ಬಂಡವಾಳಶಾಹಿ ಬಗ್ಗೆ ಜನತೆಯ ಭ್ರಮ ನಿರಸನ ಮತ್ತು ಸಮಾಜವಾದದ ಬಗ್ಗೆ ಬೆಳೆಯುತ್ತಿರುವ ಆಕರ್ಷಣೆ ಇವುಗಳಿಂದಾಗಿ ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದ ಪ್ರತಿನಿಧಿಗಳು ಅತ್ಯುತ್ಸಾಹದಿಂದಿದ್ದರು. ಪ್ರತಿನಿಧಿಗಳು ಎಷ್ಟು ಉತ್ಸಾಹ ದಿಂದ ಇದ್ದರೆಂದರೆ ಹಲವು ಪ್ರತಿನಿಧಿಗಳು ಮುಂದಿನ ಮಹಾಧಿವೇಶನ ಕ್ರೆಮ್ಲಿನ್ ನಲ್ಲಿ ನಡೆಯಲಿದೆ ಎಂದು ಘೋಷಣೆ ಹಾಕುತ್ತಿದ್ದರು. ಪಕ್ಷದ ನಾಯಕತ್ವ ಇದಕ್ಕೆ ಪಕ್ಷ ಜಗತ್ತಿನಲ್ಲಿ ಎಲ್ಲಾ ಪ್ರತಿಗಾಮಿ ಶಕ್ತಿಗಳ ಒಟ್ಟು ಬಲದ ವಿರುದ್ಧ ಹೋರಾಡಿ ಜಯಗೊಳಿಸಬೇಕಾಗಿದೆ, ಇದು ಅತ್ಯಂತ ಧೀರ್ಘ ಹಾಗೂ ಕಠಿಣ ಹೋರಾಟವಾಗಲಿದೆ ಎಂದು ಎಚ್ಚರಿಸಿತು.

ಮಹಾಧಿವೇಶನದಲ್ಲಿ 336 ಪ್ರತಿನಿಧಿಗಳು ಭಾಗವಹಿಸಿದ್ದರು. ಇವರು ಪಕ್ಷದ 5 ಲಕ್ಷ ಸದಸ್ಯರನ್ನು ಪ್ರತಿನಿಧಿಸುತ್ತಿದ್ದರು. ಸಾಮ್ರಾಜ್ಯಶಾಹಿ ಮಾಧ್ಯಮಗಳು ಬೆಳೆಯುತ್ತಿರುವ ಕಮ್ಯುನಿಸ್ಟ್ ಪಕ್ಷದ ಬಲದ ಬಗ್ಗೆ ಸಾಮಾನ್ಯವಾಗಿ ಮಾಡುವ ಅಪಪ್ರಚಾರವೆಂದರೆ ಅಲ್ಲಿ ಇರುವುದು ಬರೀ ಮುದುಕರು ಮಾತ್ರ ಎಂದು ಆದರೆ ಪ್ರತಿನಿಧಿಗಳ ಸರಾಸರಿ ಪ್ರಾಯ 40-50 ವರ್ಷಗಳ ಮಧ್ಯೆ ಇತ್ತು. ಶೇಕಡಾ 10 ರಷ್ಟು ಪ್ರತಿನಿಧಿಗಳು 30 ವರ್ಷಕ್ಕಿಂತ ಕೆಳಗಿನವರು. ಪಕ್ಷದ ಮಹಾಧಿವೇಶನದ ಮುಂದಿದ್ದ ಕರಡು ಕಾರ್ಯಕ್ರಮ, ಕಳೆದ ಮಹಾಧಿವೇಶನದ ನಂತರದ ಚಟುವಟಿಕೆಗಳ ವಿಮರ್ಶೆ ಹಾಗೂ ಮುಂದಿನ ಕರ್ತವ್ಯಗಳ ಯೋಜನೆಯ ಕಾರ್ಯಕ್ರಮವಿತ್ತು.

ಮಹಾಧಿವೇಶನವನ್ನು ಉದ್ಘಾಟಿಸುತ್ತಾ ಪ್ರಧಾನ ಕಾರ್ಯದರ್ಶಿ ಝುಗನೊವ್ ರಶ್ಯನ್ ಕಮ್ಯುನಿಸ್ಟ್ ಪಕ್ಷದಲ್ಲಿ ಮೊದಲಿನಿಂದಲೂ ಕ್ರಾಂತಿಕಾರಿಗಳಿಗೂ, ಸಂದರ್ಭಸಾಧಕ ದ್ರೋಹಿಗಳಿಗೂ ನಡೆಯುತ್ತಾ ಬಂದ ಸಂಘರ್ಷದ ಬಗ್ಗೆ ಪ್ರಸ್ತಾಪಿಸಿದರು. ಟ್ರೋಟ್‌ಸ್ಕಿಯಿಂದ ಗೋರ್ಬಚೆವ್, ಯೆಲ್ಸಿನ್‌ವರೆಗಿನ ಅಂತಹ ದ್ರೋಹಿಗಳು ಪಕ್ಷದಿಂದ ಹೊರಗೆ ಹೋಗಿದ್ದಾರೆ. 1991ರ ನಂತರವಂತೂ ಇಂತಹ ದ್ರೋಹಿಗಳೆಲ್ಲಾ ಪಕ್ಷದಿಂದ ಹೊರಗೆ ಹೋಗಿದ್ದಾರೆ. ಪಕ್ಷದಲ್ಲಿ ಉಳಿದಿರುವ ನಿಜವಾದ ಕ್ರಾಂತಿಕಾರಿಗಳು ಯೆಲ್ಸಿನ್ ಸರ್ಕಾರ ಹರಿಯಬಿಟ್ಟಿರುವ ಕಮ್ಯುನಿಸ್ಟ್ -ವಿರೋಧಿ ಅಪಪ್ರಚಾರ, ದಮನ ಚಕ್ರ ಎದುರಿಸಿ ಪಕ್ಷವನ್ನು ದೇಶದ ರಾಜಕೀಯದಲ್ಲಿ ಪ್ರಮುಖ ಶಕ್ತಿಯಾಗಿಸಿದ್ದಾರೆ. ಪಾರ್ಲಿಮೆಂಟರಿ ಬಹುಮತ ಕಳೆದುಕೊಂಡು ಯೆಲ್ಸಿನ್ ರಾಜೀನಾಮೆಗೆ ಜನತೆಯ ಒತ್ತಡ ತರುವುದು ಈ ಬದಲಾವಣೆಯನ್ನು ಶಾಂತಿಯುತವಾಗಿ ಚುನಾವಣೆ ಮೂಲಕ ತರಲು ಪಕ್ಷ ಪ್ರಯತ್ನಿಸುವುದು. ಆದರೆ ಪ್ರತಿಗಾಮಿ ಶಕ್ತಿಗಳು, ಬಲಪ್ರಯೋಗ ನಡೆಸಿದರೆ ಪಕ್ಷ ಎಲ್ಲಾ ಸಂದರ್ಭಗಳಿಗೂ ಸಿದ್ಧವಿದೆ ಎಂದು ಎಚ್ಚರಿಸಿದರು ಝುಗನೊವ್. ಜನತೆಯ ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ದುರ್ಭರ ಪರಿಸ್ಥಿತಿ ದೇಶ ಮತ್ತು ಸಮಾಜ ಎದುರಿಸುತ್ತಿರುವ ರಾಜಕೀಯ ಸಾಮಾಜಿಕ ಆರ್ಥಿಕ ಬಿಕ್ಕಟ್ಟಿನ ಬಗ್ಗೆ ವಿವರಿಸಿದರು. ಕಮ್ಯುನಿಸ್ಟ್ ಪಕ್ಷದ ಮಿತ್ರಪಕ್ಷ ಕೃಷಿಕ ಪಕ್ಷದ ನಾಯಕ ಲಾಪ್‌ಶಿನ್ ಮಹಾಧಿವೇಶನವನ್ನು ಉದ್ದೇಶಿಸಿ ಮಾತನಾಡಿದರು. ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿದ್ದಾಗ ಕೃಷಿಕ ಪಕ್ಷ ಹಲವಾರು ಕಮ್ಯುನಿಸ್ಟರಿಗೆ ಕಾನೂನಿನ ಆಶ್ರಯ ಕೊಟ್ಟಿತ್ತು.

ಕಾರ್ಮಿಕ ವರ್ಗವನ್ನು ಸಂಘಟಿಸುವುದು, ಅದರ ಐಕ್ಯತೆಯನ್ನು ರಕ್ಷಿಸಿ ರಾಜಕೀಯ ಹೋರಾಟಗಳಿಗೆ ಅಣಿಗೊಳಿಸುವುದು, ಪಕ್ಷ ಮತ್ತು ಜನತೆ ಸಾಮೂಹಿಕ ಸಂಘಟನೆಗಳ ಸಂಬಂಧಗಳನ್ನು ಪ್ರಬಲಗೊಳಿಸುವುದು ಪಕ್ಷದ ಆದ್ಯ ಕರ್ತವ್ಯ. ಪಕ್ಷ ಇತರ ಪಕ್ಷಗಳಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ಕಮ್ಯುನಿಸ್ಟರಿಗೆ ಪಕ್ಷಕ್ಕೆ ಹಿಂದೆ ಬರಲು ಆಹ್ವಾನಿಸಿದೆ. ಇದಕ್ಕಾಗಿ ಪಕ್ಷದ ಸದಸ್ಯತ್ವ ಜತೆ ಬೇರೆ ಸಂಘಟನೆಗಳ ಸದಸ್ಯತ್ವಕ್ಕೆ ಅವಕಾಶ ಕೊಡುವ ನೀತಿಯನ್ನು ಮುಂದುವರೆಲು ನಿರ್ಧರಿಸಲಾಗಿದೆ.

ಪಕ್ಷದ ಸಂಘಟನೆ ಹಾಗೂ ಜನತೆಯ ಜತೆ ಸಂಬಂಧ ಚುರುಕುಗೊಳಿಸಲು ಈ ವರ್ಷ ಲೆನಿನ್ 125ನೇ ಜನ್ಮ ದಿನಾಚರಣೆ, ಫ್ಯಾಸಿಸಂ ವಿಜಯದ ಸ್ವರ್ಣಮಹೋತ್ಸವನ್ನು ದೊಡ್ಡ ರೀತಿಯಲ್ಲಿ ಆಚರಿಸಲು ನಿರ್ಧರಿಸಲಾಗಿದೆ.

ಪೂರ್ವ ಯುರೋಪಿನಲ್ಲಿ ಮಹಿಳೆಯರು:

ಕಮ್ಯುನಿಸಂನೊಂದಿಗೆ ಸಮಾನತೆ-ಸ್ವಾತಂತ್ರ್ಯವೂ ಹೋಯಿತು

"ಹಿಂದೆ ಸಮಾಜವಾದಿಯಾಗಿದ್ದ ದೇಶಗಳಲ್ಲಿನ ಸನ್ನಿವೇಶ್ವ ನಮ್ಮ 14ನೇ ಮಹಾಧಿವೇಶನದ ತೀರ್ಮಾನಗಳನ್ನು ಎತ್ತಿ ತೋರುತ್ತಿದೆ. ಜನಗಳ ಸಮಸ್ಯೆಗಳಿಗೆ ಬಂಡವಾಳಶಾಹಿ ಮತ್ತು ಮಾರುಕಟ್ಟೆ ಆರ್ಥಿಕದ ಮರುಸ್ಥಾಪನೆ ಪರಿಹಾರವಲ್ಲ ವೆಂಬುದನ್ನೂ ಈ ದೇಶಗಳ ಜನಗಳಿಗೆ ಸಮಾಜವಾದಿ ವ್ಯವಸ್ಥೆ ಒದಗಿಸಿದ ಸಾಮಾಜಿಕ ಭದ್ರತೆಯನ್ನು ಸುಮಾರಾಗಿ ಸಂಪೂರ್ಣವಾಗಿ ತಿಂದು ಹಾಕಿದ ರೀತಿ ಅತ್ಯಂತ ನಾಟಕೀಯವಾಗಿ ಮನದಟ್ಟು ಮಾಡಿದೆ. ಜೀವನ ಪರಿಸ್ಥಿತಿ ವಿಪರೀತವಾಗಿ ಇಳಿದಿದೆ. ಇದರ ಪರಿಣಾಮವಾಗಿ ನೈತಿಕ ಹಾಗೂ ಸಾಂಸ್ಕೃತಿಕ ಅಧಃಪತನ ವ್ಯಕ್ತಗೊಳ್ಳುತ್ತಿದೆ" ಎಂದಿದೆ ಸಿಪಿಐ(ಎಂ)ನ 14ನೇ ಮಹಾಧಿವೇಶನದ ಕರಡು ರಾಜಕೀಯ ವರದಿ. ಇದು ಕಣ್ಣಿಗೆ ರಾಚುವಂತೆ ಕಾಣುತ್ತಿರುವುದು ಉದ್ಯೋಗಸ್ಥ ಮಹಿಳೆಯರು ಆ ದೇಶಗಳಲ್ಲಿ ಈಗ ಎದುರಿಸುತ್ತಿರುವ ಸಮಸ್ಯೆಗಳಲ್ಲಿ, ಕಮ್ಯುನಿಸಂನ ಪತನದಿಂದ ಪೂರ್ವ ಯುರೋಪಿನ ಜನಗಳ ವಿಮೋಚನೆಯಾಗುತ್ತದೆ ಎಂದು ಬೊಬ್ಬೆ ಹಾಕುತ್ತಿದ್ದ ಪಾಶ್ಚಿಮಾತ್ಯ ಸುದ್ದಿಮಾಧ್ಯಮಗಳೂ ಈಗ ನಿರ್ವಾಹವಿಲ್ಲದೆ ಇದನ್ನು ಒಪ್ಪಿಕೊಳ್ಳುತ್ತಿವೆ. "ಕಮ್ಯುನಿಸಂನ ಪತನದೊಂದಿಗೆ ಅಲ್ಬೇನಿಯಾದ ನತಾಶಾ ಸುಜಾರಾಕು ಕೂಡಾ ಒಂದನ್ನು ಕಳಕೊಂಡಳು-ಅದೆಂದರೆ ಉದ್ಯೋಗ" ಎಂದು ಆರಂಭಿಸುವ "ಅಸೋಸಿಯೇಟ್ ಪ್ರೆಸ್"ನ ಒಂದು ವರದಿ "ಕಮ್ಯುನಿಸಂ ನಂತರ ಪೂರ್ವ ಯುರೋಪನ್ನು ಆವರಿಸಿದ ನಿರುದ್ಯೋಗ ಸಮಸ್ಯೆ ಎದುರಿಸುವವರಲ್ಲಿ ಶೇ. 60 ಮಹಿಳೆಯರು" ಎಂದಿದೆ.

ಆದರೆ ಆಕೆ ಕಳಕೊಂಡದ್ದು ಉದ್ಯೋಗ ಮಾತ್ರವೇ ಅಲ್ಲ, ಅದರೊಂದಿಗೆ ಉದ್ಯೋಗ ನೀಡುವ ಸ್ವಾ ನಮಾನವೂ ಕೂಡಾ ಎಂದು ಈ ವರದಿ ಗಣಿಸಿದರೂ ಅದು ಅಷ್ಟು ಮುಖ್ಯವಲ್ಲ ವೇನೋ ಎಂಬಂತೆ ವರ್ಣಿಸುತ್ತದೆ. ಇದು ಬಂಡವಾಳಶಾಹಿಯ ಅಮಾನವೀಯತೆ, ಪ್ರತಿಯೊಂದನ್ನೂ ಸರಕನ್ನಾಗಿಸುವ ಅಮಾನವೀಯತೆಯ ಒಂದು ಸ್ವರೂಪವಷ್ಟೆ.



ಮಹಿಳೆಯರು ಈ ದೇಶಗಳಲ್ಲಿ ಕೆಲಸ ಕಳಕೊಳ್ಳುತ್ತಿರುವುದು ಕಾರ್ಖಾನೆಗಳು, ಸ್ಟೋರ್‌ಗಳು, ಇನ್ಸ್ಟಿಟ್ಯೂಟ್‌ಗಳು ಮುಚ್ಚುತ್ತಿರುವುದರಿಂದ, ಶಿಶುಪಾಲನಾ ಕೇಂದ್ರಗಳು, ನರ್ಸರಿ ಶಾಲೆಗಳು ಮುಚ್ಚುತ್ತಿರುವುದರಿಂದ, "ಕಲ್ಯಾಣ ನಿಧಿ" ಕಾಣೆಯಾಗುತ್ತಿರವುದರಿಂದ, ಮಹಿಳೆಯರ ಆರೋಗ್ಯ ವ್ಯವಸ್ಥೆ ಕುಸಿದು ಬೀಳುತ್ತಿರುವುದರಿಂದ.

ಇಷ್ಟೇ ಅಲ್ಲ, ರಾಜಕೀಯ ಹುದ್ದೆಗಳಲ್ಲಿರುವ ಮಹಿಳೆಯರ ಅಂದರೆ ಸಂಸತ್ ಸದಸ್ಯರು ಇತ್ಯಾದಿ ಹುದ್ದೆಗಳಲ್ಲಿರುವ ಮಹಿಳೆಯರ ಸಂಖ್ಯೆ ಈಗ ಅರ್ಧಕ್ಕೆ ಇಳಿದಿದೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳಿದೆಯಂತೆ. ಬಂಡವಾಳಶಾಹಿ ಯಲ್ಲಿ ಪ್ರಜಾಪ್ರಭುತ್ವ ನಿಜವಾದ ಕುರೂಪಕ್ಕೊಂದು ಕೈಗನ್ನಡಿ ಇದು

ಹಂಗೇರಿ, ಚೆಕ್ ಗಣರಾಜ್ಯ ಹಾಗೂ ಪೋಲಂಡ್‌ಗಳ ಮಹಿಳೆಯರ ಕಮ್ಯುನಿಸಂನ ಪತನ ತಮಗೇನೂ ಖುಷಿ ತಂದಿಲ್ಲ ಎಂದು ಹೇಳುತ್ತಿರುವುದಾಗಿ ಈ ಪಾಶ್ಚಿಮಾತ್ಯ ಸುದ್ದಿ ಸಂಸ್ಥೆ 'ಅಸೋಸಿಯೇಟ್ ಪ್ರೆಸ್' ಹೇಳುತ್ತದೆ. ಈಗಿನದ್ದು ಪುರುಷ ಪ್ರಾಬಲ್ಯದ, ಒರಟು ಗಂಡಸರ, ಕೀಳು ವ್ಯಾಪಾರೀಕರಣದ ಜಗತ್ತು, ಇದರಲ್ಲಿ ಮಹಿಳೆಯರ ಅವಶ್ಯಕತೆಗಳನ್ನು ನಿರ್ಲಕ್ಷಿಸಲಾಗುತ್ತದೆ ಎನ್ನುತ್ತಾರಂತೆ ಈ ಮಹಿಳೆಯರು. ಹೌದು ಬಂಡವಾಳಶಾಹಿಯೆಂದರೆ ಇದೇ. ಬಹುಶಃ ಈ ಮಹಿಳೆಯರಿಗೆ ಇದು ಗೊತ್ತಿಲ್ಲ, ಆದರೆ ಅವರ ಹಿಂದಿನ ಪೀಳಿಗೆಯ ಮಹಿಳೆಯರಿಗೆ ಇದು ಚೆನ್ನಾಗಿ ಗೊತ್ತಿತ್ತು.

ಮೇಲೆ ಹೇಳಿದ ಅಲ್ಬೇನಿಯಾದ ಮಹಿಳೆ ನತಾಶಾ ಕೆಲಸ ಕಳಕೊಂಡರೂ ಕಮ್ಯುನಿಸಂ ಪತನದಿಂದ ಬೇಸರವಿಲ್ಲವಂತೆ-ಏಕೆಂದರೆ ಆಕೆ ಈಗ ಗೆಳೆಯರೊಂದಿಗೆ ಹೋಟೇಲುಗಳಿಗೆ ಹೋಗಲು ಅವಕಾಶವಿದೆಯಂತೆ, ಗಿಡ್ಡ ಲಂಗಗಳನ್ನು ಧರಿಸಬಹುದಂತೆ. ಆದರೆ ಇದೇ ಮಹಿಳೆ "ನನ್ನ ಮಕ್ಕಳು ದೊಡ್ಡವರಾಗುತ್ತಿದ್ದಾರೆ. ಅವರಿಗೆ ಹೊಸ ಆಟಿಕೆಗಳು, ಸಿಹಿ ತಿಂಡಿಗಳು ಬೇಕು. ಆದರೆ ಅವರು ಬಯಸಿದ್ದನ್ನೆಲ್ಲಾ ಕೊಡಲಾಗುವುದಿಲ್ಲವಲ್ಲಾ ಎಂದು ಯೋಚಿಸುವುದೇ ಕಷ್ಟ" ಎಂದೂ ಹೇಳುತ್ತಾಳೆ ಎಂದು ಅದೇ ವರದಿ ಹೇಳುತ್ತದೆ! ಸಮಾಜವಾದ ಒದಗಿಸಿದ್ದ, ಈಗ ಬಂಡವಾಳಶಾಹಿ ಕಿತ್ತುಕೊಂಡಿರುವ ಸಾಮಾಜಿಕ ಭದ್ರತೆಯದು ಎಂದು ಆಕೆಗಿನ್ನೂ ತಿಳಿದಿಲ್ಲ ಎಂದು ನಾವು ಭಾವಿಸಬೇಕೆ? ಈ ಸಾಮ್ರಾಜ್ಯಶಾಹಿ ಸುದ್ದಿ ಸಂಸ್ಥೆ ನಾವು ಹಾಗೆ ಭಾವಿಸಬೇಕೆಂದು ಬಯಸುತ್ತವೆ.

ಐಕ್ಯರಂಗ

KRNM/BGS-405 MAG (2) PRB DECR 319-78/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಚುನಾವಣಾ ವಿಶ್ಲೇಷಣೆ-ಕರ್ನಾಟಕ ವಿಧಾನಸಭಾ ಚುನಾವಣೆಗಳು 1994

ಕಾಂಗ್ರೆ ಸೋಲಿಸಿ-ಬಿಜೆಪಿ ಮೂಲೆಗೊತ್ತಿ ಜಾತ್ಯಾತೀತ ಪಕ್ಷಗಳನ್ನು ಗೆಲ್ಲಿಸಿ ಎಂಬ ಸಿಪಿಐ(ಎಂ) ಕರೆಗೆ ಓಗೊಟ್ಟ ಕರ್ನಾಟಕದ ಮತದಾರ

ಹಿಂದಿನ ಸಂಚಿಕೆಗಳಲ್ಲಿ ಜಿಲ್ಲಾವಾರು ಚುನಾವಣಾ ವಿಶ್ಲೇಷಣೆಗಳನ್ನು ಓದಿದ್ದೀರಿ ಆದರೆ ಒಟ್ಟಾರೆ ಇಡೀ ರಾಜ್ಯದ ಚಿತ್ರಣ ಅವುಗಳಲ್ಲಿ ಸ್ಪಷ್ಟವಾಗಿ ಮೂಡಿಲ್ಲ. ಕಾಂಗ್ರೆಸ್‌ಗೆ ಈ ಚುನಾವಣೆಯಲ್ಲಿ ರಾಜ್ಯದಾದ್ಯಂತ ಆಗಿರುವ ಮುಖಭಂಗದ ವಿವರ, ಬಿಜೆಪಿ ಕರ್ನಾಟಕ ರಾಜ್ಯದಲ್ಲಿ ಮುನ್ನಡೆದಿದೆಯೆ, ಜನತಾದಳ ನಿಜವಾಗಿ ಗೆದ್ದಿದೆಯೆ, ಕೆಸಿಪಿ ಚುನಾವಣೆಯಲ್ಲಿ ಯಾವ ಪರಿಣಾಮ ಬೀರಿತು, ಒಟ್ಟು ಕರ್ನಾಟಕದ ಮತದಾರನ ತೀರ್ಪಿನ ಅರ್ಥವೇನು, ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕುವ ಲೇಖನ.

- ಶರತ್‌ಚಂದ್ರ

ಕಾಂಗ್ರೆಸ್‌ಗೆ ಎಂತಹ ಮುಖಭಂಗ!

ಇಡೀ ರಾಜ್ಯದ ಚುನಾವಣಾ ವಿಶ್ಲೇಷಣೆ ಮಾಡಿದರೆ ಕಣ್ಣಿಗೆ ರಾಚುವಂತೆ ಕಾಣುವ ಒಂದು ಅಂಶವೆಂದರೆ ಕಾಂಗ್ರೆಸ್‌ಗೆ ಆದ ಚಾರಿತ್ರಿಕ ಅವಮಾನಕಾರಿ ಮುಖಭಂಗ. ಕರ್ನಾಟಕದ ಚರಿತ್ರೆಯಲ್ಲೇ ಮೊದಲ ಬಾರಿಗೆ ಕಾಂಗ್ರೆಸ್ ಶೇಕಡಾ 40 ಮತಗಳಿಕೆ ಹಾಗೂ 40 ಸೀಟುಗಳಿಗಿಂತ ಕೆಳಕ್ಕೆ ಇಳಿದಿದೆ. ಕಾಂಗ್ರೆಸ್ 1985ರಲ್ಲಿ ಈವರೆಗೆ ಅತ್ಯಂತ ಕನಿಷ್ಟವಾಗಿದ್ದ 66 ಸೀಟುಗಳಿಗೆ ಕುಸಿದಾಗಲೂ ಅದರ ಮತಗಳಿಕೆ ಶೇಕಡಾ 41.1 ಇತ್ತು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಅಲ್ಲದೆ ಐದು ಜಿಲ್ಲೆಗಳಲ್ಲಿ ಅದು ಯಾವುದೇ ಸೀಟು ಗಳಿಸಿಲ್ಲ (ಉತ್ತರ ಕನ್ನಡ, ಕೊಡಗು, ಬೆಂಗಳೂರು ಗ್ರಾಮೀಣ, ಮಂಡ್ಯ, ಮೈಸೂರು) ಅದರ ಶೇಕಡಾ ಮತಗಳಿಕೆ 1985ರಿಂದ 1994ಕ್ಕೆ ಶೇಕಡಾ 18ರಷ್ಟು (ಕೋಷ್ಟಕ ನೋಡಿ) ಹಿಂದೆಂದೂ ಕಾಣದ ರೀತಿಯಲ್ಲಿ ಕುಸಿದಿದೆ. ಯಾವುದೇ ಜಿಲ್ಲೆಯಲ್ಲಿ ಅದು ಮತಗಳಿಕೆಯಲ್ಲಿ ಹೆಚ್ಚಳ ಸಾಧಿಸಿಲ್ಲ, ಕರಾವಳಿ ಕರ್ನಾಟಕದಲ್ಲಿ ಅದರ ಶೇಕಡಾಮತ ಕುಸಿತ ಇತರ ಪ್ರದೇಶಗಳಿಗಿಂತ ಕಡಿಮೆ ಇದೆ. ಅತ್ಯಂತ ಹೆಚ್ಚಿನ ಮತಗಳಿಕೆಯಲ್ಲಿ ಕುಸಿತ ಆಗಿರುವುದು ಕಾಂಗ್ರೆಸ್‌ಗೆ ಧಾರವಾಡದಲ್ಲಿ ಶೇಕಡಾ 35ರಷ್ಟು ಕುಸಿತ. ಕೇವಲ ಎರಡು ಜಿಲ್ಲೆಗಳಲ್ಲಿ ಬೀದರ್ ಮತ್ತು ಬೆಳಗಾವಿ -ಅದರ ಮತ ಕುಸಿತ ಶೇಕಡಾ 10ಕ್ಕಿಂತ ಕಡಿಮೆ ಇರುವುದು. ಕೇವಲ ಎರಡು ಜಿಲ್ಲೆಗಳಲ್ಲಿ -ಬಳ್ಳಾರಿ, ಚಿತ್ರದುರ್ಗ-ಕಾಂಗ್ರೆ ಮತಗಳಿಕೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. -ಅದೂ ಸ್ವಲ್ಪ ಶೇಕಡಾ ಮತಗಳ ಅಂತರದಿಂದ. ಇಡೀ ರಾಜ್ಯದ ಮತದಾರ ಕಾಂಗ್ರೆಸ್ಸನ್ನು ಸಾರಾಸಗಟಾಗಿ ತಿರಸ್ಕರಿಸಿರುವುದು ಸ್ಪಷ್ಟ. ಕಾಂಗ್ರೆಸ್ಸಿನ ಹಿಂದಿನ ಮಂತ್ರಿಮಂಡಲದ ಒಂದಿಬ್ಬರು ಬಿಟ್ಟರೆ ಎಲ್ಲರೂ ಪರಾಭವಗೊಂಡಿರುವುದು, ಹಲವಾರು ಗೌರವಾನ್ವಿತ ನಾಯಕರೂ ಸೋತಿರುವುದು-ಕಾಂಗ್ರೆ ಮೇಲೆ ಜನತೆಯ ಸಿಟ್ಟನ್ನು ಸ್ಪಷ್ಟವಾಗಿ ತೋರಿದೆ. ಅಲ್ಲದೆ ಕಾಂಗ್ರೆಸ್ಸಿನ ನೆಲೆಗಳಾಗಿದ್ದ ಹಿಂದುಳಿದ ವರ್ಗದವರು, ಮುಸ್ಲಿಂ, ದಲಿತರ ಬೆಂಬಲ ಕಳೆದುಕೊಂಡಿರುವುದು ಸ್ಪಷ್ಟ.

ಬಿಜೆಪಿ ಮುನ್ನಡೆ ಸಾಧಿಸಿದೆಯೆ?

ಮೊದಲ ನೋಟಕ್ಕೆ 1989 ವಿಧಾನ ಸಭೆ ಚುನಾವಣೆಗಳಿಗೆ ಹೋಲಿಸಿದರೆ ಬಿಜೆಪಿ ಭಾರೀ ಮುನ್ನಡೆ ಸಾಧಿಸಿದಂತೆ ಕಾಣಬರುತ್ತದೆ. (ಕೋಷ್ಟಕ) 36 ಸೀಟುಗಳ ಹೆಚ್ಚಳ ಮತ್ತು ಶೇಕಡಾ 12.5 ಮತ ಏರಿಕೆ ಗಮನಾರ್ಹವಾದದ್ದು ಆದರೆ ಕಾಂಗ್ರೆಸ್‌ಗೆ ನಿಜವಾದ ಬದಲಿ ನಾವೇ, ಕರ್ನಾಟಕದ ಮೊದಲ ಬಿಜೆಪಿ ಸರ್ಕಾರ ಈ ಭಾರಿ ರಚಿಸುತ್ತೇವೆ ಎಂದಿದ್ದರ ಹಿನ್ನೆಲೆಯಲ್ಲಿ ಬಿಜೆಪಿಯ ಮುನ್ನಡೆ ತೀರಾ ಇಲ್ಲವೇ ಇಲ್ಲ ಎನ್ನಬಹುದು. ಅಲ್ಲದೆ 1991 ಕ್ಕೆ ಹೋಲಿಸಿದರೆ ಶೇಕಡಾ ಮತ ಗಳಿಕೆಯಲ್ಲಿ ಬಿಜೆಪಿಗೆ ಶೇಕಡಾ 12ರಷ್ಟು ನಷ್ಟವಾಗಿದೆ. ಅಲ್ಲದೆ 17 ವಿಧಾನಸಭೆ ಕ್ಷೇತ್ರಗಳಲ್ಲಿ ಮೊದಲನೆಯ ಸ್ಥಾನ ಕಳೆದುಕೊಂಡಿದೆ. ಸೀಟುಗಳಿಕೆಯಲ್ಲಿ ಎರಡನೇ ಸ್ಥಾನ ಪಡೆದು ಪ್ರಮುಖ ವಿರೋಧ ಪಕ್ಷವಾಗಿದ್ದರೂ, ಕಾಂಗ್ರೆಸ್ಸಿಗಿಂತ ಶೇಕಡಾ 10 ರಷ್ಟು ಮತಗಳಿಕೆಯಲ್ಲಿ ಹಿಂದುಳಿದಿದೆ ಎಂಬುದನ್ನು ಗಮನಿಸಬಹುದು ಅದರ ಬೆಂಬಲದಲ್ಲಿ ಭಾರೀ ಪ್ರಾದೇಶಿಕ ವ್ಯತ್ಯಾಸಗಳಿವೆ. ಕರಾವಳಿ ಕರ್ನಾಟಕದಲ್ಲಿ ಅದು ಹೆಚ್ಚಿನ ಬೆಂಬಲ (ಶೇಕಡಾ 33.2) ಗಳಿಸಿದರೆ, ಉತ್ತರ ಕರ್ನಾಟಕದಲ್ಲಿ ಅದು ಬಲಹೀನವಾಗಿದೆ. (ಶೇಕಡಾ 11.7). ಕೋಲಾರ, ಮಂಡ್ಯ, ಬೆಳಗಾಂ, ರಾಯಚೂರು ಜಿಲ್ಲೆಗಳಲ್ಲಿ ಅದರ ಬೆಂಬಲ ಶೇಕಡಾ 10ಕ್ಕಿಂತಲೂ ಕಡಿಮೆ. ಕೊಡಗು, ಶಿವಮೊಗ್ಗ, ಬೆಂಗಳೂರು ನಗರ ಹಾಗೂ ಕರಾವಳಿ ಜಿಲ್ಲೆಗಳಲ್ಲಿ ಅದರ ಬೆಂಬಲ ಸೇಕಡಾ 25ಕ್ಕಿಂತಲೂ ಹೆಚ್ಚು. ಠೇವಣಿ ಕಳೆದು ಕೊಂಡವರ ಸಂಖ್ಯೆಯಲ್ಲಿ ಬಿಜೆಪಿ, ಕೆಸಿಪಿ ಬಲವಾದ ಪೈಪೋಟಿ ನಡೆಸಿತ್ತು. ಅಯೋಧ್ಯಾ ಕಾಂಡದ ನಂತರ ಕೋಮುವಾದದ ಬೇರುಗಳು ಬಲವಾಗಿ ಬಿಟ್ಟಿರುವ, ಉರ್ದುವಾರ್ತೆ ವಿರೋಧಿ ಚಳುವಳಿಯಲ್ಲಿ ಪುನಃ ಕೋಮುಗಲಭೆಗಳಿಗೆ ಬಲಿಯಾಗಿರುವ 17 ಕ್ಷೇತ್ರಗಳಲ್ಲಿ ಬಿಜೆಪಿ ಆಯ್ಕೆಯಾಗಿದೆ. ಉರ್ದುವಾರ್ತೆ ಗಲಭೆಯನ್ನು ಸರ್ಕಾರ ಸವಾಲಾಗಿ ಸ್ವೀಕರಿಸಿ ಹತ್ತಿಕ್ಕಿದ್ದಲ್ಲಿ ಬಿಜೆಪಿಯ ವಿಧಾನ ಸಭಾ ಸದಸ್ಯರು ಇನ್ನೂ ಕಡಿಮೆ ಇರುತ್ತಿದ್ದರು. ಕಾಂಗ್ರೆಸ್‌ಗೆ ತಾನೇ ನಿಜವಾದ ಬದಲಿ ಎಂಬಲ್ಲಿ ಪೋಸು ಹೊಡೆಯುತ್ತಿದ್ದ ಬಿಜೆಪಿಗೆ ಜನ ಸ್ಪಷ್ಟವಾಗಿ ಹೇಳಿದ್ದಾರೆ. -ಎಲ್ಲೆಲ್ಲಿ ಕಾಂಗ್ರೆಸ್‌ಗೆ ಜಾತ್ಯಾತೀತ ಬದಲಿ ಇದೆಯೋ ಅಲ್ಲಿ ನಿಮಗೆ ಸ್ಥಾನವಿಲ್ಲ.

ಜನತಾದಳ ನಿಜವಾಗಿ ಗೆದ್ದಿದೆಯೇ?

ಜನತಾದಳ ಮತ್ತು ಹಿಂದಿನ ಜನತಾ ಪಕ್ಷದ ಬಣಗಳ ಐಕ್ಯತೆಯಿಂದ ಅದು ಕಾಂಗ್ರೆಸ್‌ಗೆ ಬದಲಿ ಸರ್ಕಾರ ನಡೆಸಬಲ್ಲುದು ಎಂಬ ಜನರ ಭಾವನೆ ಅದರ ವಿಜಯಕ್ಕೆ ಮುಖ್ಯ ಕಾರಣ. 1985ರ ವಿಧಾನಸಭೆ ಚುನಾವಣೆಗಳಿಗಿಂತ ಜನತಾದಳದ ಶೇಕಡಾವಾರು ಮತಗಳಿಕೆ ಶೇಕಡಾ 5¥9ರಷ್ಟು ಹೆಚ್ಚಿದೆ. 1981ರ ಲೋಕಸಭಾ ಚುನಾವಣೆಗೆ ಹೋಲಿಸಿದರೆ ಶೇಕಡಾ 14.7ರಷ್ಟು ಹೆಚ್ಚಿದೆ. ಆದರೆ 1989ರ ಜನತಾಪಕ್ಷದ ಮತವನ್ನು ಗಣನೆಗೆ ತೆಗೆದುಕೊಂಡರೆ ನಿಜವಾಗಿಯೂ ಶೇಕಡಾ 5.4ರಷ್ಟು ಮತಗಳಿಕೆ ಕುಸಿದಿದೆ. ಜನತಾದಳ ಗಳಿಸಿದ ಮತಗಳಿಕೆಯ ಬೆಂಬಲ ರಾಜ್ಯಾದ್ಯಂತ ಹೆಚ್ಚು ಸಮವಾಗಿ ಹರಡಿದೆ. ಕರಾವಳಿ ಜಿಲ್ಲೆಗಳು, ಕೊಡಗು ಮತ್ತು ಶಿವಮೊಗ್ಗದಲ್ಲಿ ಅದು ಎರಡನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ದಕ್ಷಿಣ ಕರ್ನಾಟಕದಲ್ಲಿ ಸಾಮಾನ್ಯವಾಗಿ ಒಳ್ಳೆಯ ಮತಗಳಿಕೆ ಸಾಧಿಸಿದೆ. ಮಂಡ್ಯ, ಮೈಸೂರು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜನತಾದಳದ ಮತಗಳಿಕೆ ಶೇಕಡಾ 40 ದಾಟಿದೆ.

ಜನತಾದಳ ಸಾಮಾನ್ಯವಾಗಿ ಒಕ್ಕಲಿಗ ಮತ್ತು ಲಿಂಗಾಯಿತ ಇವೆರಡು ಪ್ರಬಲ ಕೋಮುಗಳ ಬೆಂಬಲ ದೊಡ್ಡ ಪ್ರಮಾಣದಲ್ಲಿ ಪಡೆದಿದೆ ಎಂಬ ಭಾವನೆಯಿದೆ. ಆದರೆ ಜನತಾದಳಕ್ಕೆ ಮುಸ್ಲಿಮರು, ದಲಿತರು ದೊಡ್ಡ ಸಂಖ್ಯೆಯಲ್ಲಿ ಮತದಾನ ಮಾಡಿರುವುದು ಕಂಡು ಬರುತ್ತದೆ. ಪರಿಶಿಷ್ಟ ಜಾತಿಗಳಿಗೆ ಮೀಸಲಾದ ಕ್ಷೇತ್ರದಲ್ಲಿ ಜನತಾದಳ ಆಶ್ಚರ್ಯಕಾರಿ ಯಶಸ್ಸು ಗಳಿಸಿದೆ. 32 ಇಂತಹ ಕ್ಷೇತ್ರಗಳಲ್ಲಿ 24 ಕ್ಷೇತ್ರಗಳಲ್ಲಿ ಜನತಾದಳ ಜಯಗಳಿಸಿದೆ. ಅಲ್ಲದೆ ಮೀಸಲು ಕ್ಷೇತ್ರಗಳಲ್ಲಿ ಅದರ ಮತಗಳಿಕೆ (ಶೇಕಡಾ 38.3) ಇತರ ಕ್ಷೇತ್ರಗಳಿಗಿಂತ (ಶೇಕಡಾ 32.4) ಗಮನಾರ್ಹವಾದ ಪ್ರಮಾಣದಲ್ಲಿ ಹೆಚ್ಚಿದೆ. ಜನತಾದಳದ ಒಟ್ಟು ಮತಗಳಿಕೆ ಭಾರಿ ಗಮನಾರ್ಹ ಅಲ್ಲ ಎಂಬುದು ನಿಜವಾದರೂ, ವಿವಿಧ ಪಕ್ಷಗಳಿಗೆ ಮತಚಲಾಯಿಸುವಾಗ ಜನತಾದಳದ ಸರ್ಕಾರಕ್ಕೆ ನಿಚ್ಚಳ ಬಹುಮತ ಬರಬೇಕು ಎಂಬ ಅಂಶ ಕರ್ನಾಟಕದ ಮತದಾರ ಗಮನದಲ್ಲಿಟ್ಟುಕೊಂಡಿದ್ದಾನೆ ಎಂಬುದು ಕಂಡು ಬರುತ್ತದೆ. ಭಾರಿ ದೊಡ್ಡ ಅಲೆ ಅಲ್ಲದಿದ್ದರೂ ಜನತಾದಳದ ಅಲೆ ಇದ್ದಿದ್ದು ಸ್ಪಷ್ಟ

ಕೆಸಿಪಿ ಪರಿಣಾಮ ಬೀರಿತೆ?

ಕೆಸಿಪಿ ಚುನಾವಣೆಯಲ್ಲಿ ಭಾರಿ ಪರಿಣಾಮ ಬೀರುತ್ತದೆ ಎಂದು ನಿರೀಕ್ಷಿಸಲಾಗಿಲ್ಲವಾದರೂ, ಅದರ ಮತಗಳಿಕೆ ಭಾರಿ ಹೆಚ್ಚಿದರೆ ಜನತಾದಳಕ್ಕೆ ನಿಚ್ಚಳ ಬಹುಮತ ಬರದೆ ಹೋಗಬಹುದು ಎಂಬ ಸಂದೇಹ ಇತ್ತು. ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಾತ್ರ ಕೆ.ಸಿ.ಪಿ. ಶೇಕಡಾ 10ಕ್ಕಿಂತ ಹೆಚ್ಚು ಮತಗಳಿಸಿ, ಫಲಿತಾಂಶದ ಮೇಲೆ ವಿಶೇಷ ಪರಿಣಾಮ ಬೀರಿತು. ಕೆ.ಸಿ.ಪಿ. ಯಾವ ಪಕ್ಷದ ಮತವನ್ನು ಕಸಿಯಿತು ಎಂಬುದು ಹೇಳುವುದು ಕಷ್ಟವಾದರೂ, ಸುಮಾರು 50 ಕ್ಷೇತ್ರಗಳಲ್ಲಿ ಅದು ಕಾಂಗ್ರೆ ಗೆಲ್ಲುವ ಅವಕಾಶಕ್ಕೆ ಅಡ್ಡಿ ಬಂದಿದೆ ಎಂದು ಹೇಳಬಹುದು.

ಒಟ್ಟು ಕರ್ನಾಟಕದ ಮತದಾರನ ತೀರ್ಪು ಏನು?

ಕಾಂಗ್ರೆಸ್ಸಿನ ಗುಂಪುಗಾರಿಕೆ, ಒಳಜಗಳ, ಭ್ರಷ್ಟಾಚಾರದಿಂದ ಕರ್ನಾಟಕದ ಮತದಾರ ಬೇಸತ್ತಿದ್ದ ನಿಜ. ಆದರೆ ಮುಖ್ಯವಾಗಿ ಆತ ಕಾಂಗ್ರೆಸ್ಸಿನ ಮುಖಭಂಗವಾಗುವಂತೆ ಸೋಲಿಸಿದ್ದು ಆ ಪಕ್ಷದ ಬಡವ-ವಿರೋಧಿ ಆರ್ಥಿಕ ನೀತಿಗಳಿಗಾಗಿ ಎಂಬುದಕ್ಕೆ ಸಂದೇಹವೇ ಇಲ್ಲ, ಇನ್ನು ಯಾವುದೇ ರೀತಿಯಲ್ಲಿ ಕಾಂಗ್ರೆಸ್ಸಿನ ಈ ಭಾರಿ ಮುಖಭಂಗವನ್ನು ವಿವರಿಸಲು ಸಾಧ್ಯವಿಲ್ಲ. ರೇಶನ್‌ನಲ್ಲಿ ಕಡಿತ, ಬೆಲೆ ಏರಿಕೆ, ಗೊಬ್ಬರ, ಕೀಟನಾಶಕಗಳ ಮೇಲೆ ಸಬ್ಸಿಡಿ ಕಡಿತ, ಮುಲಾಜಿಲ್ಲದೆ ಶ್ರೀಮಂತರ-ಪರವಾದ ಆರ್ಥಿಕ ಧೋರಣೆ ಈ ಬಾರಿ ಜನಸಾಮಾನ್ಯರಿಗೆ ಚೆನ್ನಾಗಿ ಅರ್ಥವಾಗಿದೆ ಎಂಬುದು ಸ್ಪಷ್ಟ. ಈ ನೀತಿಗಳಿಗೆ ಸ್ಪಷ್ಟ ಬದಲಿ ನೀಡದಿದ್ದರೂ, ಭಾರಿ ಹೋರಾಟಗಳನ್ನು ಸಂಘಟಿಸದಿದ್ದರೂ ಜನತಾದಳದ ನೀತಿಗಳು ಹೆಚ್ಚು ಜನ-ಪರ ಎಂದು ಜನರಿಗೆ ಅನ್ನಿಸಿದ್ದು ಸ್ಪಷ್ಟವಿದೆ. ಆಂಧ್ರದ ತೆಲುಗು ದೇಶಂನಂತೆ, ಸ್ಪಷ್ಟವಾಗಿ ಕಾಂಗ್ರೆ ನೀತಿಗಳನ್ನು ವಿರೋಧಿಸಿ, ಬದಲಿ ನೀಡಿದ್ದರೆ 'ಜನತಾದಳದ ಅಲೆ' ಇನ್ನೂ ಬಲವಾಗಿರುತ್ತಿತ್ತು ಎಂಬುದಕ್ಕೆ ಸಂಶಯವಿಲ್ಲ.

ಕೋಮುವಾದದ ಬಗ್ಗೆ (ಅದರಲ್ಲೂ ಬಾಬ್ರಿ ಮಸೀದಿ ನಾಶದ ಬಗ್ಗೆ) ಕಾಂಗ್ರೆಸ್ಸಿನ ಎಡಬಿಡಂಗಿ ಧೋರಣೆ ಸಹ ಜನರಲ್ಲಿ ಭಾರೀ ಆಕ್ರೋಶ ಉಂಟುಮಾಡಿತ್ತು. ಉರ್ದು ವಾರ್ತಾ-ವಿರೋಧಿ ಚಳುವಳಿಯನ್ನು ನಿರ್ವಹಿಸಿದ ರೀತಿಯಂತೂ ಮುಸ್ಲಿಮರನ್ನೂ, ಎಲ್ಲಾ ಜಾತ್ಯಾತೀತರನ್ನೂ ರೊಚ್ಚಿಗೆಬ್ಬಿಸಿತ್ತು. ತನ್ನ ಕೆಲವು ಪ್ರದೇಶಗಳಲ್ಲಿ ಬಿಜೆಪಿ ಅದರ ಪರವಾಗಿ ಬಳಕೆ ಮಾಡಲು ಸಾಧ್ಯವಾದರೂ, ಸಾಮಾನ್ಯ ಮತದಾರ ಜಾತ್ಯಾತೀತ ನೀತಿಗೆ ಬಲವಾದ ಮತ ನೀಡಿದ್ದಾನೆ. ಇಲ್ಲಿ ಸಹ ಜನತಾದಳದ ಜಾತ್ಯಾತೀತ ನೀತಿ, ಕಾಂಗ್ರೆಸ್ಸಿಗಿಂತ ಹೆಚ್ಚು ಪ್ರಾಮಾಣಿಕವಾದದ್ದು ಎಂದು ಅನ್ನಿಸಿದ್ದು, ಆ ಪಕ್ಷದ ವಿಜಯದಲ್ಲಿ ಒಂದು ಅಂಶವಾಗಿದೆ.

ಬಿಜೆಪಿ ಮೂರನೇ ಶಕ್ತಿಯಾಗಿ ಹೊಮ್ಮಿದರೂ, ಅದರ ಜನಬೆಂಬಲದಲ್ಲಿ ಮುಖ್ಯ ಅಂಶ ಕೋಮುವಾದ ಬಡಿದೆಬ್ಬಿಸುವ ತಂತ್ರ. ಅದನ್ನು ಪದೇ ಪದೇ ಬಳಕೆ ಮಾಡಿದಾಗ 1991ಕ್ಕಿಂತ 1994ರಲ್ಲಿ ಕ್ಷೀಣವಾಗುತ್ತಾ ಹೋಗಿ ತೀರಾ ಇಲ್ಲವಾಗುವ ಸಾಧ್ಯತೆ ಇಲ್ಲದಿಲ್ಲ. ಕೋಮುಗಲಭೆಗಳು ನಡೆದಲ್ಲಿ ಮಾತ್ರ ಅದು ಗೆಲ್ಲಲು ಸಾಧ್ಯವಾಗುವುದು ಇದಕ್ಕೆ ಉದಾಹರಣೆ. ಆರ್ಥಿಕ ನೀತಿಗಳಲ್ಲಿ ಅದರ ಎಡಬಿಡಂಗಿತನ ಬಯಲಾಗುತ್ತಾ ಹೋದಂತೆ ಸಹ ಅದರ ಜನಬೆಂಬಲ ಕುಸಿಯಬಹುದು. ಜನತಾದಳ ಎಡ ಪಕ್ಷಗಳ ಜತೆ ಹೊಂದಾಣಿಕೆ ನಡೆಸಿ ಆರ್ಥಿಕ ನೀತಿ-ಮತ್ತು ಕೋಮುವಾದದ ವಿರುದ್ಧ ಸ್ಪಷ್ಟ ನೀತಿ ಕಾರ್ಯಕ್ರಮಗಳನ್ನು ಜನತೆಯ ಮುಂದೆ ಮಂಡಿಸಿದ್ದರೆ ಬಿಜೆಪಿಯನ್ನು ಇನ್ನಷ್ಟು ಬಲಹೀನಗೊಳಿಸುವುದು ಸಾಧ್ಯವಿತ್ತು ಎನ್ನುವುದು ಸ್ಪಷ್ಟ. ಮುಖ್ಯ ವಿರೋಧ ಪಕ್ಷವಾಗಿ ಬಿಜೆಪಿ ಇನ್ನೂ ಒಂದು ಸಾಕಷ್ಟು ಪ್ರಬಲ ರಾಜಕೀಯ ಶಕ್ತಿಯಾಗಿರುವುದು ಅಪಾಯಕಾರಿಯೇ.

ಸಿಪಿಐ, ಸಿಪಿಐ(ಎಂ), ರೈತಸಂಘ, ಆರ್ಥಿಕ ನೀತಿ ಹಾಗೂ ಕೋಮುವಾದದ ವಿರುದ್ಧ ಸ್ಪಷ್ಟ ನಿಲುಮೆ ತೆಗೆದುಕೊಂಡು ಸಾಕಷ್ಟು ಜನ-ಪರ ಹೋರಾಟ ನಡೆಸಿದ್ದರೂ ಈ ಪಕ್ಷಗಳಿಗೆ ಸಾಕಷ್ಟು ಪ್ರಾತಿನಿಧ್ಯ ಬರದೆ ಇರುವುದರ ಬಗ್ಗೆ ವಿವರಣೆ ಕೊಡಬೇಕಾಗಿದೆ. ಕಾಂಗ್ರೆಯನ್ನು ಸೋಲಿಸಿ, ನಿಚ್ಚಳ ಬಹುಮತ ಇರುವ ಸರ್ಕಾರವನ್ನು ತರಬೇಕೆಂಬ ಮತದಾರನ ತವಕದಿಂದ ಸರ್ಕಾರ ಸ್ಥಾಪಿಸಲು ಸಾಧ್ಯವಿಲ್ಲದಿರುವ ಪಕ್ಷಗಳಿಗೆ ಮತದಾರ ಮತ ಹಾಕಿಲ್ಲ ಎನ್ನುವುದು ಹೆಚ್ಚು ಸರಿಯಾದೀತು.

ಕೋಷ್ಟಕ

ಪಕ್ಷ	ಸೀಟುಗಳು			ಶೇಕಡಾ ಮತಗಳಿಕೆ			ಶೇ. ಮತ ಗಳಿಕೆಯಲ್ಲಿ ವ್ಯತ್ಯಾಸ	ಶೇ. ಮತ ಗಳಿಕೆಯಲ್ಲಿ ವ್ಯತ್ಯಾಸ
	1989	1991	1994	1989	1991	1994		
ಜನತಾದಳ		15	115	27.3	18.5	33.2	+5.9	+14.7
ಜನತಾ ಪಕ್ಷ	2	3	-	-	-	11.3	-	-
ಕಾಂಗ್ರೆ	178	139	36	45.1		27.3	-18	-
ಬಿಜೆಪಿ	4	57	40	4.2	28.7	16.7	+12.5	-12
ಕೆ.ಸಿ.ಪಿ	-	10		7.1	-	-	-	-